
ISSN: 2249-2437 Volume : 8, Issue : 3, Pages 52, 7th Dec. 2018 Annual Subscription ₹.500/-

# DIMENSIONS OF EDUCATION

An International Journal of Education and Research Quarterly

## Teaching of English Literature with ICT : An Innovative approach



## Pedagogy Innovations : Teaching in a New Pedgogy Era

## Learning and Teaching with Media and Technology

## A Study of Academic achievement in Relation to Mental ability of secondary school students



# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

7ನೇ ಡಿಸೆಂಬರ 2018 ಸಂಪುಟ : 8 ಸಂಚಿಕೆ : 3

ಪ್ರಕಾಶಕರು :

**ಜಯದೇವ ಮೈ. ಮೆಣಸಗಿ**

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಸಂಪಾದಕರು :

**ಡಾ. ಎನ್. ಬಿ. ಕೊಂಗವಾಡ**

ಸಹಸಂಪಾದಕರು :

**ಡಾ. ಎಸ್. ಬಿ. ಯಾದವಾಡ**



ಸಂಪಾದಕ ಮಂಡಳಿ :

- **ಡಾ. ಶ್ರೀಮತಿ ಎನ್. ಲಕ್ಷ್ಮಿ**
  ಡೀನ್ ಶಿಕ್ಷಣ ನಿಖಾಯ ಕರಾಮುವಿ, ಮೈಸೂರು.
- **ಡಾ. ಎಸ್. ಎಸ್. ಪಾಟೀಲ**
  ಡೀನ್ ಶಿಕ್ಷಣ ನಿಖಾಯ ಕುವೆಂಪು ವಿ.ವಿ. ಶಿವಮೊಗ್ಗ
- **ಡಾ. ಎ. ವ್ಹಿ. ಬಮಗೊಂಡ**
  ಬಿ.ಎಲ್.ಡಿ.ಇ. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ
- **ಡಾ. ಶ್ರೀಮತಿ ಶೋಭಾ ನಾಯ್ಕರ**
  ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ.
- **ಡಾ. ಬಿ. ಎಲ್. ಲಕ್ಕಣ್ಣವರ**
  ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
- **ಜಗನ್ನಾಥ್ ಢಾಂಗೆ**
  ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.



## Shikshan Soudha

*A Quarterly Education and Research Journal*

**Vidyanidhi Prakashana ®**
**Sri Sivakumar Agency ®**
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com


The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

**ಶಿಕ್ಷಣ ಸೌಧ**

## ಅಂತರಂಗ Inside

### ಸೈದ್ಧಾಂತಿಕ (Articles)


05 ಎಸ್. ವ್ಹಿ. ಪಾಟೀಲ ಅವರ ಕಾದಂಬರಿ ಸಾಹಿತ್ಯ – ಪ್ರೊ. ಬಿ.ಎಚ್. ಬುಳ್ಳಣ್ಣವರ

07 ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಆಲಾಪ – ವಾಸಂತಿ ಮುತುಗೂರ, ಡಾ. ವೀರಣ್ಣ ಆರ್. ಹೂಗಾರ

08 ತಾಳಗಳ ಲಿಪಿ ಪದ್ಧತಿಯ ಮಹತ್ವ – ನಾಗಭೂಷಣ ಎಸ್. ಗುಡ್ಡದಮಠ

10 ಗಿರೀಶ ಕಾರ್ನಾಡರ ನಾಟಕಗಳ ತಾತ್ವಿಕ ಅಧ್ಯಯನ – ಡಾ. ಮಲ್ಲಯ್ಯ ಸಂಡೂರು

14 ಶಿವರಾಮ ಕಾರಂತರ ಸಾಹಿತ್ಯದಲ್ಲಿನ ಶೈಕ್ಷಣಿಕ ಮೌಲ್ಯಗಳು – ರವಿ ಹೆಚ್.

17 ಸ್ಥಳನಾಮಗಳು – ಪ್ರೊ. ವ್ಹಿ. ಎಂ. ಕಿತ್ತೂರ

18 ಶಿಸ್ತಿನ ಮೂಲಕತರಗತಿ ನಿರ್ವಹಣೆ – ಡಾ. ಗಾಯತ್ರಿ ಆರ್. ಕೋಟೆಣ್ಣವರ

20 ಕುಲಗೋಡ ತಮ್ಮಣ್ಣ ಪಾರಿಜಾತದ ಕೊರವಂಜಿ – ಡಾ. ರಾಜು ಕಂಬಾರ ಕೌಜಲಗಿ

23 ಬದಲಾದ ಶಿಕ್ಷಣ ವ್ಯವಸ್ಥೆಯ ಚಿಂತನೆಯಲ್ಲಿ "ತೆರೆದ ಪುಸ್ತಕ ಪರೀಕ್ಷಾ ಪದ್ಧತಿ" ಸಾಧಕ–ಬಾಧಕಗಳು – ಡಾ. ಬಿ. ಜಿ. ಧಾರವಾಡ

24 ಧಾರವಾಡ ಜಿಲ್ಲೆಯ ಜನಾಂಗವಾಚಿ ಸ್ಥಳನಾಮಗಳು – ರಾಜೇಂದ್ರ ಹ. ಹೊನ್ನಾಪೂರ

26 ಕನ್ನಡಾಂಬೆಯ ಸಂಸ್ಕೃತಿ – ಪ್ರೊ. ಎಸ್. ಎಮ್. ಮುಳ್ಳೂರ


### ಸಂಶೋಧನೆಗಳು (Research Articles)


28 ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಮತ್ತು ಸಾಧನಾ ಅಭಿಪ್ರೇರಣೆ ಸಹಸಂಬಂಧದ ಅಧ್ಯಯನ – ಬೈರಸಿದ್ದಪ್ಪ ಜಿ.ಇ., ಡಾ. ಹೆಚ್. ವಿ. ವಾಮದೇವಪ್ಪ

34 ಪ್ರೌಢಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಪ್ರಶಿಕ್ಷಣಾರ್ಥಿಗಳಲ್ಲಿ ಪರಿಸರದ ಅರಿವಿನ ಮೇಲೆ ಸ್ವಯಂ ಕಲಿಕಾ ಸಾಮಗ್ರಿಗಳ ಪರಿಣಾಮಕಾರಿತ್ವದ ಕುರಿತು ಅಧ್ಯಯನ – ಜಿ. ಬಿ. ರಾಜಪ್ಪ, ಡಾ. ಎಂ. ಎಂ. ಪಟ್ಟಣಶೆಟ್ಟಿ

40 ಪ್ರೌಢ ಶಾಲೆಯ ಬಾಲಕರು ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಯ ಕುರಿತು ಅಧ್ಯಯನ – ಶ್ರೀಮತಿ ಕೆ. ಕವಿತ

43 "ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶೀಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ–ವಿಶ್ಲೇಷಣಾತ್ಮಕ ಅಧ್ಯಯನ – ಚಂದ್ರಪ್ಪ ಬಿ., ಡಾ. ಎಂ.ಎಂ. ಪಟ್ಟಣಶೆಟ್ಟಿ


### ಶಿಕ್ಷಣ ತಜ್ಞರು (Educationists)


48 ಬರ್ಟ್ರಾಂಡ ರಸ್ಸೆಲ್ – ಆರ್. ಎಸ್.ಪಾಟೀಲ

## ಸಂಪಾದಕೀಯ

# ಪ್ರೌಢ ಶಿಕ್ಷಣದ ಮಹತ್ವ

ಪ್ರೌಢ ಶಿಕ್ಷಣವನ್ನು ಬೇರೆ ಬೇರೆ ಲೇಖಕರು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಬ್ರಾಸನ್ ಮಹಾಶಯರ ಪ್ರಕಾರ ಪ್ರೌಢ ಶಿಕ್ಷಣವೆಂದರೆ ಶೈಕ್ಷಣಿಕ ಉದ್ದೇಶಕ್ಕಾಗಿ ತಮ್ಮ ಸಾಮಾನ್ಯ ಜೀವನದಲ್ಲಿ ಜನರು ತೊಡಗಬಹುದಾದ ಎಲ್ಲ ಚಟುವಟಿಕೆಗಳ ಮುಖಾಂತರ ತಮ್ಮ ಬೌದ್ಧಿಕ ಬೆಳವಣಿಗೆಯನ್ನು ಸಾಧಿಸುವದು.

ಶಿಕ್ಷಣ ವ್ಯವಸ್ಥೆಯು ಬಹು ಮುಖ್ಯ ಘಟ್ಟವೆಂದರೆ ಪ್ರೌಢಶಾಲಾ ಹಂತ, ಈ ಶಿಕ್ಷಣಕ್ಕೆ ಕಾಲಿಟ್ಟ ಮಕ್ಕಳ ತಾರುಣ್ಯ ಅರುಣೋದಯವಾಗುವ ಕಾಲ ಅಂದರೆ ಮಕ್ಕಳ ಮಾನಸಿಕ, ದೈಹಿಕ ವಿಕಾಸ ತೀವ್ರ ಗತಿಯಲ್ಲಿ ಬೆಳೆಯುವುದರಿಂದ ಇದಕ್ಕೆ ತಕ್ಕ ಬುನಾದಿ ಹಾಕಿ ಕೊಡುವುದು ಬಹಳ ಮುಖ್ಯವಾಗಿರುತ್ತದೆ. ಉಚ್ಚ ಶಿಕ್ಷಣ ವ್ಯವಸ್ಥೆಯ ಗುಣಮಟ್ಟವು ಮಕ್ಕಳಿಗೆ ಪ್ರೌಢಶಾಲಾ ಹಂತದಲ್ಲಿ ಹಾಕಿಕೊಟ್ಟಿರುವ ಭದ್ರ ಬುನಾದಿಯ ಮೇಲೆ ನಿಂತಿರುತ್ತದೆ. ಹಾಗಾಗಿ ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢಶಾಲಾ ಶಿಕ್ಷಣ ಸುಧಾರಿಸಿದ ಹೊರತು ಯಾವ ಉನ್ನತ ಶಿಕ್ಷಣವೂ ಯಶಸ್ವಿಯಾಗಲಾರದು.

1960 ರ ಬಂಗಾಳಿ ಸೆಕಂಡರಿ ಶಿಕ್ಷಣ ಕಾಯ್ದೆಯು "ಪ್ರಾಥಮಿಕ ಶಿಕ್ಷಣ ಮುಗಿಸಿದ ಎಲ್ಲಾ ವಿದ್ಯಾರ್ಥಿಗಳ ಅಗತ್ಯತೆಗೆ ಅನುಗುಣವಾಗಿರುವಂತದ್ದು ಮತ್ತು ಸಾಮಾನ್ಯ ತಾಂತ್ರಿಕ, ಕೈಗಾರಿಕೆ, ವ್ಯವಸಾಯ ಮತ್ತು ವಾಣಿಜ್ಯ ಇತ್ಯಾದಿ ವಿಷಯಗಳನ್ನೊಳಗೊಂಡ ಶಿಕ್ಷಣವಾಗಿದೆ".

ಪ್ರೌಢಶಾಲಾ ಶಿಕ್ಷಣವು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ಮಧ್ಯಂತರ ಘಟ್ಟವಾಗಿರುವುದರಿಂದ ಇದರ ಪಾತ್ರ ಮತ್ತು ಕಲ್ಪನೆ ವಿಶಿಷ್ಟವಾದುದ್ದಾಗಿದೆ. "ಮಗುವಿನ ತಾರುಣ್ಯಾವಸ್ಥೆಯಲ್ಲಿ ನೀಡುವ ಶಿಕ್ಷಣವೇ ಪ್ರೌಢ ಶಿಕ್ಷಣ" ಎಂದು ಕರೆಯಬಹುದು.

**- ಡಾ. ಎನ್.ಬಿ. ಕೊಂಗವಾಡ**
**ಸಂಪಾದಕರು**

"ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರಿಂದ
2017ರ ಅತ್ಯುತ್ತಮ ಪ್ರಕಾಶನವೆಂದು ಆಯ್ಕೆ ಮಾಡಿದ ಕನ್ನಡ ಪುಸ್ತಕ ಪ್ರಾಧಿಕಾರದ
ಅಧ್ಯಕ್ಷರಿಗೂ ಮತ್ತು ಆಯ್ಕೆ ಮಾಡಿದ ಮಂಡಳಿ ಸರ್ವ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ
ನಮ್ಮ "ವಿದ್ಯಾನಿಧಿ ಪ್ರಕಾಶನ"ದ ವತಿಯಿಂದ ಅಭಿನಂದನೆಗಳು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಎಸ್. ವ್ಹಿ. ಪಾಟೀಲ ಅವರ ಕಾದಂಬರಿ ಸಾಹಿತ್ಯ

✍ **ಪ್ರೊ. ಬಿ.ಎಚ್. ಬುಳ್ಳಣ್ಣವರ,** ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ,, ಗದಗ.

ಎಸ್. ವ್ಹಿ. ಪಾಟೀಲರು ಜನಿಸಿದ್ದು ಈಗಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗುಂಡೂರು ಎಂಬ ಚಿಕ್ಕ ಗ್ರಾಮದಲ್ಲಿ, ದಿನಾಂಕ 15–6–1960ರಲ್ಲಿ ತುಂಗಭದ್ರ ಎಡದಂಡೆ ಕಾಲುವೆಗೆ ನೀರು ಬಿಡುವ ಸಂದರ್ಭದಲ್ಲಿ ಜನಿಸಿದ ಮಗುವಿಗೆ ತಂದೆ–ತಾಯಿಗಳಾದ ವೀರನಗೌಡ–ಶಿವಲಿಂಗಮ್ಮ ಹೆಸರಿಟ್ಟದ್ದು ತಮ್ಮ ಆರಾಧ್ಯ ದೈವ ಕಲ್ಬುರ್ಗಿ ಶರಣಬಸವೇಶ್ವರನೆಂದು. ಹಡೆದವರು ಇವರಾದರೂ ಚಿಕ್ಕ ಮಗುವನ್ನೇ ದತ್ತಕ ಪಡೆದು ಪಾಲನೆ–ಪೋಷಣೆ ಮಾಡಿದವರು ವಿರುಪಾಕ್ಷಗೌಡ–ಕರವೀರಮ್ಮನವರು. ಹೀಗಾಗಿ ಅಧಿಕೃತವಾಗಿ ಪಾಟೀಲರ ಸರ್ವಸ್ವವೇ ಆದವರು ಪಡೆದವರೆ. ಹುಟ್ಟಿದ್ದು ವೀರನಗೌಡ–ಶಿವಲಿಂಗಮ್ಮ ಅವರ ಮಡಿಲಲ್ಲಿ ಆದರೂ ಬೆಳೆದದ್ದು ಬೇರೊಬ್ಬರ ಮಡಿಲಲ್ಲಿ. ಪಾಟೀಲ ಅವರ ವಾಸ್ತವ ಬದುಕೆ ಕಾದಂಬರಿಯಂತೆ ಇರುವುದು, ಇವರ ಬದುಕೆ ಇವರ ಸಾಹಿತ್ಯಿಕ ಬರವಣಿಗೆಗೆ ಪ್ರೇರಣೆಯನ್ನು ಒದಗಿಸಿರಬಹುದು. ಆದ್ದರಿಂದ ಅವರು ಕನ್ನಡ ಅನೇಕ ಕಾದಂಬರಿಕಾರರಿಂದ ಪ್ರೇರಿತರಾಗಿ ಎರಡು ಕಾದಂಬರಿಗಳನ್ನು ಬರೆದು ಓದುಗರ ಮೆಚ್ಚುಗೆಗೆ ಪಾತ್ರರಾಗಿರುವರು. ಈ ನಿಟ್ಟಿನಲ್ಲಿ ಪತ್ನಿ ವಾಣಿಶ್ರೀಯವರೂ ಸಾಥ್ ನೀಡಿದ್ದರಿಂದ 'ತ್ಯಾಗಜೀವಿ ಮತ್ತು ಕಂಬನಿ ಧಾರೆ' ಕಾದಂಬರಿಗಳು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿತವಾದವು.

ಸಾಹಿತ್ಯದ ಎಲ್ಲಾ ಪ್ರಕಾರದಲ್ಲಿ ಕೈಯಾಡಿಸಿದರೂ ಅತ್ಯಂತ ಸಂತೋಷ ನೀಡುವುದು ರಂಗಭೂಮಿಯೇ ಎಂಬುದು ಇವರ ಅನಿಸಿಕೆ. ಯಾವತ್ತೂ ಗ್ರಾಮೀಣ ರಂಗಭೂಮಿ ಸ್ಥಗಿತಗೊಳ್ಳಬಾರದೆಂದು ಕಳಕಳಿಯಿದ್ದುದಕ್ಕಾಗೇ ಮೇಲಿಂದ ಮೇಲೆ ರಂಗಗೀತೆಗಳನ್ನು, ಏಕಾಂಕ ನಾಟಕಗಳನ್ನು, ಹಾಗೇ ರಂಗ ಕಲಾವಿದರನ್ನು ಸನ್ಮಾನಿಸಿ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ, ಈಗ ರಂಗ ಚಟುವಟಿಕೆ ಅಷ್ಟಿಲ್ಲದ ಬಗ್ಗೆ ವ್ಯಥೆ ಪಡುತ್ತಾರೆ. ಆದರೂ ಸಾಹಿತ್ಯದ ಒಂದು ಭಾಗವಾದ ಕನ್ನಡ ಕಾದಂಬರಿಗಳ ಕುರಿತು ಇವರ ಪ್ರೀತಿ ಕಡಿಮೆಯದೇನಲ್ಲ. ಎರಡು ಕಾದಂಬರಿಗಳನ್ನು ರಚಿಸಿ ಕನ್ನಡ ಕಾದಂಬರಿ ಸಾಹಿತ್ಯ ಲೋಕವನ್ನು ಸಮೃದ್ಧ ಮಾಡಿರುವರು. ಅವರು ರಚಿಸಿದ ಎರಡೂ ಕಾದಂಬರಿಗಳ ಅವಲೋಕನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

## 1. ತ್ಯಾಗಜೀವಿ

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ವಲಸೆ ಬಂದ ತಮ್ಮ ಪೂರ್ವಿಕರ ಕುರಿತಾದ ಕಥಾ ಹಂದರವನ್ನು ಈ ಕಾದಂಬರಿಯು ಒಳಗೊಂಡಿದೆ. ಆಂಧ್ರದ ಗಡಿಭಾಗ ಬಳ್ಳಾರಿ ಸಮೀಪದ ಹಳ್ಳಿಯೊಂದರಲ್ಲಿ ಕೂಲಿ ಮಾಡುತ್ತಿದ್ದ ಅನಕ್ಷರಸ್ಥ ಮಹಿಳೆ ಅಯ್ಯಮ್ಮ ಯೌವನದಲ್ಲೇ ಗಂಡನನ್ನುಕಳೆದುಕೊಳ್ಳುತ್ತಾಳೆ. ಇದ್ದೊಬ್ಬ ಮಗನಾದ ವಿರೂಪಾಕ್ಷಿಯ ಜೊತೆಗೂಡಿ ಗಂಗಾವತಿ ಭಾಗಕ್ಕೆ ಬಂದು ನೆಲೆಸುತ್ತಾಳೆ. ದಿನಾಲೂ ತಾಯಿ ಮಗ ಈರ್ವರೂ ದುಡಿದು ಆಗಿನ ಕಾಲದ ವರಮಾನದಲ್ಲಿ ಉಳಿತಾಯ ಮಾಡುತ್ತಾರೆ. ಅದು ಬಟ್ಟು, ದಂಬಡಿ, ಬೆಳ್ಳಿ, ರೂಪಾಯಿ, ಬಿಲ್ಲಿಗಳ ಕಾಲವಾಗಿತ್ತು. ಹೈದ್ರಾಬಾದ ನಿಜಾಮರ ಆಡಳಿತದಲ್ಲಿ ಮುಂದೆ ಬಂದ ಕಾಶೀಂ ರಜ್ವಿ ಎಂಬ ರಜಾಕಾರನ ಹಾವಳಿಯ ಚಿತ್ರಣವೂ ಅದರಲ್ಲಿದೆ.

ಅನಕ್ಷರಸ್ಥ ಮಹಿಳೆಯಾದ ಅಯ್ಯಮ್ಮನಿಗೆ ತಿಳಿದದ್ದು ಮೈ ಮುರಿದು ದುಡಿಯುವದು; ಹೀಗೆ ಕೂಡಿಟ್ಟ ಹಣದಲ್ಲಿ ಎಮ್ಮೆ ಹಸುಗಳನ್ನು ಕೊಂಡಳಾದರೂ ಅದರಿಂದ ಬಂದ ಹೈನುಗಾರಿಕೆಯನ್ನು ಹಣಕ್ಕಾಗಿ ಮಾರಲಿಲ್ಲ. ಅಷ್ಟು ಹೊತ್ತಿಗಾಗಲೇ ವಿರೂಪಾಕ್ಷಿ ಪ್ರೌಢಾವಸ್ಥೆಗೆ ಬಂದಿರುತ್ತಾನೆ. ರಾಗಿ ಬರದಲ್ಲಿ ತತ್ತರಿಸಿದಂತೆ ಡೋಗಿ ಬರದಲ್ಲಿ ಜನರು ಸಾಲು ಸಾಲಾಗಿ ಸತ್ತಿದ್ದನ್ನು ಕೂಡ ಇದರಲ್ಲಿ ಮನ ಕಲುಕುವಂತೆ ತೋರಿಸಲಾಗಿದೆ. ಅನಾವೃಷ್ಟಿಯಾಗಿ ದನಕರುಗಳಿಗೆ, ಜನರಿಗೆ ಕುಡಿಯಲು ನೀರಿಲ್ಲದ ಸಂದರ್ಭವನ್ನು ಅಲ್ಲಲ್ಲಿ ನಾಟಿದ ಕಳ್ಳಿ ಗಿಡಿದ ಮೇಲಿನ ಆಲಿತೊಪ್ಪಲವನ್ನು ತಿಂದು ಬದುಕುವಾಗ, ಆಹಾರ ನೀರಿಲ್ಲದೆ ಸತ್ತವರ ಸಾಲು ಸಾಲು ಡೋಗಿಗಳು ಸಾರಿ ಹೇಳುವಂತೆ ದಯೆಯ ಕೊರತೆಯೇ ದಾರಿದ್ರ್ಯಕ್ಕೆ ಮೂಲ" ಎಂದು ಕಾದಂಬರಿಕಾರ ಚಿತ್ರಿಸಿರುವುದು ಕೂಡ ಮಾನವೀಯತೆಯ ಕಣ್ಣಾಗಿ ಪರಿಣಮಿಸುತ್ತದೆ.

ಇಂಥಹದರಲ್ಲಿ ತಾಯಿ ಮಗ ಇಬ್ಬರು ಆಳವಾದ ಭಾವಿಯನ್ನು ತೋಡಿ ಜನರಿಗೆ, ಪಶುಗಳಿಗೆ ನೀರು ಹಾಕುವ ಪುಣ್ಯದ ಕೆಲಸದಲ್ಲಿ ಭಾಗಿಯಾಗುವುದು, ಹಾಗೆ ಏಳೆಂಟು ಎಮ್ಮೆಗಳನ್ನು ಪ್ರಾಣದಂತೆ ರಕ್ಷಣೆ ಮಾಡಿ ಅದರಿಂದ ಬಂದ ಹಾಲು ಮೊಸರನ್ನು ಮಜ್ಜಿಗೆ ಮಾಡಿ ಜನರಿಗೆ ಉಚಿತವಾಗಿ ಹಂಚಿ ಜನರನ್ನು ರಕ್ಷಣೆ ಮಾಡುವುದು, ಅಖಂಡ ಮಾನವೀಯತೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಮುಂದೆ ಸಕಾಲದಲ್ಲಿ ಮಳೆಯಾಗಿ ಬೆಳೆಯಿಂದ ಜನ ತಣಿಯುವುದು, ದಾನ ಧರ್ಮದಲ್ಲಿ ಪಾಲ್ಗೊಳ್ಳುವುದು. ಮಳೆಗಾಗಿ ದೈವದೊಲುಮೆಗಾಗಿ ಸಪ್ತ ಭಜನೆಯನ್ನು ಗುಡಿಯಲ್ಲಿ ನಿರಂತರ ಮಾಡಿ ದೇವರ ಕರುಣೆಯನ್ನು ಸಂಪಾದಿಸುವ ಭಕ್ತಿ ಭಾವದ ದಿನಮಾನಗಳನ್ನು ಇದರಲ್ಲಿ ಮನೋಜ್ಞವಾಗಿ ಹೆಣೆಯಲಾಗಿದೆ. ವಯಸ್ಸಿಗೆ ಬಂದ ವಿರೂಪಾಕ್ಷಿಗೆ ತಾಯಿ ಅಯ್ಯಮ್ಮ ಮದುವೆ ಮಾಡುತ್ತಾಳೆ. ಆದರೆ ಸೊಸೆ ಗರ್ಭವತಿಯಾಗಿ ಹೆರಿಗೆಯ ಸಮಯದಲ್ಲಿ ತಾಯಿ ಮಗು ಈರ್ವರು ಅಸು ನೀಗುವುದು. ಮುಂತಾದ ದುಃಖದ ಪ್ರಸಂಗಗಳು ಅಯ್ಯಮ್ಮಳನ್ನು ಅಧೀರಳನ್ನಾಗಿಸುತ್ತವೆ. ಸುಮಾರು ನೂರಾರು ಮೈಲು ಬಂಡಿಯನ್ನು (ಚಕ್ಕಡಿಯನ್ನು) ಬಾಡಿಗೆಗೆ ಹೂಡಿ ಅದರಿಂದ ಬಂದ ಹಣದಲ್ಲಿ ಜಮೀನು ಕೊಂಡು ವ್ಯವಸಾಯದ ಪೂಜೆಯಲ್ಲಿ ತೊಡಗಿದ ವಿರೂಪಾಕ್ಷಿಗೆ ಲಕ್ಷ್ಮಿ ಕಟಾಕ್ಷ ದೊರೆಯುತ್ತದೆ.

ರಾಯಚೂರವರೆಗೆ ಚಕ್ಕಡಿಯಲ್ಲಿ ಹತ್ತಿಯನ್ನು ಹೇರಿಕೊಂಡು ಹೋಗುವುದು. ಹಗಲೂರಾತ್ರಿ ಹೊಲದಲ್ಲಿ ದುಡಿಯುವುದು. ಮುಂದೆ ಈ ಭಾಗದಲ್ಲಿ ತುಂಗಭದ್ರೆಯ ಕೃಪೆಯಾಗುವಾಗ ಅಕಾಲ ಮೃತ್ಯುವಿಗೀಡಾದ ಎತ್ತಿನ ಬದಲು ತಾನೆ ನೊಗಕ್ಕೆ ಹೆಗಲುಕೊಟ್ಟು ಗದ್ದೆಯ ಮಡಿಗಳನ್ನು ಸಮತಟ್ಟಾಗಿ ಮಾಡಿದುದು ಅತ್ಯಂತ ರೋಚಕ ಸಂಗತಿಗಳೆಂಬಂತೆ ಮೂಡಿ ಬಂದಿವೆ. ಕಥಾವಸ್ತು, ವೈವಿಧ್ಯತೆಯ ಜೊತೆಗೆ ಆ ಕಾಲಮಾನದ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗಳನ್ನು, ರಾಜಕೀಯದ ದಬ್ಬಾಳಿಕೆಯನ್ನು, ಧಾರ್ಮಿಕ ನಂಬಿಕೆ ಆಚರಣೆಗಳನ್ನು ಸಾಂದರ್ಭಿಕವಾಗಿ ತೋರಿಸಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿರುಪಾಕ್ಷಿ ದುಡಿಯುವದರಲ್ಲಿ ಶೂರನಾಗಿ ಹಣ ಬಳಕೆಯಲ್ಲಿ ಕೃಪಣನಾಗಿ ಹಾಗೆ ದಯೆ, ದಾನದಲ್ಲಿ, ವಿಶಾಲ ಹೃದಯದ ಧಾರಾಳತನದ ಕೊಡುಗೈ ದೊರೆಯಾಗಿ ರೂಪಗೊಂಡಿರುವುದು ಇದರಲ್ಲಿ ವ್ಯಕ್ತವಾಗಿದೆ. ವೀರಶೈವ ಧರ್ಮದ ಸಾರ ತಿರುಳನ್ನು ತಿಳಿಯದಿದ್ದರೂ, ದಿನಾಲೂ ಎರಡು ಸಲ ಇಷ್ಟ ಲಿಂಗಾರ್ಚನೆಯನ್ನು ಹಾಗೆ ಹಸಿದು ಬಂದವರನ್ನು ದೇವರೆಂದೇ ಬಗೆದು ಅನ್ನದಾನ ಮಾಡಿದುದು ಅನಕ್ಷರಸ್ಥನಾದರೂ, ಕೂಡಿಟ್ಟ ಹಣದ ಸದ್ವಿನಿಯೋಗದ ದಾರಿಯನ್ನು ತಾನೇ ಕಂಡುಕೊಂಡು ಮದುವೆಗಾಗಿ, ರೋಗರುಜಿನದ ಔಷಧೋಪಚಾರದ ಸಲುವಾಗಿ ನೀಡಿ ಕೃತಾರ್ಥನಾದುದು ಆತನ ದೈವೀ ಗುಣದ ಹಿರಿಮೆಯನ್ನು ಎತ್ತಿ ಹಿಡಿಯುತ್ತದೆ.

ಮುಂದೆ ಅನಿವಾರ್ಯವಾಗಿ ವಂಶದ ಉದ್ಧಾರಕ್ಕಾಗಿ ಮಗನಿಗೆ ಮರು ಮದುವೆ ಮಾಡುತ್ತಾಳಾದರೂ ಆಕೆಗೂ ಮಕ್ಕಳು ಉಳಿಯುವುದಿಲ್ಲ. ಸೊಸೆಯಾಗಿ ಬಂದ ಕರವೀರಮ್ಮ ಮಗನಿಗಿಂತಲೂ ಅರ್ಧಕ್ಕಿಂತಲೂ ಹೆಚ್ಚಿನ ವಯಸ್ಸಿನ ಕಡಿಮೆ ಅಂತರವುಳ್ಳವಳಾಗಿದ್ದಳು. ಆದರೆ ಗುಣದಲ್ಲಿ ಹಿರಿತನವನ್ನು ಹೊಂದಿ ದಾನ, ದಯೆ, ಅಂತಃಕರುಣೆಯ ಸಾಕಾರ ರೂಪವಾಗಿದ್ದಳು ಎಂಬುದನ್ನು ಘಟನಾವಳಿಗಳ ಮೂಲಕ ದೃಷ್ಟಾಂತಗೊಳಿಸಲಾಗಿದೆ. ಆಡು ಭಾಷೆಯ ಶೈಲಿಯನ್ನು ಕಾದಂಬರಿ ಹೊಂದಿದ್ದರೂ ಎಲ್ಲಿಯೂ ಬೇಸರವಾಗದ ರೀತಿಯಲ್ಲಿ ಓದಿಸಿಕೊಂಡು ಹೋಗುವ ಶಕ್ತಿಯನ್ನು ಪಡೆದುದು ಈ ಕೃತಿಯ ಹೆಗ್ಗಳಿಕೆಯಾಗಿದೆ. ಅತ್ಯಂತ ಕಡು ಬಡತನ ಅನುಭವಿಸಿದಾಗ ತಮ್ಮ ವ್ರತಾಚರಣೆಯನ್ನು ಬಿಡದೆ ನಿರಂತರ ಶಿಸ್ತನ್ನು ಕಲಿಯುತ್ತ ಹೋದುದು, ಗಾಂಧೀಜಿಯವರು ಹೇಳಿದ ವಾಕ್ಯವನ್ನು ನೆನಪಿಸುವಂತಹದ್ದಾಗಿದೆ. 'ಬಡತನ ಶಿಸ್ತನ್ನು ಕಲಿಸುವ ಶಾಲೆ' ಎಂಬುದನ್ನು ಕಾದಂಬರಿಕಾರರು ಸೂಚ್ಯವಾಗಿ ತೋರಿದ್ದಾರೆ.

ಮುಂದೆ ಸಿರಿವಂತಿಕೆ ಬಂದಾಗ, ಗಾದೆಯ ಮಾತನ್ನು ನೆನಪಿಸುವ ಅಯ್ಯಮ್ಮ "ಸಿರಿವಂತಿಕೆ ಬಂದಾಗ ಕರೆದು ದಾನ ಮಾಡು, ಬೀಗಿ ನಡೆಯುವುದು ಮಾನವ ಧರ್ಮವಲ್ಲ. ಬಾಗಿ ನಡೆಯುವುದೇ ಬದುಕೆಲ್ಲ" ಎನ್ನುವ ಅನುಭವದ ಮಾತುಗಳು ಹೃದಯವನ್ನು ತಟ್ಟುತ್ತವೆ. ಹಾಗೆ ಬಸವತತ್ವ ಅವರಿಗರಿವಿಲ್ಲದೆ ಅನುಷ್ಠಾನಗೊಂಡುದದನ್ನು ಕಾದಂಬರಿಯು ಸಾರಿಸಾರಿ ಹೇಳುತ್ತದೆ ಉಂಬ ಜಂಗಮರನ್ನು ನಡೆ ಎನ್ನದೆ ಕರೆದು ಕುಳ್ಳಿರಿಸಿ ಉಪಚರಿಸಿದುದು. ಹಾಲು, ಮಜ್ಜಿಗೆ, ಅಮೃತದ ಸಮಾನ ಅದನ್ನು ಹಣಕ್ಕಾಗಿ ಮಾರಾಟ ಮಾಡಬಾರದೆಂಬ ನುಡಿಗಳು ಈ ನೆಲದ ಸಂಸ್ಕೃತಿಯ ಜೀವಂತಿಕೆಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ತಲೆಬರಹವೇ ಸೂಚಿಸಿದಂತೆ ತ್ಯಾಗಕ್ಕಾಗೇ ಬದುಕಿ ಬಾಳಿದ ತಾಯಿ–ಮಗ–ಸೊಸೆಯರ ಜೀವಂತ ನಿದರ್ಶನದ ಪಾತ್ರಗಳು ಮನುಕುಲದ ಹಿರಿಮೆ ಗರಿಮೆಯಾಗಿ ಮಾರ್ಗದರ್ಶಿಯೆನಿಸುತ್ತವೆ. ಇತ್ತೀಚಿನ live and let live 'ನೀನೂ ಬಾಳು ಇತರರನ್ನು ಬಾಳಗೊಡು' ಎಂಬುದನ್ನು ಮೀರಿ ಇತರರಿಗಾಗೆ ಬದುಕು, ಬಾಳು ಸವೆಸು ಧನ್ಯನಾಗು ಎಂಬುದನ್ನು ಈ ಕೃತಿಯಲ್ಲಿ ಹೃದಯಂಗಮವಾಗಿ ಚಿತ್ರಿಸಿರುವುದು ಕಾದಂಬರಿಕಾರನ ಸೃಜನಶೀಲ ಬರಹಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಕಾದಂಬರಿ ಪ್ರಕಾರದಲ್ಲಿ ಕೃಷಿಗೈದ ಪಾಟೀಲರು ಕಲ್ಪನಾ ಲೋಕದ ಕಥೆಯನ್ನು ಹೆಣೆಯದೆ ವಾಸ್ತವ ಬದುಕಿನ ಹೂರಣದಲ್ಲಿ ಸಾರ್ಥಕತೆಯ ಹೋಳಿಗೆಯನ್ನು ಮಾಡಿ ಜಂಗಮರಾಧನೆ ಮಾಡಿದುದು. ಇವನಾರವನೆನ್ನದೆ ಇವನಮ್ಮವನೆಂದು ಅಪ್ಪಿಕೊಳ್ಳುವುದೆ ಒಪ್ಪಿಕೊಳ್ಳುವುದೇ ಈ ನೆಲದ ಗುಣಧರ್ಮವೆಂದು ತಿಳಿಸಿದುದು. ತ್ಯಾಗಜೀವಿ ಕಾದಂಬರಿಯ ಮುಖಾಂತರ ಸರ್ವಕಾಲಿಕ ಸತ್ಯವನ್ನು ಸಾರಿದುದು ಬಹುಕಾಲ ಮನದಲ್ಲಿ ನಿಲ್ಲುವಂತಹದ್ದಾಗಿದೆ.

## 2. ಕಂಬನಿ ಧಾರೆ

ಹಿಂದಿನ ತ್ಯಾಗಜೀವಿ ಕಾದಂಬರಿಯಂತೆ ವಾಸ್ತವದ ಅನೇಕ ಘಟನೆಗಳಿಂದ ಈ ಕೃತಿಯನ್ನು ರಚಿಸಲಾಗಿದೆ ಎಂದು ಕಾದಂಬರಿಕಾರರು ತಮ್ಮ ನಿವೇದನೆಯಲ್ಲಿ ಹೇಳಿದ್ದಾರೆ. ಮೊದಲಿನ ಕಾದಂಬರಿ ಮಾನವ ಧರ್ಮದ ಸಾರ್ಥಕ ಬದುಕನ್ನು ಚಿತ್ರಿಸಿದರೆ ಇದರಲ್ಲಿ ವ್ಯಕ್ತಿಯೋರ್ವನ ಸಾರ್ಥಕ ಬದುಕಿನ ಜೊತೆಗೆ ಆಂತರಿಕ ತುಮುಲವನ್ನು ತವಕ ತಲ್ಲಣವನ್ನು ಹಿಡಿದಿಡಲಾಗಿದೆ. ಮಕ್ಕಳಾಗದ ವಿರುಪಾಕ್ಷಗೌಡ ಕರವೀರಮ್ಮ ದಂಪತಿಗಳಿಗೆ ದತ್ತುಮಗನಾಗಿ ಬಂದ ಶರಣಬಸವನ ಜೀವನ ಸಾಧನೆಯ ಕುರಿತಾದ ಪ್ರಸಂಗಗಳನ್ನು ಈ ಕಾದಂಬರಿಯು ಹೊಂದಿದೆ. ಹಿಂದಿನ ಕಾದಂಬರಿಯ ಮುಂದುವರಿದ ಭಾಗದಂತೆ ಕಂಡರೂ ಈ ಕಾದಂಬರಿಯ ಕಥಾವಸ್ತುವೇ ಬೇರೆಯಾಗಿದೆ.

ಮಕ್ಕಳಿಲ್ಲದಕ್ಕಾಗಿ ದತ್ತಕ ಪಡೆದ ವಯೋವೃದ್ಧ ದಂಪತಿಗಳಾದ ವಿರುಪಾಕ್ಷಗೌಡ ಕರವೀರಮ್ಮನವರಿಗೆ ಶರಣಬಸವ ಮುದ್ದಿನ ಕಣ್ಮಣಿಯಾಗುತ್ತಾನೆ. ಬಾಲ್ಯದಲ್ಲಿ ಮಗ ಏನು ಬೇಡಿದರೂ ಕೊಡಿಸಿದ ತಂದೆ ತಾಯಿಗಳು ಹದಿನಾರರ ಹೊಸಲಲ್ಲಿ ಅಡಿಯಿಟ್ಟ ಮಗ ಪ್ರೇಮ ಪಾಶದಲ್ಲಿ ಬಿದ್ದಾಗ ಅವನ ಜೀವನದ ಮಹತ್ವದ ಕೋರಿಕೆಯನ್ನು ತಿರಸ್ಕರಿಸಿದುದು ಕಾದಂಬರಿಯ ತಿರುವಿಗೆ ಮಹತ್ವತೆ ಬರುತ್ತದೆ. ಪ್ರೀತಿಸಿದ ಹುಡುಗಿಯನ್ನು ನಡುನೀರಲ್ಲಿ ಕೈ ಬಿಡಲಾರೆನೆಂಬ ಶರಣ ಬಸವನ ರೋಧನ ಅರಣ್ಯ ರೋಧನವಾಗುತ್ತದೆ.

ಮುಪ್ಪಾವಸ್ಥೆಯಲ್ಲಿ ಬೇರೆ ರಕ್ತದ ಕೂಸನ್ನು ತಂದು ಸಾಕಿ ಬೆಳೆಸಿ ಈಗ ಇನ್ನಾರೋ ದೂರದ ಹುಡುಗಿಯನ್ನು ತಂದು ಕಟ್ಟಿದರೆ ತಮ್ಮನ್ನು ಇಳಿವಯಸ್ಸಿನಲ್ಲಿ ಕಡೆಗಣಿಸಿ ಬಿಡಬಹುದೆಂಬ ಯಾವುದೋ ಕುರುಡು ಆಲೋಚನೆಯಲ್ಲಿ ಕರವೀರಮ್ಮ ಮಗನ ಪ್ರೀತಿಯನ್ನು ಮಾನ್ಯ ಮಾಡದೆ ತನ್ನ ತವರು ಬಳ್ಳಿಯ ತಮ್ಮನ ಏಕೈಕ ಮಗಳು ಎಂಟು ವರ್ಷದ ಹಸುಳೆಯನ್ನು ಮಗನಿಗೆ ತಂದು ಕಟ್ಟುತ್ತಾಳೆ. ನಿಜವಾಗಿ ಹಡೆದ ಮಾತೆಯಾದರೆ ಮಗನ ಯಾವ ರೋಧನವನ್ನು, ಕಹಿಮಾತನ್ನು ಮನದಲ್ಲಿ ಇಟ್ಟುಕೊಳ್ಳಲಾರಳು. ಪಡೆದ ತಾಯಿ ತನ್ನ ಯಾವುದೇ ವರ್ತನೆಯಿಂದ ನೊಂದುಕೊಂಡರೆ ತನ್ನ ಬಾಳು ವ್ಯರ್ಥ ಎಂದು ಬಗೆದ ಶರಣಬಸವ ತಾಯಿಯ ಮಾತನ್ನು ಪಾಲಿಸುವುದು. ಹಡೆದ ಹಾಗೂ ಪಡೆದ ತಾಯಿಯರೀರ್ವರ ಸೇವೆ ಮಾಡಿ ಕೃತಾರ್ಥನಾದುದು ಈ ಕೃತಿಯ ಮೂಲ ಕಥಾವಸ್ತುವಾಗಿದೆ. ತನ್ನೊಡಲಲ್ಲಿ ಎಂಥಹ ದಾವಾಗ್ನಿ ದಹಿಸಿದರೂ ತೋರಗೊಡದೆ ಚಿಕ್ಕ ವಯಸ್ಸಿನಿಂದಲೇ ತನಗಾಗಿ ಬಾಳದೆ ಕುಟುಂಬಕ್ಕಾಗಿ ಬಾಳಿದುದು ಕಥಾನಾಯಕ ಶರಣಬಸವನ ಹಿರಿಮೆಯನ್ನು ತೋರುತ್ತದೆ. ತನ್ನ ಹೃದಯದಲ್ಲಿ ಕಷ್ಟದ ಕಡಲುಕ್ಕಿದರೂ ಸದಾಅಕ್ಕರೆ ಪ್ರೀತಿಯನ್ನು ಮೆರೆದು ಹಡೆದವ್ವನ ಹಾಗೂ ಪಡೆದವ್ವನ ಕಣ್ಣೀರು ಒರೆಸಿದುದು 'ಮಾತೃ ದೇವೋ ಭವ' ಎಂಬ ಆರ್ಯೋಕ್ತಿಯನ್ನು ದೃಷ್ಟಾಂತಗೊಳಿಸಿದೆ.

ಬಾಲ್ಯದಲ್ಲಿ ಮಕ್ಕಳಿಗೆ ಬಣ್ಣದ ಬುಗುರಿಯಿಂದ ಹಿಡಿದು ಎಲ್ಲಾ ಆಟಿಗೆ ಸಾಮಾನುಗಳ ತನಕ ಮಕ್ಕಳ ಇಚ್ಛೆಗನುಗುಣವಾಗಿ ಕೊಡಿಸಿದ ಹಿರಿಯರು ಪ್ರೌಢಾವಸ್ಥೆಗೆ ಕಾಲಿಟ್ಟಾಗ ಅವರವರ ಜೀವನದ ಸಂಗಾತಿಯನ್ನು ಆರಿಸಿಕೊಳ್ಳಲಿಕ್ಕೆ ಅವಕಾಶ ಕೊಡದೇ ಇರುವುದನ್ನು ಆ ಪಾತ್ರದ ಮೂಲಕ ಕಾದಂಬರಿಕಾರ ಪ್ರಶ್ನಿಸುತ್ತಾರೆ. ಸತಿ–ಪತಿ ಬಾಳ ಬಂಡಿಯ ಎರಡು ಗಾಲಿಗಳಿದ್ದಂತೆ. ಎರಡೂ ಸಮನಾಗಿ ಚಲಿಸಿದಾಗಲೇ ಗುರಿ ತಲುಪುವದೆಂಬ ಸಂದೇಶ ಈ ಕಾದಂಬರಿಯಲ್ಲಿದೆ.

ಎಸ್. ವ್ಹಿ. ಪಾಟೀಲ ಅವರು ಕನ್ನಡ ಸಾಹಿತ್ಯದಲ್ಲಿ ಕೇವಲ ನಾಟಕಕಾರರಾಗಿ ಮಾತ್ರ ಗುರುತಿಸಲ್ಪಡುತ್ತಿರುವ ಈ ಸಂದರ್ಭದಲ್ಲಿ ಅವರ ಕಾದಂಬರಿ ಸಾಹಿತ್ಯದ ಪರಿಚಯವನ್ನು ಮಾಡಬೇಕೆಂಬ ಉದ್ದೇಶ ಈ ಲೇಖನದ್ದಾಗಿದೆ. ಅವರು ಇನ್ನೂ ಹೆಚ್ಚು ಕಾದಂಬರಿ ರಚಿಸುವುದರ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಶ್ರೇಷ್ಠ ಕಾದಂಬರಿಗಾರರಾಗಿಯೂ ಗುರುತಿಸುವಂತಾಗಲಿ ಎಂಬ ಹಾರೈಕೆ.

– 47 ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಆಲಾಪ

✍ **ವಾಸಂತಿ ಮುತುಗೂರ,** ಸಂಶೋಧನಾ ವಿದ್ಯಾರ್ಥಿ, ಸಂಗೀತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

✍ **ಡಾ. ವೀರಣ್ಣ ಆರ್. ಹೂಗಾರ,** ಮಾರ್ಗದರ್ಶಕರು, ಸಂಗೀತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವು ಸುದೀರ್ಘವಾದ ಇತಿಹಾಸ ಮತ್ತು ಪರಂಪರೆಯನ್ನು ಒಳಗೊಂಡಿದೆ. ನಮ್ಮ ಭಾರತೀಯ ಸಂಗೀತದಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಉನ್ನತ ಸ್ಥಾನವನ್ನು ಕೊಡಲಾಗಿದೆ ಎಂದು ಅಭಿಪ್ರಾಯಗಳು ಕೇಳಿಬರುತ್ತವೆ. ಶಾಸ್ತ್ರೀಯ ಸಂಗೀತವೆಂದರೆ ಶಾಸ್ತ್ರಬದ್ಧವಾಗಿ ಗಾಯನ ಮಾಡುವುದೇ ಶಾಸ್ತ್ರೀಯ ಗಾಯನವೆಂದು ತಿಳಿದುಕೊಳ್ಳಬಹುದು. ಶಾಸ್ತ್ರೀಯ ಗಾಯನದಲ್ಲಿ ಹಲವಾರು ಪ್ರಕಾರದ ಗಾಯನಗಳಿವೆ. ಹಾಗೆ ಹಲವಾರು ಪ್ರಕಾರದ ವಾದ್ಯಗಳೂ ಕೂಡ ನಮ್ಮ ಭಾರತೀಯ ಶಾಸ್ತ್ರೀಯ ಸಂಗೀತ ಇತಿಹಾಸದಲ್ಲಿ ಪ್ರಚಲಿತದಲ್ಲಿವೆ. ಗಾಯನ ಮತ್ತು ವಾದನ ಸಂಗೀತದ ಒಂದು ಮುಖ್ಯ ಅಂಗವಾಗಿದ್ದು, ಗಾಯನ ಕ್ರಿಯೆ ಮತ್ತು ವಾದನ ಕ್ರಿಯೆಯಲ್ಲಿ ಹಲವಾರು ವ್ಯತ್ಯಾಸಗಳನ್ನು ಕಾಣಬಹುದು. ಗಾಯನದಲ್ಲಿ ನಾವು ಮೊದಲಿಗೆ ಹೇಳುವುದಾದರೆ ಆಲಾಪ ಎಂಬ ಒಂದು ಕ್ರಿಯೆಯು ಪ್ರಚಲಿತದಲ್ಲಿದೆ. ಆಲಾಪವೆಂಬುದು ತನ್ನದೆ ಆದ ಒಂದು ಮಹತ್ವವನ್ನು ಹೊಂದಿದೆ. ಹಾಗೆಯೇ "ಆಲಾಪ"ವೆಂದರೆ ಯಾವುದೇ ಒಂದು ರಾಗದ ಸ್ವರಗಳನ್ನು ಕಲಾವಿದರ ವಿಚಾರಶಕ್ತಿ, ಬುದ್ಧಿಶಕ್ತಿಯಿಂದ ಶಾಸ್ತ್ರಬದ್ಧವಾಗಿ ಸಣ್ಣ-ಸಣ್ಣ ಜೋಡಣೆಗಳನ್ನು ಆಕಾರಯುಕ್ತವಾಗಿ ಪ್ರಸ್ತುತ ಪಡಿಸುವುದು ಎಂದು ಹೇಳಬಹುದು. ಸ್ವರಗಳನ್ನು ಅಂದರೆ ಸ, ಗ, ಪ, ದ ಈ ರೀತಿ ಹೇಳಿಕೊಳ್ಳದೆ ಈ ಸ್ವರಗಳನ್ನು "ಆ" ಕಾರದಲ್ಲಿ ಆಲಾಪದಿಂದ ಪ್ರಸ್ತುತಪಡಿಸುವುದು.

ಆಲಾಪದಲ್ಲಿ ತಾಳವು ಅಥವಾ ಲಯವು ಇರುವುದಿಲ್ಲ. ಇದರಲ್ಲಿ ಸೌಂದರ್ಯ ಇರುತ್ತದೆ. ಇನ್ನೊಂದು ರೀತಿಯ ಆಲಾಪವನ್ನು ನಾವು ಹೀಗೆ ಕೇಳಲು ಸಿಗುತ್ತವೆ. ಆಲಾಪ ಎನ್ನುವುದು ಮನಬಂದಂತೆ ಹಾಡುವುದು ಇರುವುದಿಲ್ಲ. ಆಲಾಪಕ್ಕೂ ತನ್ನದೇ ಆದ ಪದ್ಧತಿಗಳನ್ನು ಒಳಗೊಂಡಿದ್ದು, ತಾಳ ವಾದ್ಯದ ಜೊತೆಗೆ ಅಂದರೆ ಬಂದಿಶ್‌ಗಳ ಪ್ರಸ್ತುತಿ ಕರಣದಲ್ಲಿ ಆಲಾಪವನ್ನು ತಾಳದ ಜೊತೆ ಸಂಯೋಜಕವಾಗಿ ಅಥವಾ ಬೆರೆತುಕೊಂಡು ಮಾಡುವ ಆಲಾಪವನ್ನು ಅತೀ ಮನರಂಜಕತೆ ಆಗಿರುತ್ತದೆ ಎಂದು ದೊಡ್ಡ ದೊಡ್ಡ ಸಂಗೀತಗಾರರ ಅಭಿಪ್ರಾಯಗಳನ್ನು ಹೇಳಿರುವುದು ಮತ್ತು ಅವರ ಗಾಯನ ಪ್ರಸ್ತುತಿಯಲ್ಲಿ ಈ ಎಲ್ಲ ಪದ್ಧತಿಗಳನ್ನು ಅಳವಡಿಸಿಕೊಂಡಿರುವುದನ್ನು ನಾವು ಕಾಣುತ್ತೇವೆ.

ಆಲಾಪವು ಕಲಾವಿದರ ಸಾಧನೆಯನ್ನು ಗುರುತಿಸುತ್ತದೆ. ಯಾವುದೇ ಒಂದು ರಾಗದ ಸ್ವರವನ್ನು ಆ ಕಾರದಲ್ಲಿ ಹೇಳುವ ರೀತಿಯಿಂದ ಇದು ಇದೇ ರಾಗ ಎಂದು ಗುರುತಿಸಲಾಗುತ್ತದೆ. 'ಆ' ಕಾರದಿಂದ ಹೇಳುವ ಸ್ವರಗಳು ಬಹಳ ಮಹತ್ವದ್ದಾಗಿವೆ ಎಂದು ಹೇಳಬಹುದು. ಮತ್ತು ಅವುಗಳು ಆ ರಾಗದ ಘನತೆಯನ್ನು ಕೇಳುಗರ ಮನದಲ್ಲಿ ಆಳವಾಗಿ ಆ ರಾಗವು ಮೂಡುವಂತೆ ಮಾಡುತ್ತದೆಯೋ ಅದೇ "ಆಲಾಪ" ಎಂದು ಹೇಳಬಹುದು. ಮಧುರತೆಯಿಂದ ಕೂಡಿದ ಆಲಾಪವು ತನ್ನದೇ ಆದ ಮಹತ್ವವನ್ನು ಹೊಂದಿರುತ್ತದೆ. ಕೇವಲ ಸ್ವರಗಳನ್ನು ಹಾಡುವುದರಿಂದ ಯಾವುದೇ ರಾಗದ ವಾತಾವರಣ ಮೂಡುವುದಿಲ್ಲ. ಅದೇ ಸ್ವರಗಳನ್ನು ನಮ್ಮ ಸಾಧನಾ ಜ್ಞಾನದಿಂದ ಪ್ರಸ್ತುತಪಡಿಸಬೇಕಾಗುತ್ತದೆ. ಒಬ್ಬ ಕಲಾವಿದರಾಗಲು ನಿರಂತರ ಮತ್ತು ಸುದೀರ್ಘವಾದ ಸ್ವರಗಳ ಜ್ಞಾನ ಮತ್ತು ಅವುಗಳ ಸ್ಥಿರತೆಯ ಬಗ್ಗೆ ಆಳವಾದ ಅಭ್ಯಾಸದ ಜೊತೆ-ಜೊತೆಗೆ ಅನಂತವಾದ ಸಾಧನೆಯಾಗಿರಬೇಕು. ಕಲಾವಿದರಲ್ಲಿ ಸ್ವರಗಳಲ್ಲಿ ಸ್ಥಿರತೆಯು ಇದ್ದಾಗ ಅವುಗಳ ಸೌಂದರ್ಯಾತ್ಮಕ ಭಾವಗಳು ನಮಗೆ ಕೇಳಲು ಸಿಗುತ್ತವೆ. ಕಲಾವಿದರು ಯಾವುದೇ ಒಂದು ರಾಗವನ್ನು ಹಾಡುವ ಮೊದಲು ಆ ರಾಗದ ಆರೋಹಣ ಅವರೋಹಣ ಮತ್ತು ಪರಿಪೂರ್ಣ ಪರಿಚಯವಿದ್ದಾಗ ಆ ರಾಗದ ಸ್ವರಗಳನ್ನು ಆತ್ಮವಿಶ್ವಾಸದಿಂದ ಹೊರಹೊಮ್ಮಿಸಬಹುದು. ಆಗ ಆಲಾಪವು ಸುಂದರ, ಸುಮಧುರ, ಅನಂತದಾಯಕವಾಗಿರುತ್ತದೆ. ಹೀಗೆ ಯಾವುದೇ ಒಬ್ಬ ಕಲಾವಿದರ ಸಾಧನೆ ಮತ್ತು ಅವರ ಸಂಗೀತದ ಜ್ಞಾನವನ್ನು ರಾಗದ ಆಲಾಪನೆಯಲ್ಲಿ ನಾವು ಕಂಡುಕೊಳ್ಳಬಹುದು.

ಧೃಪದ, ಧಮಾರ, ಖ್ಯಾಲ, ಟಪ್ಪಾ, ಠುಮ್ರಿ, ಗಜಲ, ಹೀಗೆ ಮೊದಲಾದ ಗಾಯನದ ಪ್ರಕಾರಗಳನ್ನು ನಾವು ನಮ್ಮ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಕಾಣಬಹುದು. ಈ ಎಲ್ಲಾ ಗಾಯನ ಪ್ರಕಾರಗಳ ಆರಂಭದಲ್ಲಿ ಆಲಾಪವನ್ನು ಹಾಡುವುದು ಪದ್ಧತಿಯಲ್ಲಿದೆ. ಈ ಎಲ್ಲಾ ಗಾಯನಗಳಿಗೆ ತಮ್ಮದೇ ಆದ ಆಲಾಪದ ಪ್ರಕಾರಗಳನ್ನು ನಾವು ಕೇಳಲು ಸಿಗುತ್ತವೆ. ಹೀಗೆ ನಾವು ವಾದ್ಯಗಳಲ್ಲಿಯೂ ನುಡಿಸುವುದನ್ನು ಅಂದರೆ ಸ್ವರವಾದ್ಯಗಳಾದ ಸಾರಂಗಿ, ಸರೋದ, ಸಿತಾರ, ದಿಲ್‌ರುಬಾ ಹೀಗೆ ಮುಂತಾದ ಸ್ವರ ವಾದ್ಯಗಳಲ್ಲಿ ಆಲಾಪದಿಂದ ಯಾವುದೇ ರಾಗವನ್ನು ಆರಂಭ ಮಾಡಿ ತದನಂತರ ಲಯದ ಜೊತೆ ತಾಳದ ಜೊತೆ ನುಡಿಸುತ್ತಾರೆ. ಈ ಸ್ವರವಾದ್ಯಗಳಲ್ಲಿಯೂ ಕೂಡಾ ತಮ್ಮದೇ ಆದ ಆಲಾಪದ ಪ್ರಕಾರಗಳನ್ನು ಅಥವಾ ಪದ್ಧತಿಗಳನ್ನು ಮಾಡಿಕೊಂಡಿದ್ದಾರೆ. ಅವುಗಳದೇ ಆದ ಆಲಾಪದ ಕೆಲವು ಪದ್ಧತಿಗಳ ನಂತರವೇ ಲಯದ ಜೊತೆ ತಾಳದ ಜೊತೆ ರಾಗಗಳ ಬಂದಿಶ್‌ಗಳನ್ನು ಪ್ರಸ್ತುತಪಡಿಸುತ್ತಾರೆ.

ನಮ್ಮ ಭಾರತೀಯ ಪರಂಪರೆಯಲ್ಲಿ ಬಂದಂತಹ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಗಾಯನ ಪ್ರಕಾರಗಳಲ್ಲಿ ನಾವು ಆಲಾಪ ಪದ್ಧತಿಗಳನ್ನು ಸಂಕ್ಷಿಪ್ತವಾಗಿ ನೋಡುವುದಾದರೆ ಮೊದಲಿನಿಂದ ಬಂದಂತಹ ಧೃಪದ, ಧಮಾರ, ಗಾಯನ ಪದ್ಧತಿಗಳಲ್ಲಿ ಮೊದಲಿಗೆ ನೊಂ, ತೊಂ, ತ, ಧ, ರೆ, ನಾ ಎಂಬ ಅರ್ಥಹೀನ ಶಬ್ದಗಳಿಂದ ಸಮಯದ ಮಿತಿ ಇಲ್ಲದೆಯೆ ಕಲಾವಿದರ ಸಂಗೀತದ ಸಾಧನೆ ಮತ್ತು ಸಂಗೀತ ಜ್ಞಾನದ ಮೇಲೆ ಆಲಾಪವನ್ನು ಪ್ರಸ್ತುತಪಡಿಸಿ ತದನಂತರ ಪಖವಾಜ ವಾದ್ಯದ ಸಾಥ್ ಸಂಗತ್‌ನ ಜೊತೆ ಬಂದಿಶ್‌ಗಳನ್ನು ಆರಂಭಿಸುತ್ತಾರೆ. ಈ ಗಾಯನ ಪದ್ಧತಿಯಲ್ಲಿ ಲಯಕಾರಿಯುಕ್ತ ಆಲಾಪವನ್ನು ನಾವು ಕಾಣಬಹುದು. ದ್ವಿಗುನ್, ತಿಗುನ್, ಚೌಗುನ್, ಅಠಗುನ್ ಎಂಬ ನಾಲ್ಕು ಲಯದಲ್ಲಿ ಯಾವುದೇ ವಾದ್ಯದ ಸಾಥ್ ಇಲ್ಲದೆ ಮಾಡುತ್ತಾರೆ. ಈ ಗಾಯನ ಪದ್ಧತಿಯನ್ನು ಮರ್ದಾನಿಗೀತೆ ಎಂತಲೂ ಕರೆಯುತ್ತಾರೆ. ಧೃಪದ, ಧಮಾರ ಗಾಯನದ ನಂತರ ಬಂದಂತಹ ಖ್ಯಾಲ ಗಾಯನ ಪದ್ಧತಿಯು ಶೃಂಗಾರರಸ ಪ್ರಧಾನ ಗಾಯನವಾಗಿದೆ. ಈ ಗಾಯನವನ್ನು ಮೊದಲಿಗೆ ಯಾವುದೇ ಒಂದು ರಾಗದ ಸ್ವರಗಳನ್ನು ತಮ್ಮ ಸಾಧನೆಯ ಮೇರೆಗೆ ಕಲಾವಿದರು ಆ ರಾಗದ ಸ್ವರಗಳನ್ನು ಅಂದರೆ ಸ, ರ, ಗ, ಪ, ದ ಎಂಬ

– 9 ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ತಾಳಗಳ ಲಿಪಿ ಪದ್ಧತಿಯ ಮಹತ್ವ

✍ **ನಾಗಭೂಷಣ ಎಸ್. ಗುಡ್ಡದಮಠ,** ತಬಲಾ ಕಲಾವಿದರು, ಧಾರವಾಡ.

ನಮ್ಮ ಜಗತ್ತಿನಲ್ಲಿ ಹೇಗೆ ಅಂದರೆ ಪದ್ದತಿಗಳು ಅವುಗಳದೆ ಶಾಸ್ತ್ರಗಳು ಹೇಗೆ ನಮಗೆ ಕೇಳಲು ಸಿಗುತ್ತವೆಯೋ ಹಾಗೆ ಈ ಸಂಗೀತ ಎಂಬ ಜಗತ್ತಿನಲ್ಲಿ ಒಂದು ವಿಭಿನ್ನ ನಮ್ಮ ಜಗತ್ತಿನಲ್ಲಿ ಹೇಗೆ ಅಂದರೆ ಪದ್ದತಿಗಳು ಅವುಗಳದೆ ಶಾಸ್ತ್ರಗಳು ಹೇಗೆ ನಮಗೆ ಕೇಳಲು ಸಿಗುತ್ತವೆಯೋ ಹಾಗೆ ಈ ಸಂಗೀತ ಎಂಬ ಜಗತ್ತಿನಲ್ಲಿ ಒಂದು ವಿಭಿನ್ನ ರೀತಿಯ ಪದ್ದತಿಗಳನ್ನು ಕಾಣುತ್ತೇವೆ. ಹೇಗೆ ಮನುಷ್ಯನಿಗೆ ತನ್ನದೆ ಆದ ಸಮಾಜದಲ್ಲಿನ ಪದ್ದತಿಗಳು ಕೌಟುಂಬಿಕ ಜೀವನದಲ್ಲಿನ ಪದ್ದತಿಗಳು ಮತು ಕಾನೂನುಗಳಲ್ಲಿನ ರೀತಿ–ರಿವಾಜು ಪದ್ದತಿಗಳು ಹೇಗೆ ನಮ್ಮ ಈ ಸಮಾಜದಲ್ಲಿ ನೊಡಲು ಕೇಳಲು ಸಿಗುತ್ತವೆಯೋ ಹಾಗೆ ಈ ನಮ್ಮ ಸಂಗಿತದ ಜಗತ್ತಿನಲ್ಲಿ "ಲಿಪಿ" ಎಂಬ ಒಂದು ಪದ್ದತಿ ಬಳಕೆ ಇರುವದು ಎಂದು ಚಿಂತಿಸ ಬಹುದು. ನಮ್ಮ ನಿಜಜೀವನದಲ್ಲಿ ಹೇಗೆ ಬೇಕು ಹಾಗೆ ಇರಲು ಅಸಾದ್ಯ ಹಾಗೆಯೆ ಗುರು– ಹಿರಿಯರು ನಡೆದು ಕೊಳ್ಳುವ ವರ್ತನೆ, ಭಾವನೆಗಳು ಹೇಗೆ ಒಂದು ಸೌಜನ್ಯ ಕ್ರಿಯೆಯಿಂದ ಕೂಡಿರುತ್ತದೆಯೋ ಹಾಗೆ ನಮ್ಮ ಈ ಸಂಗೀತದಲ್ಲಿಯೂ ಕೂಡಾ ಒಂದು ಪದ್ದತಿಯನ್ನು ನೊಡಲು ಸಿಗುತ್ತದೆ.

ಈ ಪದ್ದತಿಯೂ ಗಾಯನ, ವಾದನ, ನೃತ್ಯ ಇವುಗಳಲ್ಲಿಯೂ ತನ್ನದೆ ಆದ ಒಂದಲ್ಲಾ ಒಂದು ಪದ್ದತಿಗಳನ್ನು ಮೊದಲಿನಿಂದಲೂ ಬೆಳೆಸಿಕೊಂಡು ಬಂದಿವೆ. ನಮ್ಮ ವೈದ್ಯಕೀಯ ಜೀವನ ಅಥವಾ ಪೂಜಾ ಪಾಠಗಳ ಪದ್ದತಿ ಇದೆ ರೀತಿಯಾಗಿ ಒಂದಲ್ಲಾ ಒಂದು ವಿಷಯಕ್ಕೆ ಅದರದೆ ಆದ ಪದ್ದತಿಯನ್ನು ನಾವು ಕಾಣುತ್ತೇವೆ. ಹಾಗೆಯೆ ವಾದ್ಯಗಳಲ್ಲಿನ ಅಂದರೆ ತಬಲಾ,ಪಖವಾಜ, ಮೃದಂಗ, ಇತ್ಯಾದಿ ವಾದ್ಯಗಳ ಬಗ್ಗೆ ಸ್ವಲ್ಪ ಗಮನ ಹರಿಸಿದರೆ ಇವುಗಳನ್ನು ಕಲಿಯುವ ಪದ್ದತಿಯಲ್ಲಿ ಒಂದು ಗುಪ್ತಲಿಪಿ ಪದ್ದತಿಗಳನ್ನು ನೊಡಬಹುದು, ಅದನ್ನು ಲಿಪಿ ಪದ್ದತಿ ಎನ್ನಬಹುದು. ಲಿಪಿ ಎನ್ನುವುದು ಒಂದು ಬರಹ ಎಂದು ಅರ್ಥಕೊಡುತ್ತದೆ. ಯಾವುದೆ ಭಾಷೆಯಾಗಲಿ ಅದಕ್ಕೆ ತನ್ನದೆ ಆದ ಲಿಪಿ ಹೇಗೆ ಮುಖ್ಯ ಪಾತ್ರವಹಿಸುತ್ತದೆಯೋ ಹಾಗೆ ಈ ನಮ್ಮ ಸಂಗೀತ ಲೊಕದಲ್ಲಿನ ಭಾಷೆ, ಲಿಪಿ, ಪದ್ದತಿ ಕೆಲವಂದನ್ನು ನಾವು ನೊಡುತ್ತೆವೆ. ಹಾಗೆಯೆ ತಾಳಗಳ ಲಿಪಿ ಪದ್ದತಿ ಎಂದಾಕ್ಷಣ ನಮ್ಮ ಸಂಗೀತದ ಪರಂಪರೆಯಲ್ಲಿ ಮೊಟ್ಟಮೊದಲಿಗೆ ಬರುವ ಮಹಾನ್ ಲಿಪಿ ಪದ್ದತಿಯನ್ನು ರಚಿಸಿದ ಜನಕರನ್ನು ನೆನೆಸಿಕೊಳ್ಳುತ್ತೆವೆ.

ಈ ಲಿಪಿ ಪದ್ದತಿಗಳಲ್ಲಿ ಎರಡು ಲಿಪಿ ಪದ್ದತಿಗಳನ್ನು ನಾವು ಕಾಣುತ್ತೇವೆ.

1. ಪಂ. ವಿಷ್ಣುನಾರಾಯಣ ಭಾತಖಂಡೆ.
2. ಪಂ. ವಿಷ್ಣುದಿಗಂಬರ ಪಲುಸ್ಕರ.

ಈ ಎರಡು ಪದ್ದತಿಗಳು ಮಾತ್ರ ಹೆಸರಾಂತ ಲಿಪಿ ಪದ್ದತಿಗಳಾಗಿ ಉಳಿದುಕೊಂಡಿವೆ ಎಂದು ತಿಳಿಯಬಹುದು. ಆದರೂ ಕೆಲವಂದು ಲಿಪಿ ಪದ್ದತಿಗಳು ಇದ್ದರೂ ಅವುಗಳು ಬಳಕೆಗೆ ಬಾರದೆ ಉಳಿದು ಬಿಟ್ಟಿವೆ ಎನ್ನಬಹುದು. ಮತ್ತು ಈ ಎರಡೂ ಪದ್ದತಿಯಲ್ಲಿ ಭಾತಖಂಡೆ ಲಿಪಿ ಪದ್ದತಿಯೂ ಅತ್ಯಂತ ಸರಳವಾಗಿದ್ದು ಸಂಗೀತ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರದಲ್ಲಿ ಇದೆ ಎನ್ನಲಾಗುತ್ತದೆ. ಆದರೆ ಪಲುಸ್ಕರ ರವರ ಪದ್ದತಿಯೂ ಭಾತಖಂಡೆಯವರ ಪದ್ದತಿಗಿಂತ ವಿಭಿನ್ನ ಮತ್ತು ತುಂಬಾ ಕಠಿಣವಾಗಿದೆ ಹಾಗೆಯೆ ಈ ರೀತಿಯ ಲಿಪಿ ಪದ್ಧತಿಯು ಸಂಗೀತದಲ್ಲಿ ಒಂದು ಹಂತವನ್ನು ತಲುಪಿದ ನಂತರ ಪಲುಸ್ಕರ ರವರ ಲಿಪಿ ಪದ್ದತಿಯನ್ನು ತಿಳಿದುಕೊಳ್ಳಲು ಸಾದ್ಯವಾಗುತ್ತದೆ.

## ಭಾತಖಂಡೆ ತಾಳಲಿಪಿ ಪದ್ದತಿ

ಈ ಲಿಪಿ ಪದ್ದತಿಯನ್ನು ಸ್ವರ್ಗಿಯ ವಿಷ್ಣುನಾರಾಯಣ ಭಾತಖಂಡೆಯವರೆ ಆವಿಷ್ಕಾರ ಮಾಡಿದ್ದು ಉದಾಹರಣಾರ್ಥವಾಗಿ ತಾಳಲಿಪಿ ಪದ್ದತಿಯನ್ನು ನೋಡಬಹುದು.

- ಒಂದೇ ಅಕ್ಷರ ವಿದ್ದಂತಹ ಒಂದು ಮಾತ್ರಾಗೆ ಯಾವುದೇ ಪ್ರತ್ಯೇಕ ಚಿನ್ಹೆ ಇಲ್ಲಾ.

  **ಉದಾ :** ಧಿ, ನಾ, ಧಿ, ನಾ, ಗಿ, ನಾ. ಈ ಅಕ್ಷರಗಳು ಒಂದೇ

- ಒಂದೇ ಮಾತ್ರಾ ಇರುವ ಕಾರಣ ಚಿನ್ಹೆಯ ಅವಶ್ಯಕತೆ ಇಲ್ಲವಾಗುತ್ತದೆ.
- ಒಂದೇ ಮಾತ್ರಾ ಕಾಲಾವಧಿಯಲ್ಲಿ ಎರಡು ಅಥವಾ ಅದಕ್ಕಿಂತಾ ಹೆಚ್ಚಿನ ಮಾತ್ರಾಗಳಿದ್ದರೆ ಅವುಗಳ ಕೆಳಗೆ ಅರ್ದ ಚಂದ್ರಾಕೃತಿಯನ್ನು "‿" ಎರಡು ಕೊಡಬೇಕಾಗುತ್ತದೆ.

  **ಉದಾ :** ಗದಿಗನ ಇದರಲ್ಲಿ ನಾಲ್ಕು ಅಕ್ಷರಗಳ ಮಾತ್ರಾಗಳು ಇರುವ ಕಾರಣ ಈ ಅಕ್ಷರಗಳ ಗುಂಪಿಗೆ ಅರ್ದ ಚಂದ್ರಾಕೃತಿ ಕೊಡಬೇಕಾಗುತ್ತದೆ.

- ಕೆಲವೊಂದು ಮಾತ್ರಾಗಳ ನಡುವೆ ಸಮಯವಿದ್ದು ಅಂದರೆ ವಿಶ್ರಾಂತಿ ಇದ್ದರೆ "S" ಎಂಬ ಚಿನ್ಹೆಯನ್ನು ವಿಶೇಷವಾಗಿ ಕೊಡಲಾಗುವದು.

  **ಉದಾ:** ದಾS ತಿಟನಾನಾ, ಇವು ಆರು ಅಕ್ಷರಗಳನ್ನು ಒಳಗೊಂಡಿದೆ. "S" ಎಂಬ ಚಿನ್ಹೆಯನ್ನು ಕೂಡಾ ಇಲ್ಲಿ ಪರಿಗಣಿಸ ಬೇಕಾಗುತ್ತದೆ.

- " X " ಎಂಬ ಚಿನ್ಹೆಯು ತಾಳದ ಮೊದಲನೆಯ ಮಾತ್ರಾದ ಸಮ್ ಎಂಬ ಪರಿಕಲ್ಪನೆಯನ್ನು ಕೊಡುತ್ತದೆ. ಈ " X " ಚಿನ್ಹೆಯು ಮುಖ್ಯವಾದುದು. ಹಾಗೆಯೆ ಉಳಿದ ಪೆಟ್ಟುಗಳಿಗನುಗುಣವಾಗಿ ಆಯಾ ಪೆಟ್ಟುಗಳಿಗೆ ಸಂಖ್ಯೆಯನ್ನು ಬರೆಯಲಾಗುತ್ತದೆ.
- ಖಾಲಿ ಅಥವಾ ಹುಸಿಯ ಗುರುತಿಗಾಗಿ "O" ಈ ಚಿನ್ಹೆಯನ್ನು ಆಯಾ ಮಾತ್ರಾದ ಕೆಳಭಾಗದಲ್ಲಿ ಕೊಡಲಾಗುತ್ತದೆ.
- ತಾಳದ ಮಾತ್ರಾಗಳ ವಿಭಾಗವನ್ನು ಮಾಡಲು" / " ಈ ರೀತಿಯ ಚಿನ್ಹೆಯನ್ನು ಉಪಯೋಗಿಸಲಾಗುತ್ತದೆ.

  **ಉದಾ :** ತಾಳ– ಏಕತಾಲ್.

| 1 | 2 | 3 | 4 | 5 | 6 | 7 | 8 | 9 | 10 | 11 | 12 |
|---|---|---|---|---|---|---|---|---|---|---|---|
| ದಿನ್ | ದಿನ್ । | ದಾಗೆ | ತಿರಕಿಟ । | ತೊ | ನಾ । | ಕತ್ | ತಿನ್ । | ದಾಗೆ | ತಿರಕಿಟ । | ಧಿ | ನಾ । |
| X | | 0 | | 2 | | 0 | 3 | 4 | | | |

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ರೀತಿಯ ತಾಳವನ್ನು ಭಾತಖಂಡೆ ಲಿಪಿ ಪದ್ದತಿಯ ವಿಶ್ಲೇಷಣೆಯ ನಂತರ ಒಂದು ಕಾಯದಾದಲ್ಲಿಯೂ ಕೂಡಾ ಈ ಪದ್ದತಿಯನ್ನು ನಾವು ಕಾಣಬಹುದು.

**ಉದಾ :** ಕಾಯದಾ

ದಾದಾ ತಿರಕಿಟ ದಾದಾ ತೊನಾ ।

ತಾತಾ ತಿರಕಿಟ ದಾದಾ ಧಿನಾ ।

- ಭಾತಖಂಡೆ ಲಿಪಿ ಪದ್ದತಿಯಲ್ಲಿ ಬಳಸುವ ಚಿನ್ಹೆಗಳು.

  "⌣" – ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾಗಳಿದ್ದರೆ.

  " S " – ಸಮಯ ಅಥವಾ ವಿಶ್ರಾಂತಿ.

  " X " – ಸಮ ಅಥವಾ ಮೊದಲನೆಯ ಮಾತ್ರಾ.

  " O " – ಖಾಲಿ ಅಥವಾ ಹುಸಿ.

  " / " – ವಿಭಾಗ.

## ಪಲುಸ್ಕರ ತಾಳಲಿಪಿ ಪದ್ದತಿ

ಸ್ವರ್ಗಿಯ ಶ್ರೀ ಪಂ. ವಿಷ್ಣು ದಿಗಂಬರ ಪಲುಸ್ಕರ ರವರು ರಚಿಸಿದ ಲಿಪಿ ಪದ್ದತಿಯು ಅತ್ಯಂತ ಕಠಿಣ ಮತ್ತು ಭಾತಖಂಡೆಯವರ ಲಿಪಿ ಪದ್ದತಿಗಿಂತ ವಿಚಿತ್ರವಾಗಿದೆ ಎಂದು ಹೇಳಬಹುದು ಕಾರಣವೆನೆಂದರೆ ಈ ತಾಳಲಿಪಿ ಪದ್ದತಿಯಲ್ಲಿ ಪ್ರತ್ಯೇಕ ಮಾತ್ರಾ ಮತ್ತು ಪ್ರತ್ಯೇಕ ಅಕ್ಷರಗಳಿಗೆ ಬೇರೆ– ಬೇರೆ ಚಿನ್ಹೆಗಳಿಂದ ಕೂಡಿದೆ ಆದಕಾರಣ ಈ ಲಿಪಿ ಪದ್ದತಿಯು ಅಷ್ಟೊಂದು ಪ್ರಚಲಿತಕ್ಕೆ ಸೂಕ್ತ ಅಲ್ಲವೆನ್ನಬಹುದು.

- ನಾಲ್ಕು ಮಾತ್ರಾಗಳ ಸೂಚನೆಗೆ " X " ಈ ಗುರುತನ್ನು ಗುರುತಿಸಲಾಗಿದ್ದು ಚತುಶ್ರ " X " 4 ಮಾತ್ರಾ.
- ಎರಡು ಮಾತ್ರಾಗಳ "ಗುರು" ಎಂಬುದಕ್ಕೆ " S " ಎಂಬ ಚಿನ್ಹೆಯನ್ನು ನೊಡಲಾಗುತ್ತದೆ.
- ಒಂದು ಮಾತ್ರಾಗಳ "ಲಘು" ಚಿನ್ಹೆಯ "—" ಈ ರೀತಿ ಕೊಡಲಾಗುತ್ತದೆ.
- $^1/_2$ ಮಾತ್ರೆಯ "ದೃತ್" ಚಿನ್ಹೆಯ "____" ಈ ರೀತಿ ಕೊಡಲಾಗುತ್ತದೆ.
- $^1/_4$ ಮಾತ್ರೆಯ "ಅಣುದೃತ್" ಚಿನ್ಹೆಗೆ "⌣" ಅರ್ಧಚಂದ್ರಾಕೃತಿ.
- $^1/_8$ ಮಾತ್ರೆಯ "ಅಣುಅಣುದೃತ್" ಚಿನ್ಹೆಗೆ "⌣⌣" ಈ ತರಹದ ದ್ವಿ ಚಂದ್ರಾಕೃತಿಗಳು.
- $^1/_{16}$ ಮಾತ್ರೆಯ "ಅಣುಅಣುಅಣುದೃತ್ "⌣⌣⌣" ಈ ಮೂರು ಅರ್ಧಾ ಚಂದ್ರಾಕೃತಿಗಳು.
- ಹಾಗೆಯೆ ಈ ಪದ್ದತಿಯಲ್ಲಿ ಅಕ್ಷರಗಳ ನಡುವಿನ ಸಮಯವನ್ನು (ವಿಶ್ರಾಂತಿ) ಕಂಡುಕೊಳ್ಳಲು ಅವಗ್ರಹ "S" ಚಿನ್ಹೆಯ ಉಪಯೋಗ ಮತ್ತು ಸಮ್‌ನ ಗುರುತಿನ ಚಿನ್ಹೆಯನ್ನು " । ". ಖಾಲಿ ಅಥವಾ ಹಿಸಿಯ ಗುರುತನ್ನು"+" ಚಿನ್ಹೆಯಿಂದ ಉಳಿದ ಪೆಟ್ಟುಗಳ ಸ್ಥಾನದಲ್ಲಿ ಮಾತ್ರಾಗಳ ಸಂಖ್ಯೆಯನ್ನು ಬರೆಯಲ್ಪಡುತ್ತದೆ. ಈ ಪಲುಸ್ಕರ ರವರ ಲಿಪಿ ಪದ್ದತಿಯಲ್ಲಿ ತಾಳಗಳನ್ನು ಗುರುತಿಸಲು ವಿಭಾಗಿಸುವ ಪದ್ದತಿ ಇಲ್ಲಾ.

## ತಾಳ ರೂಪಕ

| ತಿನ್ | ತಿನ್ | ನಾ | ದಿನ್ | ನಾ | ಧಿನ್ | ನಾ |
|---|---|---|---|---|---|---|
| 1 | — | — | 4 | — | 6 | — |

**ಉದಾ :** ಕಾಯದಾ

| ದಾ | ದಾ | ತಿರಕಿಟ | ದಾ | ದಾ | ತಿನ್ | ನಾ |
|---|---|---|---|---|---|---|
| । | — | OOOO | 5 | — | — | |

ವಿಷ್ಣು ದಿಗಂಬರ ಪಲುಸ್ಕರ ತಾಳಲಿಪಿ ಪದ್ದತಿಯ ಚಿನ್ಹೆಗಳು.

ಸಮ್ = " 1 "

ಹುಸಿ = " + "

ಒಂದು ಮಾತ್ರಾ = "—"

ಕಾಲು ಮಾತ್ರಾ $^1/_4$ = "⌣"

■■

– 7 ನೇ ಪುಟದಿಂದ ಮುಂದುವರೆದುದು

ಸ್ವರಗಳನ್ನು "ಆ" ಕಾರಯುಕ್ತವಾಗಿ ಹೇಳುತ್ತಾರೆ. ಈ ಗಾಯನದಲ್ಲಿ ಲಯ, ತಾಳವಿಲ್ಲದೆ, ಶೃತಿಬದ್ಧವಾಗಿ ಆಲಾಪವನ್ನು ಹಾಡುತ್ತಾ ತದನಂತರ ತಬಲಾ ವಾದ್ಯದ ಲಯ ಮತ್ತು ತಾಳಗಳಿಂದ ಕೂಡಿದ ಬಂದಿಶ್‌ಗಳನ್ನು ಪ್ರಾರಂಭಿಸುತ್ತಾರೆ. ಹೀಗೆ ಖ್ಯಾಲ ಗಾಯನವನ್ನು ಸ್ವರಗಳಿಂದ ಕೂಡಿದ "ಆ" ಕಾರಯುಕ್ತ ಆಲಾಪವನ್ನು ಮಾಡಿದರೆ ಠುಮ್ರಿ ಗಾಯನದಲ್ಲಿ ಆಲಾಪ ಮಾಡಿ ನಂತರ ಠುಮ್ರಿ ಹಾಡು ಶಬ್ದಗಳೊಂದಿಗೆ ಆಲಾಪ ಮಾಡುವರು. ರಾಗದ ಬಂದಿಶ್‌ಗಳ ಶಬ್ದಗಳನ್ನು ತೆಗೆದುಕೊಂಡು ಆ ಶಬ್ದಗಳಿಂದಲೇ ಆಲಾಪವನ್ನು ಪ್ರಸ್ತುತಪಡಿಸಿ ತಬಲಾ ವಾದ್ಯದ ಜೊತೆ ಲಯ, ತಾಳ ಬದ್ಧವಾಗಿ ಗಾಯನವನ್ನು ಪ್ರಸ್ತುತಪಡಿಸುತ್ತಾರೆ. ಹೀಗೆ ಟಪ್ಪಾ, ಗಜಲ, ಹೊರಿ, ಗಾಯನ ಪ್ರಕಾರದಲ್ಲಿಯೂ ಕೂಡಾ ಸಂಕ್ಷಿಪ್ತವಾಗಿ ಆಲಾಪವನ್ನು ತೆಗೆದುಕೊಂಡು ನಂತರ ಬಂದಿಶ್‌ಗಳನ್ನು ತಾಳಗಳ ಜೊತೆ ಪ್ರಾರಂಭಿಸು ತ್ತಾರೆ. ಇಲ್ಲಿ ನಾವು ಸೀಮಿತವಾಗಿ ಇದ್ದ ಆಲಾಪದ ಗಾಯನ ಪದ್ಧತಿಗಳನ್ನು ಕಾಣುವುದರ ಜೊತೆಗೆ ಸೀಮಿತ ಇಲ್ಲದೆ ಇರುವ ಆಲಾಪದ ಗಾಯನ ಪದ್ಧತಿಗಳನ್ನು ಹಾಡುವುದನ್ನು ನಾವು ಕಾಣಬಹುದು.

ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಆರು ಘರಾಣೆಗಳಿದ್ದು ಈ ಆರು ಘರಾಣೆಗಳಲ್ಲಿಯೂ ಆಲಾಪಕ್ಕೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಆಲಾಪದ ಶೈಲಿಯು ಘರಾಣೆಗಳ ಆಧಾರದ ಮೇಲೆಯೆ ಅವಲಂಬಿತವಾಗಿದೆ ಎಂದರೆ ತಪ್ಪಾಗಲಾರದು. ಆಲಾಪ ಎಂಬುದು ಆಯಾ ರಾಗಗಳ ಸಂಪೂರ್ಣ ಬಿಂಬವನ್ನು ತೋರಿಸುತ್ತದೆ.

ಆಲಾಪ ಎನ್ನುವುದು ಗಾಯನ ಕ್ರಿಯೆಯಲ್ಲಿ ಅಷ್ಟೇ ಅಲ್ಲದೇ ಸ್ವರ ವಾದ್ಯಗಳಲ್ಲಿಯೂ ನಾವು ಕಾಣಬಹುದು. ಈ ಮೇಲೆ ಹೇಳಿರುವಂತೆ ವಾದ್ಯಗಳಾದ ಸಾರಂಗಿ, ಸಿತಾರ, ಸರೋದ, ದಿಲ್‌ರುಬಾ ವಾದ್ಯಗಳಲ್ಲಿ ಆಲಾಪವನ್ನು ನೋಡುವುದಾದರೆ ಸಾರಂಗಿ ವಾದ್ಯದ ಆಲಾಪವು ಗಾಯನದಂತೆಯೇ ಸೂಕ್ಷ್ಮವಾಗಿ ಮತ್ತು ಸುಂದರವಾಗಿ ಗಾಯನದ ಎಲ್ಲಾ ಪ್ರಕಾರಗಳನ್ನು ಈ ವಾದ್ಯದಲ್ಲಿ ನುಡಿಸುವುದರಿಂದ ಇಲ್ಲಿ ಆಲಾಪವನ್ನು ಅಲ್ಪಮಟ್ಟಿಗೆ ನುಡಿಸಿಕೊಂಡು ನಂತರ ಬಂದಿಶ್‌ಗಳನ್ನು ಪ್ರಾರಂಭಿಸುತ್ತಾರೆ. ಆದರೆ ಸಿತಾರ ವಾದ್ಯದಲ್ಲಿ ಮೊದಲಿಗೆ ಆಲಾಪ, ಜೊಡ ಆಲಾಪ, ಬಡತ್, ಜಾಲಾ ಎಂಬ ನಾಲ್ಕು ಲಯದಲ್ಲಿ ಆಲಾಪವನ್ನು ನಾವು ಕಾಣಬಹುದು. ತದನಂತರ ತಬಲಾ ವಾದನದ ತಾಳಗಳ ಜೊತೆ ಗತ್ತಗಳನ್ನು ನುಡಿಸಲು ಆರಂಭಿಸುತ್ತಾರೆ. ಇಲ್ಲಿಯೂ ಕೂಡಾ ಸಮಯದ ಮಿತಿಯು ಆಲಾಪಕ್ಕೆ ಇರುವುದಿಲ್ಲ. ಕಲಾವಿದರ ಸಾಧನೆಯು ತಕ್ಕಂತೆ ಆಲಾಪವು ಪ್ರಸ್ತುತಪಡಿಸುತ್ತಾರೆ. ಸರೋದ ದಿಲ್‌ರುಬಾ ವಾದ್ಯಗಳಲ್ಲಿಯೂ ಕೂಡಾ ಮೊದಲಿಗೆ ತಾಳರಹಿತ ಆಲಾಪವನ್ನು ಪ್ರಸ್ತುತಪಡಿಸಿದ ನಂತರವೇ ಬಂದಿಶ್‌ಗಳನ್ನು ತಾಳಗಳ ಜೊತೆ ಲಯದಿಂದ ನುಡಿಸುವುದನ್ನು ನಾವು ಕಾಣುತ್ತೇವೆ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಗಿರೀಶ ಕಾರ್ನಾಡರ ನಾಟಕಗಳ ತಾತ್ವಿಕ ಅಧ್ಯಯನ

✍ **ಡಾ. ಮಲ್ಲಯ್ಯ ಸಂಡೂರು,** ಉಪನ್ಯಾಸಕರು, ಕನ್ನಡ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಜ್ಞಾನ ಸರೋವರ, ನಂದಿಹಳ್ಳಿ, ಸಂಡೂರು–583 119. ತಾ. ಸಂಡೂರು, ಜಿ. ಬಳ್ಳಾರಿ.



ಕನ್ನಡ ನಾಟಕಗಳ ಹಿರಿಮೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸಿದ ಖ್ಯಾತಿ ಗಿರೀಶ ಕಾರ್ನಾಡರದು. ಗಿರೀಶ್ ಕಾರ್ನಾಡ್ ಅವರು ಆಧುನಿಕ ಕನ್ನಡದ ಹೊಸ ಪೀಳಿಗೆಯ ನಾಟಕಕಾರರಲ್ಲಿ ಅಗ್ರಗಣ್ಯರು. ಪುರಾಣ, ಇತಿಹಾಸ, ಜಾನಪದ ವಸ್ತುಗಳನ್ನು ಒಂದು ಚೌಕಟ್ಟಿನಲ್ಲಿಟ್ಟುಕೊಂಡು, ಆ ಚೌಕಟ್ಟಿನ ಸಂದರ್ಭದಲ್ಲಿ ಸಮಕಾಲೀನ ಜಗತ್ತಿನ ಕಾಳಜಿಗಳನ್ನು ಗುರುತಿಸಿ ಅದನ್ನು ಶೋಧಿಸಿ ನೋಡುವುದು ಅವರ ನಾಟಕಗಳ ವಿಶಿಷ್ಟತೆ. ಶಿಷ್ಟತೆಯ ಸಂವೇದನೆಯುಳ್ಳ ಕಾರ್ನಾಡರು ಈ ಸೃಜನಾತ್ಮಕ ಪ್ರಕ್ರಿಯೆಯಲ್ಲಿ ಭಾರತೀಯ ನಾಟಕದ ಪ್ರೌಢ ಮತ್ತು ಜಾನಪದ ಪರಂಪರೆಯೊಂದಿಗೆ ವಸ್ತು ಮತ್ತು ತಂತ್ರದ ಮೂಲಕ ಒಡನಾಡುತ್ತ ಸಮಕಾಲೀನ ಸಾಧ್ಯತೆಗಳಲ್ಲಿ ತಮ್ಮ ವೈಯಕ್ತಿಕ ಸಾಧನೆಯಿಂದ ಅದರ ಕ್ಷಿತಿಜವನ್ನು ವಿಸ್ತರಿಸಲು ಪ್ರಯತ್ನಪಟ್ಟವರು. ರಂಗಭೂಮಿಗೆ ಅಗತ್ಯವಾದ ನಾಟ್ಯಪೂರ್ಣ ಘಟನೆ ಮತ್ತು ವ್ಯಕ್ತಿತ್ವಗಳ ಸಮೃದ್ಧಿ ಅವರ ನಾಟಕಗಳ ವೈಶಿಷ್ಟಗಳಾಗಿವೆ. ಇದರಿಂದಾಗಿಯೇ ಕಾರ್ನಾಡರ ನಾಟಕಗಳು ಕನ್ನಡ ರಂಗಭೂಮಿಗೆ ಮಹತ್ವದ ಹೊಸ ಆಯಾಮ ನೀಡಿವೆ. ಹೀಗಾಗಿ ಅವರ ಪ್ರಮುಖ ನಾಟಕಗಳ ತಾತ್ವಿಕತೆಯನ್ನು ಕಟ್ಟಿಕೊಡುವುದು ಈ ಸಂಶೋಧನ ಲೇಖನದ ಉದ್ದೇಶವಾಗಿದೆ.

ಕಾರ್ನಾಡರ ಮೊದಲ ನಾಟಕ 'ಯಯಾತಿ'(1961). ಇದು ನವ್ಯವಾದದ ಅತ್ಯಂತ ಪ್ರಭಾವಶಾಲಿಯಾಗಿದ್ದ ಕಾಲಮಾನ. ಅಲ್ಲಿಂದಿಡಿದು ಬಂದರೆ ಅವರ ಒಟ್ಟು ನಾಟಕಗಳನ್ನು ಪರಿಶೀಲಿಸಿದರೆ ನವ್ಯ ದೃಷ್ಟಿಕೋನದ ಪ್ರಭಾವಶಾಲಿ ಅಭಿವ್ಯಕ್ತಿಯಿಂದ ಹಂತಹಂತವಾಗಿ ಅವರು ಆಧುನಿಕೋತ್ತರ ಪ್ರವೃತ್ತಿಯವರೆಗೆ ಸಾಗಿ ಬಂದಿರುವುದನ್ನು ಗಮನಿಸಬಹುದು. ಈ ತಾತ್ವಿಕತೆಯ ಹಿನ್ನೆಲೆಯಲ್ಲಿ ಕಾಲದ ದೃಷ್ಟಿಯಿಂದ 'ಯಯಾತಿ', ತುಘಲಕ್', 'ಹಿಟ್ಟಿನಹುಂಜ' ಹಾಗೂ 'ಅಂಜು ಮಲ್ಲಿಗೆ' ಅವುಗಳನ್ನು ನವ್ಯವಾದದ, ಆಧುನಿಕ ಪ್ರಜ್ಞೆಯ ಪ್ರತೀಕವಾಗಿಯೂ, 'ಹಯವದನ', 'ನಾಗಮಂಡಲ', 'ತಲೆದಂಡ' ಹಾಗೂ 'ಅಗ್ನಿ ಮತ್ತು ಮಳೆ' ಅವುಗಳನ್ನು ಆಧುನಿಕೋತ್ತರ ಪ್ರವೃತ್ತಿಗಳ ಅಭಿವ್ಯಕ್ತಿಯಾಗಿಯೂ ಕಾಣಬಹುದು. ಅದರ ಅರ್ಥ ಈ ಎರಡೂ ಗುಂಪುಗಳ ನಡುವೆ ಒಂದು ಸ್ಪಷ್ಟವಾದ ರೇಖೆ ಇದೆಯೆನ್ನದಾದರೂ, ಅವರ ಹಲವು ನಾಟಕಗಳಲ್ಲಿ ಎರಡೂ ಮನೋಧರ್ಮಗಳನ್ನು ಗುರುತಿಸಬಹುದು. ಆದರೆ ನವ್ಯವಾದದಿಂದ ಪ್ರಾರಂಭವಾದ ಅವರ ನಾಟಕಗಳಲ್ಲಿ ಈ ಬದಲಾವಣೆಯನ್ನು ಸ್ಪಷ್ಟವಾಗಿಸಬಹುದು.

ಕಾರ್ನಾಡರು ತಮ್ಮ ಮೊದಲ ನಾಟಕವಾದ 'ಯಯಾತಿ' (1961) ಯಲ್ಲಿಯೇ ಕೈಲಾಸಂ, ಶ್ರೀರಂಗ ಅವರ ಸಾಮಾಜಿಕ, ವಾಸ್ತವವಾದಿ ಪರಂಪರೆಯಿಂದ ತಾವು ಭಿನ್ನವಾಗಿರುವುದನ್ನು, ಪೌರಾಣಿಕ ವಸ್ತುವಿನ ಆಯ್ಕೆಯಲ್ಲಿಯೇ ಸ್ಪಷ್ಟಪಡಿಸುತ್ತಾರೆ. 'ಯಯಾತಿ' ಪೌರಾಣಿಕ ವಸ್ತುವಾದರೂ ಅದರ ತಾತ್ವಿಕ ತಳಹದಿ ಪೂರ್ಣ ಆಧುನಿಕವಾದದ್ದು. ಇದು ಪ್ರಭಾವಶಾಲಿಯಾಗಿ ಚಿತ್ರಿತವಾಗುವುದು ಪುರುವಿನ ಪಾತ್ರದಲ್ಲಿ. ಹಾಗಾಗಿ ಈ ನಾಟಕದಲ್ಲಿ ಆತನೇ ಕೇಂದ್ರಬಿಂದು. ಈ ನಾಟಕದ ತಾತ್ವಿಕತೆಯನ್ನು ಕಾರ್ನಾಡರು ಹೀಗೆ ಗುರುತಿಸುವರು: 'ಅಸ್ತಿತ್ವವಾದದ ತಳಹದಿಯ ಮೇಲೆ ಯಯಾತಿ ರೂಪುಗೊಂಡಿದೆ. ಮನುಷ್ಯನ ಅಸ್ತಿತ್ವ ಅವನ ಮನುಷ್ಯತ್ವದಲ್ಲಿಲ್ಲ ಅದರ ಅಭಾವದಲ್ಲಿದೆ' ಎನ್ನುವರು. ಹಾಗೆಯೇ ಕೀರ್ತಿನಾಥ ಕುರ್ತುಕೋಟಿ ಅವರು 'ಯಯಾತಿ'ಯ ತಾತ್ವಿಕತೆ ಪುರುವಿನ ಪಾತ್ರಕಲ್ಪನೆಯಲ್ಲಿ ಅಡಗಿದೆ. ಪುರು ಆಧುನಿಕ ಕಾಲದ ಅನಾಥಪ್ರಜ್ಞೆಯ, ಏಕಾಕಿತನದ ಸಂಕೇತವಾಗಿದ್ದಾನೆ' ಎನ್ನುತ್ತಾರೆ. ಹೀಗೆ ಪೌರಾಣಿಕ ಚೌಕಟ್ಟಿನ ಈ ನಾಟಕದಲ್ಲಿ ಸಿಗುವ ದರ್ಶನ ಮಾತ್ರ ಆಧುನಿಕ–ಅಂದರೆ ನವ್ಯವಾದದ ಪ್ರತೀಕವಾಗಿದೆ.

ವೇದಕಾಲದಷ್ಟು ಪ್ರಾಚೀನವಾದ ಯಯಾತಿಯ ಕತೆ ಮಹಾಭಾರತದ 'ಆದಿಪರ್ವ'ದಲ್ಲಿದೆ. ಚಂದ್ರವಂಶದ ದೊರೆ ಯಯಾತಿ ಮಹಾರಾಜನ ಯೌನ ದಾಹ ಹಾಗೂ ಅದಮ್ಯ ಕಾಮಪಿಪಾಸೆಯೇ ಇಲ್ಲಿನ ಪ್ರಮುಖ ಕಥಾವಸ್ತು. ಪುರಾಣದಲ್ಲಿ ಬರುವ ಯಯಾತಿಯ ಕಥೆಯನ್ನು ಬಳಸಿಕೊಂಡು ಆ ಮೂಲಕ ಬದುಕಿನ ಮೂಲಭೂತ ಸಮಸ್ಯೆಯೊಂದಕ್ಕೆ ಹೊಸ ಅರ್ಥವನ್ನು ಶೋಧಿಸುವ ಪ್ರಯತ್ನವನ್ನು ಈ ನಾಟಕದಲ್ಲಿ ಕಾರ್ನಾಡರು ಮಾಡಿದ್ದಾರೆ. ಯಯಾತಿಯ ಅಸ್ತಿತ್ವದ ಅಪೇಕ್ಷೆ, ದೇವಯಾನಿಯ ಪ್ರೀತಿಯ ಹಂಬಲ, ಪುರುವಿನ ವ್ಯಕ್ತಿತ್ವದ ಹುಡುಕಾಟ, ಶರ್ಮಿಷ್ಠೆಯ ಮನುಷ್ಯತ್ವದ ಆಸೆ ಹೀಗೆ ಈ ನಾಟಕದ ಪಾತ್ರಗಳೆಲ್ಲ ಅವರವರ ಬದುಕಿನ ಅರ್ಥವನ್ನು ಹುಡುಕಾಡುತ್ತವೆ. ಅತಿಯಾದ ವಂಶಾಭಿಮಾನದಿಂದ ಯಯಾತಿ ಅಮರತ್ವಕ್ಕಾಗಿ ಹಂಬಲಿಸುತ್ತಾನೆ. ತಂದೆಯ ಮುಪ್ಪನ್ನು ತಾನು ತನ್ನ ಮೇಲೆ ತೆಗೆದುಕೊಂಡು ಪುರು ಒಂದರ್ಥದ ಪ್ರಕಾರ ದುರಂತದ ನಾಯಕನೇ ಸರಿ. ಬದುಕಿನಲ್ಲಿ ಬಂದದ್ದನೆಲ್ಲವನ್ನು ಎದುರಿಸುವ ಪುರು ಅಸ್ತಿತ್ವವಾದಿ ನಿಲುವನ್ನು ನಾಟಕದುದ್ದಕ್ಕೂ ಪ್ರತಿಪಾದಿಸುತ್ತಾನೆ.

ಈ ನಾಟಕದ ಮತ್ತೊಂದು ಪ್ರಮುಖವಾದ ಪ್ರಶ್ನೆ ಸಾಮಾಜಿಕ ಹೊಣೆಗಾರಿಕೆ. ಸಾಮಾಜಿಕ ರಚನೆಯಲ್ಲಿ ನಾವು ತೆಗೆದುಕೊಳ್ಳುವ ನಿರ್ಧಾರಗಳು ಬೇರೆಯವರ ಬದುಕಿನ ಮೇಲೂ ಪರಿಣಾಮ ಬೀರುತ್ತದೆ ಎಂಬುದನ್ನು ಈ ನಾಟಕ ತೆರೆದು ತೋರಿಸುತ್ತದೆ. ಯಯಾತಿಯ ಮುಪ್ಪನ್ನು ಸ್ವೀಕರಿಸಿ ಪುರು ತನ್ನ ಯೌವ್ವನವನ್ನು ಅವನಿಗೆ ನೀಡುತ್ತಾನೆ. ಇಡೀ ನಾಟಕಕ್ಕೆ ತಿರುವು ಬರುವುದು ಈ ಹಂತದಲ್ಲಿ. ಪುರುವಿನ ಪತ್ನಿ ಚಿತ್ರಲೇಖೆ ಗಂಡನ ಯೌವನವನ್ನು ಸ್ವೀಕರಿಸಿದ ಮಾವನನ್ನು ಹೀಗೆ ಕೇಳುತ್ತಾಳೆ. 'ಮಾವ ಪುರುವಿನ ಯೌವನವನ್ನು ಸ್ವೀಕರಿಸಿರುವ ನೀವು ನನ್ನನ್ನು ಸ್ವೀಕರಿಸುವಂತೆ ಯಯಾತಿಯಲ್ಲಿ ಕೇಳುತ್ತಾಳೆ'. ಇದು ಸಾಧ್ಯವಾಗದೇ ಹೋದಾಗ ಚಿತ್ರಲೇಖೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದಕ್ಕೆ ಗಂಡ ಮತ್ತು ಮಾವ ಇವರಿಬ್ಬರೂ ಕಾರಣರಾಗಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ಕಷ್ಟ ನಷ್ಟಗಳ ಕುರಿತೂ ಈ ನಾಟಕದಲ್ಲಿ ಸೂಕ್ಷ್ಮ ವಿವರಗಳು ದಾಖಲಾಗಿವೆ. ಜೊತೆಗೆ ಸ್ವಾತಂತ್ರ್ಯಾನಂತರ ಭಾರತದಲ್ಲಾದ ಕೌಟುಂಬಿಕ ವಿಘಟನೆಯ ಕುರಿತೂ ಈ ನಾಟಕ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾತನಾಡುತ್ತದೆ. ಈ ನಾಟಕದಲ್ಲಿ ಕಾರ್ನಾಡರು ಪುರಾಣದ ಮೂಲಕ ಆಧುನಿಕ ಸಂವೇದನೆಯನ್ನು ಸಮರ್ಥವಾಗಿ ಅಭಿವ್ಯಕ್ತಿಸಲು ಬಳಸಿಕೊಂಡರು. ಇದೊಂದು ರೀತಿಯಲ್ಲಿ ಪುರಾಣದ ಮರುಸೃಷ್ಟಿಯೂ ಹೌದು. ಹಾಗೆಯೇ ಅಸ್ತಿತ್ವವಾದಿ ವಿಚಾರಧಾರೆ ಅವರ ಮೇಲೆ ಪ್ರಭಾವವಿರುವುದರಿಂದ ಭೂತ ವರ್ತಮಾನಗಳ ಸಂಘರ್ಷವನ್ನು ಅಸ್ತಿತ್ವದ ಉಳಿವಿಗಾಗಿ ಹೋರಾಡುವ ಪಾತ್ರಗಳಿಗೆ ತಳಕು ಹಾಕಿ ನಾಟಕವನ್ನು ಹೆಚ್ಚು ಪ್ರಸ್ತುತಗೊಳಿಸಿದ್ದಾರೆ ಕಾರ್ನಾಡರು.

ನವ್ಯವಾದ ಕಾಣುವ ಮನುಷ್ಯನ ತೊಳಲಾಟವನ್ನು ಆದರ್ಶ ಮತ್ತು ವಾಸ್ತವಕ್ಕಿರುವ ಭಿನ್ನತೆಯನ್ನು ಎದುರಿಸಲಾರದೆ, ಹಿಂಸಾರತಿಯಲ್ಲಿ ಪರ್ಯವಸಾನವಗುವ ಸ್ಥಿತಿಯನ್ನು, ಏಕಾಕಿತನದ ಅನುಭವದ ಉತ್ಕಟತೆಯನ್ನು ಅತ್ಯಂತ ಪ್ರಭಾವಶಾಲಿಯಾಗಿ ಚಿತ್ರಿಸಿದ ನಾಟಕ 'ತುಘಲಕ್'(1964). ಇದೊಂದು ಐತಿಹಾಸಿಕ ನಾಟಕವಾಗಿದೆ. ಕನಸುಗಾರನಾಗಿ, ಕವಿಯಾಗಿ, 'ಇತಿಹಾಸವನ್ನೇ ಬದಲಿಸುತ್ತೇನೆ' ಎಂಬ ತೀರ್ಮಾನದಿಂದ, ಹಮ್ಮಿನಿಂದ ಪ್ರಾರಂಭಿಸುವ ತುಘಲಕ್ ಬಹಳಷ್ಟು ನವ್ಯ ಮನೋಧರ್ಮದವರ ಹಾಗೆ ಆದರ್ಶವಾದಿ ಕೂಡ. ಆದರೆ, ಆದರ್ಶಗಳು ವಾಸ್ತವದೊಡನೆ ಘರ್ಷಣೆಯಾದಾಗ, ಅವು ಚೂರು ಚೂರಾಗುತ್ತವೆ. ಅವನೇ ಹೇಳುವಂತೆ, "ನೆಲದಲ್ಲಿ ಬೇರಿಳಿಯುವ ಮೊದಲು, ನಕ್ಷತ್ರಗಳಲ್ಲಿ ಟೊಂಗೆ ಬಿಚ್ಚುವುದಾದರೂ ಹೇಗೆ". ಇದಕ್ಕೆ ಉತ್ತರವನ್ನು ಕಾಣಲು ಆತ, ತನ್ನ ವ್ಯಕ್ತಿತ್ವದ ಪ್ರತಿರೂಪಗಳ ಜೊತೆ ಘರ್ಷಣೆಗೆ ತೊಡಗುತ್ತಾನೆ. ಈ ನಾಟಕದ ಅದ್ಭುತ ತಾಂತ್ರಿಕ ಯಶಸ್ಸುಗಳಲ್ಲಿ ಒಂದು ಎಂದರೆ ತುಘಲಕ್ ಎದುರಿಸುವ, ಕೊಲ್ಲುತ್ತ ಸಾಗುವ ಪಾತ್ರಗಳೆಲ್ಲ ಆತನ ವ್ಯಕ್ತಿತ್ವದ ವಿವಿಧ ರೂಪಗಳೇ. ಅವರ ಸಂಬಂಧಿಕರನ್ನು ಕೊಲ್ಲುತ್ತ ಹೋದ ಹಾಗೆ, ಆತ ತನ್ನ ವ್ಯಕ್ತಿತ್ವದ ಒಂದೊಂದೆ ಅಂಶವನ್ನು ಕೊಂದುಕೊಳ್ಳುತ್ತ ಹೋಗುತ್ತಾನೆ. ಆಗ ಆತನ ಬಳಿ ಉಳಿಯುವುದು ಬರಿ ಹಿಂಸೆ ಮತ್ತು ಅದು ಕೊಡುವ ವಿಚಿತ್ರ ಸುಖ ಮಾತ್ರ. ಅವನು ಕೊಲ್ಲದೆ ಉಳಿಯುವ ಪ್ರತಿರೂಪ ಎಂದರೆ ಅಝೀಝು– ಎಲ್ಲ ರೀತಿಯ ಆದರ್ಶ, ಕಲ್ಪನೆಗಳಿಂದ ಹೊರತಾದ, ಸ್ವಾರ್ಥ ಸಿನಿಕತನ ತುಂಬಿದ ತುಘಲಕ್‌ನ ರೂಪ. ಬೆತ್ತಲಾದ ಅವನ ಈ ರೂಪ ಎಷ್ಟು ಭಯಾನಕವಾಗಿದೆ ಎಂದರೆ ಕೊನೆಗೆ ಅತ ನಂಬಿದ ಎಲ್ಲ ಆದರ್ಶಗಳು, ವ್ಯಕ್ತಿಗಳು ಅಂದರೆ ಆತನ ವ್ಯಕ್ತಿತ್ವದ ವಿವಿಧ ಅಂಶಗಳು, ಕಾವ್ಯಮಯತೆ, ಧರ್ಮ ಎಲ್ಲ ಕೈ ಬಿಟ್ಟು ಕೊನೆಗೆ ಅವನು ಏಕಾಕಿ ಹಾಗೂ ಅತಂತ್ರನಾಗುತ್ತಾನೆ. ಈ ಏಕಾಕಿತನ ನವ್ಯ ಸಾಹಿತ್ಯದ ಪ್ರಮುಖ ಅಂಶಗಳಲ್ಲೊಂದು. ಈ ಅಂಶ ಹಲವಾರು ಕವನ ಕಾದಂಬರಿಗಳಲ್ಲಿ ಬಂದಿದ್ದರೂ ಅದು ಅತ್ಯಂತ ಸಮರ್ಥವಾಗಿ, ಅಭಿವ್ಯಕ್ತಿಯಾಗಿರುವುದು ತುಘಲಕನ ಕೊನೆಯಲ್ಲಿ ಎಂದು ಹೇಳಬಹುದು. ಹೀಗೆ ಈ ನಾಟಕದಲ್ಲಿ ಸಂಭಾಷಣೆ, ದೃಶ್ಯಾವಳಿಗಳ ಯೋಜನೆ, ಪ್ರತಿಮೆ, ಸಂಕೇತಗಳು ಎಲ್ಲವೂ ಕ್ರಿಯಾತ್ಮಕವಾಗಿ ನಾಟಕದ ಅನುಭವವನ್ನು ಒಟ್ಟಿನಲ್ಲಿ ಮುಟ್ಟಿಸಲು ಹವಣಿಸುತ್ತವೆ.

ಕಾರ್ನಾಡರ ಮತ್ತೊಂದು ನಾಟಕ 'ಹಯವದನ'(1971). ಈ ನಾಟಕದಲ್ಲಿ 'ವೇತಾಳ ಪಂಚವಿಂಶತಿ'ಯ ಕಪಿಲ ದೇವದತ್ತರ ಕಥೆಯಲ್ಲಿನ ಅರನೆಯ ಕಥೆ ಹಾಗೂ ಇದನ್ನೇ ಮೂಲವಾಗಿಟ್ಟು ಬರೆದ ಟಾಮಸ್‌ಮಾನ್ನನ ಒಂದು ಜರ್ಮನ್ ನೀಳ್ಗತೆಯಿಂದ ಸೃಜನಶೀಲ ಪ್ರೇರಣೆ ಪಡೆದು ಈ ನಾಟಕವನ್ನು ಕಾರ್ನಾಡರು ರಚಿಸಿದ್ದಾರೆ. ಆದರೂ ಅದೇ ನಾಟಕದ ಸಂಪೂರ್ಣ ಚೌಕಟ್ಟಲ್ಲ. ಆ ಕಥೆಯೊಂದಿಗೆ ಕಾರ್ನಾಡರ ಸ್ವಕಪೋಲಕಲ್ಪಿತವಾದ ವಿಚಿತ್ರ ಕುದುರೆಯೊಂದರ ಕಥೆಯೂ ಇದೆ. ಅದೇ ಹಯವದನ. ನಾಟಕದ ಸಂವಿಧಾನ ವಿಧಾನದಲ್ಲಿ ಕಪಿಲ–ದೇವದತ್ತರ ಕಥೆಯೇ ಕೇಂದ್ರದಲ್ಲಿ ಸ್ಥಾಪಿತವಾಗಿ ಬಿಡುತ್ತದೆ.

ಪರಿಪೂರ್ಣತೆಯ ಹಂಬಲ ಮತ್ತು ಹತಾಶೆ ಈ ನಾಟಕದ ಪ್ರಧಾನ ಆಶಯವಾಗಿದೆ. ಕಾಮವನ್ನೇ ಪ್ರಧಾನ ವಸ್ತುವನ್ನಾಗಿ ಸ್ವೀಕರಿಸುವ ಈ ನಾಟಕ ಮೈಮನಸ್ಸುಗಳ ನಡುವಿನ ದ್ವಂದ್ವವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಪರಿಪೂರ್ಣತೆಗಾಗಿ ಹಂಬಲಿಸುವ ಪದ್ಮಿನಿ ಈ ನಾಟಕದ ಕಥಾನಾಯಕಿ. ದೇವದತ್ತನ ಬುದ್ಧಿಶಕ್ತಿ ಹಾಗೂ ಕಪಿಲನ ದೇಹಶಕ್ತಿಗಳೆರಡನ್ನು ಆಕೆ ಬಯಸುತ್ತಾಳೆ. ಈ ಆಯ್ಕೆಯ ಗೊಂದಲದಲ್ಲಿಯೇ ವಿದ್ವಾಂಸನಾದ ದೇವದತ್ತನ ಕೈಹಿಡಿಯುತ್ತಾಳೆ. ಕಪಿಲ ದೇವದತ್ತನ ಆಪ್ತ ಗೆಳೆಯ. ಈ ನಡುವೆ ದೇವದತ್ತನಲ್ಲಿಲ್ಲದ ದೇಹಶಕ್ತಿಯನ್ನು ಬಯಸಿ ಪದ್ಮಿನಿ ಕಪಿಲನಿಗಾಗಿ ಪರಿತಪಿಸುತ್ತಾಳೆ. ಕಪಿಲನ ಮುಗ್ಧತೆ ಚುರುಕುತನಕ್ಕೆ ಆಕೆ ಮಾರುಹೋಗುತ್ತಾಳೆ. ಇದಕ್ಕನುಗುಣವಾಗಿಯೇ ಕಾಳಿಯ ಸಮ್ಮುಖದಲ್ಲಿ ಇವರಿಬ್ಬರು ಬಲಿಯಾಗುತ್ತಾರೆ. ಇವರ ಚಿತೆಯೇರಿ ಪದ್ಮಿನಿ 'ಮಹಾಸತಿ'ಯಾಗುತ್ತಾಳೆ.

ಈ ನಾಟಕದಲ್ಲಿ ಸಮಕಾಲೀನ ಭಾರತದ ಪಾಡು ಹಾಗೂ ಅದರ ಭವಿಷ್ಯ ನವುರಾಗಿ ಧ್ವನಿತವಾಗಿದೆ. ನಾಟಕದ ಮೊದಲಲ್ಲಿ ಬರುವ ಹಯವದನ ಕುದುರೆಮುಖ, ಮನುಷ್ಯ ದೇಹ ಇರುವವನಾದರೂ ಆತ(ಪೌರನೀತಿ, ರಾಷ್ಟ್ರಭಕ್ತಿ, ರಾಷ್ಟ್ರೀಯತೆ, ಭಾರತೀಕರಣ ಸಮಾಜವಾದಗಳಲ್ಲಿ ನಿಷ್ಠೆಯಿರುವ) ಭಾರತೀಯ ಪ್ರಜೆಯ ಸಂಕೇತವಾಗುತ್ತಾನೆ. ಹೀಗಾಗಿ ಕುದುರೆಮುಖ ಹಾಗೂ ಮನುಷ್ಯನ ದೇಹವುಳ್ಳ ಪ್ರಾಣಿಯೊಂದು ಪೂರ್ಣಾಂಶನಾಗಲು ನಡೆಸಿದ ಹೋರಾಟ ಇದಾಗಿದೆ.

ಜನಪದ ರಂಗಭೂಮಿಯ ಎಲ್ಲ ಸಾಧ್ಯತೆಗಳನ್ನು ಬಳಸಿಕೊಂಡ ಈ ನಾಟಕ ತಾಂತ್ರಿಕ ದೃಷ್ಟಿಯಿಂದಲೂ ಸಾಕಷ್ಟು ಗಟ್ಟಿಯಾಗಿದೆ. ಆಧುನಿಕ ಜಾನಪದ ನಾಟಕಗಳ ಪರಂಪರೆಗೆ ಹೊಸ ದೀಕ್ಷೆಯನ್ನು ಕೊಟ್ಟ ನಾಟಕವೆಂಬ ಕೀರ್ತಿಗೂ 'ಹಯವದನ' ಪಾತ್ರವಾಗಿದೆ. ಯಕ್ಷಗಾನದ ಪ್ರೇರಣೆ ಪ್ರಭಾವ ಈ ನಾಟಕದ ಮೇಲೆ ಗಾಢವಾಗಿ ಆಗಿದೆ ಎನ್ನಬಹುದು.

ಕಾರ್ನಾಡರ 'ಅಂಜುಮಲ್ಲಿಗೆ'(1977)ಯ ಮುಖ್ಯ ಪಾತ್ರಗಳು ಭಾರತೀಯವಾದರೂ ಕಥೆ ಮಾತ್ರ ನಡೆಯುವುದು ಇಂಗ್ಲೆಂಡಿನಲ್ಲಿ. ಇದೊಂದು ಪರಿಣಾಮಕಾರಿ ಸಾಮಾಜಿಕ ನಾಟಕ. ಸಾಮಾಜಿಕ ಪ್ರಜ್ಞೆ ತೀರ ಸೂಕ್ಷ್ಮವೂ ಹೆಚ್ಚು ವೈಚಾರಿಕತೆಯಿಂದಲೂ ಕೂಡಿದೆ. ರಂಗದ ಮೇಲೆ ಅಷ್ಟೊಂದು ಯಶಸ್ವಿಯಾಗದಿದ್ದರೂ ಇದೊಂದು ವಿಶಿಷ್ಟ ಬಗೆಯ ನಾಟಕವಾಗಿ ಓದುಗರ ಗಮನ ಸೆಳೆದಿದೆ. ಈ ನಾಟಕ ಯಮ–ಯಮಿಯರ ಪುರಾಣದ ಕತೆಯನ್ನು ನೆನಪಿಗೆ ತರುತ್ತದೆ. ಅಕ್ಕ ತಮ್ಮರ ಮಧ್ಯೆ ಬೆಳೆಯುವ ಸಹಜವಲ್ಲದ ಕಾಮವೇ ಇಲ್ಲಿನ ಮೂಲವಸ್ತು. ಇಂಗ್ಲೆಂಡಿನಲ್ಲಿ ನಡೆಯುವ ಈ ನಾಟಕ ವರ್ಗಕಲಹ, ಇಂಗ್ಲೆಂಡಿನ ಏಷ್ಯನ್ ವಲಸೆಗಾರರ ಸಮಸ್ಯೆಗಳು, ಮನುಷ್ಯನ ಕಾಮ ಪ್ರೇಮದ ಅಂಶಗಳು ಈ ನಾಟಕದಲ್ಲಿ ಚರ್ಚೆಗೆ ಒಳಗಾಗಿವೆ. ಯಾಮಿನಿ ಸತೀಶ ಅಕ್ಕ ತಮ್ಮ. ಆದರೂ ಯಾಮಿನಿ ತಮ್ಮನಲ್ಲಿ ಇನ್ನೇನನ್ನೋ ಕಾಣುತ್ತಾಳೆ. ಅವನನ್ನು ಬಿಟ್ಟಿರಲಾರದೆ ಚಿತ್ರಕಲೆ ಕಲಿಯುವ ನೆವಮಾಡಿಕೊಂಡು ಆಕೆಯೂ ಇಂಗ್ಲೆಂಡಿಗೆ ಬರುತ್ತಾಳೆ. ಅವಳ ಮಾನಸಿಕ ತುಮುಲ, ವಿಕ್ಷಿಪ್ತ ನಡವಳಿಕೆ ಹಾಗೂ ಸತೀಶನ ಗೊತ್ತಿದ್ದೂ ಹೇಳಲಾಗದ, ಬಿಟ್ಟೂ ಬಿಡಲಾಗದ ನೋವು ಇಲ್ಲಿನ ವಸ್ತು. ಇಂತಹ ಅಕ್ಕ ತಮ್ಮನ ದೈಹಿಕ ಸಂಬಂಧ ಅಥವಾ ಲೈಂಗಿಕಾಸಕ್ತಿಯ ಕಥೆಯ ಎಳೆ ಇರುವ ನಾಟಕ ಕನ್ನಡದ ಮನೋಭೂಮಿಕೆಗೆ ಒಗ್ಗದ ಕಾರಣ, ಅಷ್ಟು ಯಶಸ್ವಿಯಾಗಲಿಲ್ಲ.

ಕಾರ್ನಾಡರ 'ಹಿಟ್ಟಿನ ಹುಂಜ'(1980) 'ಅಂಜುಮಲ್ಲಿಗೆ' ನಾಟಕದ ನಂತರದ ಕೃತಿಯಾಗಿದೆ. ಮನುಷ್ಯ ನಂಬಿದ ಮೌಲ್ಯ ಮತ್ತು ಪ್ರವೃತ್ತಿಗಳ ನಡುವಿನ ಮೌನ ಹೋರಾಟವೇ ಈ ನಾಟಕದ ವಸ್ತು. ಜನ್ನನ 'ಯಶೋಧರ ಚರಿತೆ' ಕಾವ್ಯವನ್ನಾಧರಿಸಿದ ನಾಟಕ. ಕಥೆ ಅದೇ ಆದರೂ ಹಿಟ್ಟಿನ ಹುಂಜದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಭಾಗವನ್ನು ಜನ್ನ ಒಂದು ಸಾಮಾನ್ಯ ಘಟನೆಯಾಗಿ ಉಪಯೋಗಿಸಿದ್ದರೆ ಕಾರ್ನಾಡರು ಅದನ್ನೊಂದು ಸತ್ವಪೂರ್ಣ ಸಂಕೇತವಾಗಿ ಬಳಸಿಕೊಳ್ಳುತ್ತಾರೆ. ಜೈನ ಧರ್ಮ, ಅದರ ಕಟ್ಟಳೆಗಳು ಹಾಗೂ ಅಲ್ಲಿನ ನೀತಿಯ ಕಲ್ಪನೆ ಕಾರ್ನಾಡರಿಗೆ ಮುಖ್ಯವಾಗುವುದಿಲ್ಲ. ಯಶೋಧರ ಹಾಗೂ ಇತರ ಪಾತ್ರಗಳ ಮನಸ್ಥಿತಿ ಇಲ್ಲಿ ಅವರಿಗೆ ಮುಖ್ಯ. ಹಾಗೆಯೇ ಮನಸ್ಸಿನ ಗಂಟನ್ನು ತೆಗೆದಿಡಲು ಪ್ರಯತ್ನಿಸಿದ್ದಾರೆ ಕಾರ್ನಾಡರು.

'ಹಿಟ್ಟಿನ ಹುಂಜ' ನಾಟಕವು ಜನ್ನ ಕವಿಯ ಆಶಯಕ್ಕೆ ಭಿನ್ನವಾಗಿ 'ಜೀವದಯೆ ಜೈನಧರ್ಮಂ' ಎಂಬ ತತ್ವವನ್ನು ಹಿಂದೆ ತಳ್ಳಿ 'ಪ್ರವೃತ್ತಿ ಮಾನುಷ ಸಹಜಧರ್ಮಂ' ಎಂಬ ತತ್ವವನ್ನು ಹೇಳಲು ಹೊರಟಿದೆ. ನಾಲ್ಕು ಪಾತ್ರಗಳಲ್ಲಿ ಚಿಕ್ಕದಾಗಿರುವ ಈ ನಾಟಕ, ಕಾರ್ನಾಡರ ಅಭಿವ್ಯಕ್ತಿಗೆ ಕಾರಣವಾಗಿದೆ. ಪುರಾಣಗಳಿಂದ ವಸ್ತುವನ್ನು ಆಯ್ಕೆಮಾಡಿಕೊಂಡು, ಅದನ್ನು ಸಮಕಾಲೀನ ಬದುಕಿನ ಅಂಶವನ್ನಾಗಿ ನೋಡುವ ದೃಷ್ಟಿಕೋನ ಕಾರ್ನಾಡನ ಎಲ್ಲಾ ನಾಟಕಗಳಲ್ಲಿಯೂ ಇದೆ. ಆದರೆ ಇಲ್ಲಿ, ಪ್ರಧಾನವಾಗಿ 'ಹಿಟ್ಟಿನ ಹುಂಜ' ನಾಟಕದಲ್ಲಿ ಅದು ಹೇಗೆ ಸಾಧ್ಯವಾಗಿದೆ ಎಂಬುದನ್ನು ಮತ್ತು ಒಬ್ಬ ಕ್ರಿಯಾಶೀಲ ಬರಹಗಾರ, ಹಳೆಯ ವಸ್ತುವೊಂದನ್ನು, ತನ್ನ ಸಮಕಾಲೀನ ಬದುಕಿನ ಸಂದರ್ಭದಲ್ಲಿ ಹೇಗೆ ದುಡಿಸಿಕೊಳ್ಳಬಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಕಾರ್ನಾಡರ 'ನಾಗಮಂಡಲ'(1988)ವನ್ನು ಅಮೆರಿಕೆಯ ಶಿಕ್ಯಾಗೋ ವಿಶ್ವವಿದ್ಯಾಲಯ ದಲ್ಲಿ ಅತಿಥಿ ಪ್ರಾಧ್ಯಾಪಕರಾಗಿದ್ದಾಗ ಬರೆದದ್ದು. ನಾಗಮಂಡಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಒಂದು ಜಾನಪದ ಪೂಜಾವಿಧಿ ವಿಧಾನ. ಕಾರ್ನಾಡರು ಇಲ್ಲಿ ಆಯ್ದುಕೊಂಡ ಕಥೆಯ ಹಂದರಕ್ಕೆ ಜಾನಪದ ಹಾಗೂ ಫ್ಯಾಂಟಸಿಯ ಆವರಣ ಅನಿವಾರ್ಯವಾಗಿದೆ. ಸ್ತ್ರೀಪರವಾದ ಕಾಳಜಿಯನ್ನು ಹೊಂದಿರುವ ಈ ನಾಟಕವನ್ನು ಜಾನಪದ ಕತೆಯಿಂದ ಕಟ್ಟಲಾಗಿದೆ. ಭಾರತೀಯ ಸಮಾಜ ಪಾಲಿಸಿಕೊಂಡು ಬಂದ ಪಾತಿವ್ರತ್ಯದ ಪರಿಕಲ್ಪನೆಯನ್ನು ಈ ನಾಟಕ ಬುಡಮೇಲು ಮಾಡಿದೆ ಎನ್ನಬಹುದು.

ಇದೊಂದು ಸ್ತ್ರೀಕೇಂದ್ರಿತ ಚಿಂತನೆಯನ್ನು ಒಳಗೊಂಡಿರುವ ಉತ್ತಮ ನಾಟಕ. ನಾಯಕ ಅಪ್ಪಣ್ಣ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯ ಪ್ರತೀಕವಾದರೆ ಅವನ ಹೆಂಡತಿ ರಾಣಿ ನಾಲ್ಕು ಗೋಡೆಯ ಮಧ್ಯೆ ಬಂದಿಯಾದ ಹೆಣ್ಣು. ರಾತ್ರಿ ಪ್ರೀತಿಸುವ, ಹಗಲು ಶೋಷಿಸುವ ಗಂಡನನ್ನು ಕಟ್ಟಿಕೊಂಡು ಕಥಾನಾಯಕಿ ರಾಣಿ ಜೀವನ ನಡೆಸುತ್ತಾಳೆ. ಅಪ್ಪಣ್ಣನಿಗೆ ಮನೆಯ ಹೊರಗೆ ವಿವಾಹೇತರ ಸಂಬಂಧ ಇದೆ. ರಾತ್ರಿ ಹೆಂಡತಿಯನ್ನು ಮನೆಯನ್ನುಟ್ಟು ಬೀಗಹಾಕಿ ಹೋದರೆ ಮತ್ತೆ ಅವನು ಬರುವದು ಮರುದಿನ ಮುಂಜಾನೆಯೇ. ಗಂಡನನ್ನು ಒಲಿಸಿಕೊಳ್ಳಲು ಕುರುಡವ್ವ ರಾಣಿಗೆ ಕೊಟ್ಟ ಬೇರಿನ ಕಷಾಯವನ್ನು ಆಕೆ ಗಾಬರಿಯಿಂದ ಹಾವಿನ ಹುತ್ತಕ್ಕೆ ಎರೆಯುವುದರ ಪರಿಣಾಮವಾಗಿ ರಾತ್ರಿಯ ಹೊತ್ತು ನಾಗರ ಅಪ್ಪಣ್ಣನ ರೂಪದಲ್ಲಿ ಬಂದು ರಾಣಿಯನ್ನು ಕೂಡುತ್ತಾನೆ. ರಾಣಿ ಗರ್ಭಿಣಿಯಾದದ್ದು ಬಯಲಾದಾಗ ಗಂಡ ಅಪ್ಪಣ್ಣ ಅವಳಿಗೆ ಹಾವಿನ ಹುತ್ತದಲ್ಲಿ ಕೈ ಇಡುವ ನಾಗದಿವ್ಯದ ಪರೀಕ್ಷೆ ಊರ ಪಂಚಮರೆದುರು ಇಡುತ್ತಾನೆ. ರಾತ್ರಿ ಹೊತ್ತು ಬಂದು ಕೂಡುತ್ತಿದ್ದ ನಾಗರವೇ ಹುತ್ತದಲ್ಲಿದ್ದು ರಾಣಿಯನ್ನು ಕಾಪಾಡುತ್ತದೆ. ನಾಗದಿವ್ಯ, ನಡೆದು ರಾಣಿ ಅದರಲ್ಲಿ ಗೆಲ್ಲುತ್ತಾಳೆ. ನಾಗಪ್ಪ ರಾಣಿಯ ಕೂದಲಲ್ಲಿ ಸೇರಿ ಸಾವನ್ನಪ್ಪುತ್ತಾನೆ. ರಾಣಿ ತನ್ನ ಮಗನ ಮೂಲಕ ಅವನ ಸಂಸ್ಕಾರ ಮಾಡಿಸುತ್ತಾಳೆ. ಈ ಮೂಲಕ ಜಾನಪದ ಕತೆಯೊಂದನ್ನು ಆಧುನಿಕ ಅರಿವಿನ ನಡುವೆ ತಂದು ಮುಖಾಮುಖಿಗೊಳಿಸಲಾಗಿದೆ. ಹೀಗೆ ಯಾವುದೇ ಕಾಲದ ವಸ್ತುವನ್ನು ಎತ್ತಿಕೊಂಡರೂ ಸಮಕಾಲೀನ ಚಿಂತನೆಗಳಿಗೆ ಹೊಂದಿಕೊಳ್ಳುವಂತೆ ಮಾಡುವಲ್ಲಿ ಕಾರ್ನಾಡರು ತಮ್ಮ ನಾಟಕಗಳಲ್ಲಿ ಯಶಸ್ವಿಯಾಗಿದ್ದಾರೆ.

ನಾಗಮಂಡಲ ನಾಟಕದಲ್ಲಿನ ಮೇಳ, ಮುಖವಾಡ, ಮೇಲ್ನೋಟಕ್ಕೆ ಸಂಬಂಧವಿಲ್ಲದಂತೆ ಕಾಣುವ ಕಪ್ಪಣ್ಣ, ದೀಪದ ಮಲ್ಲಿ, ಕುರುಡವ್ವನ ಉಪಕಥೆಗಳು, ಮನುಷ್ಯ ಮತ್ತು ಮನುಷ್ಯೇತರ ಜೀವಿಗಳನ್ನು ಒಟ್ಟಿಗೆ ತರುವುದು, ಇವೆಲ್ಲವೂ ಕಾರ್ನಾಡರಿಗೆ ವಿವಿಧ ದೃಷ್ಟಿಕೋನಗಳನ್ನು ಒಟ್ಟಿಗೆ ತರಲು ಸಹಾಯಕವಾಗಿವೆ.

ಈ ನಾಟಕ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ತರ್ಜುಮೆಗೊಂಡಿದೆ. ಈ ನಾಟಕವನ್ನು 1990ರಲ್ಲಿ ಕಾರ್ನಾಡರೇ ಆಂಗ್ಲ ಭಾಷೆಗೆ ಭಾಷಾಂತರಿಸಿದರು. 1992ರಲ್ಲಿ ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. ನಾಗಮಂಡಲ ನಾಟಕವು ಹಲವಾರು ಭಾಷೆಗಳಲ್ಲಿ ಹಲವು ರೀತಿಯ ಪ್ರಯೋಗಕ್ಕೆ ಒಳಪಟ್ಟು ಜನಪ್ರಿಯವಾಗಿದೆ. ಭಾರತೀಯ ಜಾನಪದ ಸೊಗಡಿನ ಈ ನಾಟಕ ಕೇವಲ ಭಾರತವಲ್ಲದೆ ಅಮೇರಿಕವೂ ಸೇರಿದಂತೆ ವಿಶ್ವದ ಹಲವು ದೇಶಗಳಲ್ಲಿ ಯಶಸ್ವಿ ಪ್ರದರ್ಶನ ಕಂಡಿದೆ.

ಕಾರ್ನಾಡರ ಐತಿಹಾಸಿಕ ವಸ್ತುವನ್ನು ಆಧರಿಸಿದ ಮತ್ತೊಂದು ನಾಟಕ 'ತಲೆದಂಡ' (1990). ವಾಸ್ತವತೆಯ ದಾರಿಯಲ್ಲೇ ಇರುವ ಈ ನಾಟಕದಲ್ಲಿ ಮೇಲ್ನೋಟಕ್ಕೆ 'ತುಘಲಕ್'ನಂತೆ ನವ್ಯವಾದದ ದರ್ಶನವೇ ಇರುವಂತೆ ಗೋಚರಿಸಿದರೂ, ಮೂಲಭೂತವಾಗಿ ಇಲ್ಲಿ ಇತಿಹಾಸವನ್ನು ನೋಡುವ ದೃಷ್ಟಿಯೇ ಬದಲಾಗಿದೆ. ಇದು ಬಿಜ್ಜಳರ ಯುಗವನ್ನು ಪ್ರತಿನಿಧಿಸುತ್ತದೆ. ಈ ಯುಗ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವಪೂರ್ಣವಾದ ಘಟ್ಟ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಒಂದು ಕ್ರಾಂತಿಯನ್ನೇ ಮಾಡಿದ ಯುಗವದು. ಹನ್ನೆರಡನೆಯ ಶತಮಾನದ ಈ ಅದ್ಭುತ ಬೆಳವಣಿಗೆ ಈ ಇಪ್ಪತ್ತನೆಯ ಶತಮಾನದಲ್ಲೂ ಆಧುನಿಕ ಕನ್ನಡದ ಲೇಖಕರನ್ನು ಕಾಡದೇ ಇರದು.

ಬಸವಣ್ಣ ಇತಿಹಾಸದ ಸೃಷ್ಟಿಕಾರನಾಗಿದ್ದರೂ, ಅವನು ಹುಟ್ಟು ಹಾಕಿದ ಶಕ್ತಿಗಳನ್ನು ಅವನನ್ನು ಮೀರಿ ನಡೆಯುತ್ತವೆ. ಹೀಗೆ ಇತಿಹಾಸದ ಬೆಳವಣಿಗೆಯ ಹಿಂದೆ ಕೆಲವು ವ್ಯಕ್ತಿ ಪ್ರೇರಿತ ಶಕ್ತಿಗಳಷ್ಟೇ ಅಲ್ಲದೇ, ಇಡೀ ಸಮಷ್ಟಿಯ ಶಕ್ತಿಯನ್ನು ಗುರುತಿಸುವುದರಲ್ಲಿ ಈ ನಾಟಕ 'ತುಘಲಕ್'ಗಿಂತ ಭಿನ್ನವಾಗುತ್ತದೆ. ಹಾಗೆಯೇ ರಾಜಕೀಯ ಬೆಳವಣಿಗೆಯ ಹಿಂದೆ ಕೆಲಸ ಮಾಡುತ್ತಿರುವ ಆರ್ಥಿಕ, ಸಾಮಾಜಿಕ, ಧಾರ್ಮಿಕ ಶಕ್ತಿಗಳನ್ನೂ ಇಲ್ಲಿ ಕಾರ್ನಾಡರು ಗುರುತಿಸುವ ಪ್ರಯತ್ನಮಾಡಿದ್ದಾರೆ. ಇತಿಹಾಸವನ್ನು ಈ ಆಯಾಮದಲ್ಲಿ ಪರಿಪೂರ್ಣ ದೃಷ್ಟಿಯಿಂದ ನೋಡುವುದರಲ್ಲಿ, ಸಮಷ್ಟಿಯ ಪಾತ್ರವನ್ನು ಪರಿಗ್ರಹಿಸುವುದರಲ್ಲಿ, ಆಧುನಿಕೋತ್ತರ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಹೀಗಿದ್ದರೂ ನವ್ಯವಾದದ ಹಲವಾರು ಅಂಶಗಳೂ ಈ ನಾಟಕದಲ್ಲಿ ಪ್ರಬಲವಾಗಿ ಮೂಡಿಬರುತ್ತವೆ.

ತಲೆದಂಡದಲ್ಲಿ ಬಸವಪುರಾಣವನ್ನಾಗಲೀ, ಬಿಜ್ಜಳನ ಚರಿತ್ರೆಯನ್ನಾಗಲೀ ಏಕಮುಖವಾಗಿ ಬರೆಯುತ್ತಿಲ್ಲ. ಆ ಕಾಲದ ಸತ್ವಕ್ಕಾಗಿ ಶೋಧಿಸುತ್ತಿದ್ದಾರೆ. ಆ ಯುಗದ ತಲ್ಲಣಗಳಿಗೆ ಸ್ಪಂದಿಸುತ್ತಾರೆ. ಬಸವ–ಬಿಜ್ಜಳ ಈ ನಾಟಕದಲ್ಲಿ ಬರಿ ಕಲ್ಪನೆಗಳಾಗಿ ಬರುವುದಿಲ್ಲ. ಬದಲಾಗಿ ರಕ್ತ–ಮಾಂಸಗಳಿಂದ ಮಾಡಿದ ಮನುಷ್ಯರಾಗಿ ಬರುತ್ತಾರೆ. ಗಟ್ಟಿಮುಟ್ಟಾದ ವ್ಯಕ್ತಿಗಳನ್ನುಳ್ಳ ದೈತ್ಯದ ಪಾತ್ರಗಳು ಅವು.

ತಲೆದಂಡ ಮೂರು ಅಂಕಗಳ, ಒಟ್ಟು ಹದಿನಾರು ದೃಶ್ಯಗಳ ಒಂದು ಪೂರ್ಣಪ್ರಮಾಣದ ನಾಟಕ. ನಾಟಕದ ಸಂವಾದ, ವಸ್ತುರಚನೆ ಮತ್ತು ಪಾತ್ರರಚನೆ, ಇದೆಲ್ಲವೂ ಏಕೀಭವಿಸಿ ನಾಟಕದ ತಾತ್ವಿಕತೆ ನಿರೂಪಣೆಗೊಂಡಿದೆ. ಈ ನಾಟಕದ ಮೊದಲ ಎರಡು ಅಂಕಗಳಲ್ಲಿ ಕೇವಲ ಆರು ದೃಶ್ಯಗಳು; ಮೂರನೆಯ ಅಂಕದಲ್ಲಿ ಹತ್ತು ದೃಶ್ಯಗಳಿವೆ. ಐದನೆಯ ದೃಶ್ಯಕ್ಕೆ ಇಪ್ಪತ್ತು ಪುಟಗಳ ವಿಸ್ತಾರವಿದ್ದರೆ, ಹದಿನೈದನೆಯ ದೃಶ್ಯ ಕೇವಲ ಅರ್ಧಪುಟವಿದೆ. ನಾಟಕದ ಕ್ರಿಯಾವಿನ್ಯಾಸಕ್ಕನುಗುಣವಾಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಖಚಿತವಾದ ಲೆಕ್ಕಾಚಾರದಂತೆ ಅಂಕ, ದೃಶ್ಯ ವಿಂಗಡಣೆಗಳಿರುವುದು ಈ ವಸ್ತು ರಚನೆಯ ವೈಶಿಷ್ಟ್ಯ. ಸಾಂಬಶಿವಶಾಸ್ತ್ರಿ ಮರಣದೃಶ್ಯದಿಂದ ಮೊದಲಾಗುವ ನಾಟಕವು, ಸೋವಿದೇವನ ಅರಾಜಕ ಹಿಂಸಾಚಾರಗಳ ಮುನ್ಸೂಚನೆ ಯೊಂದಿಗೆ ಮುಕ್ತಾಯ ಹೊಂದಿದೆ. ನಡುವಿನ ದೃಶ್ಯಗಳಲ್ಲಿ ಬಸವಣ್ಣನ ಪದವಿ ತ್ಯಾಗ, ವರ್ಣಸಂಕರಕ್ಕೆ ಕಾರಣವಾಗುವ ಲಗ್ನ, ಹರಳಯ್ಯ ಮಧುವರಸನ ತಲೆದಂಡ, ಬಸವಣ್ಣ ಕಲ್ಯಾಣದಿಂದ ನಿರ್ಗಮಿಸುವುದು, ಬಿಜ್ಜಳನ ಹತ್ಯೆ ಮುಂತಾದ ಘಟನಾವಳಿಗಳು ಕಣ್ಮುಂದೆ ಬಂದು ಹೋಗುತ್ತವೆ.

ತಲೆದಂಡದ ನಿಜವಾದ ವಸ್ತು ಸಾಮಾಜಿಕ ಹಾಗೂ ರಾಜಕೀಯ ಕ್ರಾಂತಿ ಹಾಗೂ ಈ ಕ್ರಾಂತಿಯ ವೈಫಲ್ಯದಿಂದ ಒಂದು ಸ್ಥಿತಿ. ನಿಜವಾದ ಕ್ರಾಂತಿ – ಕೊನೆಯಿಲ್ಲದ ಒಂದು ಪ್ರಕ್ರಿಯೆಯಾಗಿರುವುದರಿಂದ ಹಾಗೂ ಅದರ ಪರಿಣಾಮಗಳು ದೂರಗಾಮಿಯಾಗಿ ರುವುದರಿಂದ ಸೋಲು ಅದರ ಒಂದು ಅವಸ್ಥೆಯನ್ನು ಮಾತ್ರ ಸೂಚಿಸುತ್ತದೆ. ಈ ಮಾತು ವೀರಶೈವಶರಣರ ಕ್ರಾಂತಿಗೂ ಅನ್ವಯಿಸುವಂತಹ ಮಾತು. ನಾಟಕ ಕ್ರಾಂತಿಯ ಸ್ವರೂಪ ಹಾಗೂ ಅದರ ಸೋಲು–ಗೆಲುವುಗಳಿಗೆ ಕಾರಣವಾದ ಸಾಮಾಜಿಕ ರಾಜಕೀಯ ಶಕ್ತಿಗಳ ಶೋಧವಾಗಿರುವುದರಿಂದ ಅದು ಸಾರ್ವತ್ರಿಕ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ.

ತಲೆದಂಡದಲ್ಲಿ ಮುಖ್ಯವಾಗಿ ಎರಡು ಪ್ರಬಲ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಗಳ ಸಂಘರ್ಷವಿದೆ. ಸ್ಥೂಲವಾಗಿ ಈ ಶಕ್ತಿಗಳನ್ನು ಪ್ರತಿಗಾಮೀ ಹಾಗೂ ಪುರೋಗಾಮೀ ಶಕ್ತಿಗಳೆಂದು ಗುರುತಿಸಬಹುದು. ನಾಟಕದ ಆರಂಭದಲ್ಲಿ ತೆರೆಯ ಮರೆಯಲ್ಲಿ ನಡೆದಿರುವ ಈ ಸಂಘರ್ಷ ನಾಟಕದ ಕೊನೆಯಲ್ಲಿ ಬಹಿರಂಗ ಸ್ವರೂಪವನ್ನು ತಳೆದು ಪ್ರತಿಗಾಮೀ ಶಕ್ತಿಗಳ ವಿಜಯದಲ್ಲಿ ಕೊನೆಗೊಳ್ಳುತ್ತದೆ. ನಾಟಕದಲ್ಲಿಯ ಪಾತ್ರಗಳು ಸಹ ಒಂದಿಲ್ಲೊಂದು ರೀತಿಯಿಂದ ಈ ಎರಡು ಶಕ್ತಿಗಳನ್ನು ಪ್ರತಿನಿಧಿಸುತ್ತವೆ.

ಕಾರ್ನಾಡರ 'ಅಗ್ನಿ ಮತ್ತು ಮಳೆ'(1995) ಪೌರಾಣಿಕ ನಾಟಕ. ಇದುವರೆಗೆ ಬರೆದ ನಾಟಕಗಳಲ್ಲಿಯೇ ಅತ್ಯಂತ ಮಹತ್ವಾಕಾಂಕ್ಷೆಯದು. ಈ ಮಾತು ನಾಟಕದ ವಸ್ತುವಿಗೆ ಅನ್ವಯಿಸಿದಂತೆ ಅದರ ತಂತ್ರಕ್ಕೂ ಅನ್ವಯಿಸುತ್ತದೆ. ಮಹಾಭಾರತದ ವನಪರ್ವದಲ್ಲಿ ಬರುವ ಲೋಮಶರು ಯುಧಿಷ್ಠರನಿಗೆ ಹೇಳಿದ ಯವಕ್ರೀತ ಕಥೆ ನಾಟಕಕ್ಕೆ ಮುಖ್ಯ(ಅಧ್ಯಾಯ 135–138) ವಸ್ತುವನ್ನೊದಗಿಸಿದೆ. "ಈ ಕತೆ ನನ್ನ ಕಣ್ಣಿಗೆ ಬಿದ್ದದ್ದು ಕಾಲೇಜಿನಲ್ಲಿದ್ದಾಗ..... ಓದಿದೊಡನೆ ತಲೆ ಕಚ್ಚಿಕೊಂಡ ಈ ಕತೆ ಮೂವತ್ತೇಳು ವರ್ಷಗಳ ಕಾಲ ನಿರಂತರವಾಗಿ ಕಾಡಿತು ಎಂದು ಗಿರೀಶ್ ಕಾರ್ನಾಡರು ಒಂದೆಡೆ ಬರೆದುಕೊಳ್ಳುತ್ತಾರೆ. 1993ರಲ್ಲಿ ಅಮೇರಿಕದ ಮಿನಿಯಾ ಪೊಲೀಸ್ ನಗರದ ಗಥ್ರೀ ಥಿಯೇಟರ್ ನಾಟ್ಯಸಂಸ್ಥೆಯವರು ನನಗೆ ಅವರ ರಂಗಭೂಮಿಗಾಗಿ ಒಂದು ಹೊಸ ನಾಟಕವನ್ನು ಬರೆಯಹೇಳಿದರು" ('ಅಗ್ನಿ ಮತ್ತು ಮಳೆ', ಕೃತಜ್ಞತೆಗಳು). ಈ ನಾಟಕ ವಸ್ತು ನಿರ್ವಹಣೆಯ ದೃಷ್ಟಿಯಿಂದ ವಿಭಿನ್ನ ಆಯಾಮಗಳನ್ನು ಒಳಗೊಂಡಿದೆ. ಯವಕ್ರೀತನ ಕಥೆ, ಇಂದ್ರವಿಜಯದ ಕಥೆ, ನಾಟಕವನ್ನಾಡುವ ನಟರ ಕಥೆ– ಹೀಗೆ ನಾಲ್ಕು ಘಟ್ಟಗಳಲ್ಲಿ ಕಥನದ ಶಿಲ್ಪ(ಸ್ಟ್ರಕ್ಚರ್) ಏರ್ಪಡುತ್ತದೆ. ಮಹಾಭಾರತದೊಡನೆ ಯಾವ ಸಂಬಂಧವೂ ಇಲ್ಲದ ನಿಷಾದಕನ್ಯೆ ನಿತ್ತಿಲೆಯ ಕಥೆ ಹಾಗೂ 'ಇಂದ್ರ ವಿಜಯ' ನಾಟಕವನ್ನು ಆಡಿ ತೋರಿಸುವ ನಟರ ಕಥೆಗಳೂ ಸೇರಿವೆ. ಮೂಲಕಥೆಯನ್ನು ಹಲವು ನಿಟ್ಟಿನಿಂದ ಮಾರ್ಪಡಿಸಿಕೊಂಡಿರುವ ನಾಟಕಕಾರರು ಪಾತ್ರ ಸಂಯೋಜನೆ ಮತ್ತು ಸನ್ನಿವೇಶ ನಿರ್ಮಾಣದಲ್ಲಿ ಹೊಸತನವನ್ನು ಕಟ್ಟಿಕೊಟ್ಟಿದ್ದಾರೆ.

ಈ ನಾಟಕದಲ್ಲಿ ಪೌರಾಣಿಕ ಅಂಶ ಅನ್ನುವುದು ಒಂದು ಹೊಸ ಆಸಕ್ತಿಯಾಗಿಯೇನೂ ಬರುವುದಿಲ್ಲ ಅಥವಾ ಕಾರ್ನಾಡ್ ಇಲ್ಲಿ ತಮ್ಮ ಹಳೆಯ ಆಸಕ್ತಿಗಳಿಂದ ತುಂಬ ದೂರ ಚಲಿಸಿಯೂ ಇಲ್ಲ. ಅವರ ಹಿಂದಿನ ನಾಟಕಗಳಲ್ಲಿ ಆದಂತೆ ಇಲ್ಲಿ ಕೂಡ ಪೌರಾಣಿಕ ಅಂಶವು ಎರಡು ಪರಸ್ಪರ ಭಿನ್ನವಾದ ಮತ್ತು ವಿರುದ್ಧವಾದ ಮೌಲ್ಯ ವ್ಯವಸ್ಥೆಗಳ ಕೂಡುಬಿಂದುವಾಗಿ ಕೆಲಸ ಮಾಡುತ್ತದೆ. ಈ ಮೌಲ್ಯವ್ಯವಸ್ಥೆಗಳ ಬೆಸೆಯುವಿಕೆಯಿಂದ ಉಂಟಾದ ಪರಿಣಾಮಗಳ ಬಗ್ಗೆ ವ್ಯಾಖ್ಯಾನ ಮಾಡುವ ಮೊದಲು ಅವುಗಳನ್ನು ಕಾರ್ನಾಡ್ ಅವರು ಹೇಗೆ ಬೆಸೆದಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಈ ನಾಟಕದಲ್ಲಿ ಸಾಂಸ್ಕೃತಿಕ ಸಂಘರ್ಷಕ್ಕಿಂತ ಸಾಂಸ್ಕೃತಿಕ ಸಂಬಂಧಗಳ ವಿನ್ಯಾಸಗಳ ವಿನ್ಯಾಸಕ್ಕೆ ಹೆಚ್ಚಿನ ಲಕ್ಷ್ಯ ದೊರೆತಿದೆ. ಈ ವಿನ್ಯಾಸದಲ್ಲಿ 'ಇಂದ್ರ ವಿಜಯ'ದ ಸಂಕೇತಿಸುವ ವೈದಿಕ ದೇವತೆಗಳು, ಆಶ್ರಮ ಹಾಗೂ ಯಜ್ಞಶಾಲೆಗಳನ್ನೊಳಗೊಂಡ ಬ್ರಾಹ್ಮಣರು, ನಿತ್ತಿಲೆಯ ಕಥೆಯಲ್ಲಿ ಬರುವ ವಿಷಾದರು ಹಾಗೂ ಒಂದು ರೀತಿಯಿಂದ ಬಹಿಷ್ಕೃತ ವರ್ಗಗಳಿಗೆ ಸೇರಿದ ನಟವರ್ಗ ಸೇರಿದ್ದಾರೆ. ಇದರಿಂದಾಗಿ ಪ್ರಧಾನ ಸಂಸ್ಕೃತಿಯೊಡನೆ ಉಪಸಂಸ್ಕೃತಿಯೂ ಬೆರೆತು ಸಮಗ್ರತೆಯ ಕಲ್ಪನೆ ತಂದು ಕೊಡುತ್ತದೆ. ಈ ಸಾಂಸ್ಕೃತಿಕ ವಿನ್ಯಾಸವನ್ನೂ ಮೀರಿದ ಮಾನವೀಯ ಸಂಬಂಧಗಳ ವಿನ್ಯಾಸ, ತಂದೆ–ಮಗ, ಗಂಡು–ಹೆಣ್ಣು, ವ್ಯಕ್ತಿ–ಸಮಾಜ ನಾಟಕದಲ್ಲಿ ಅಂತರಂಗವನ್ನು ರೂಪಿಸಿದೆ. ತಮ್ಮ ವಸ್ತುವಿನ ನಾಲ್ಕೂ ಮುಖಗಳಲ್ಲಿ ಏಕರೂಪತೆ ತರಲು ಕಾರ್ನಾಡರು ಹಲವಾರು ವಿಧಾನಗಳನ್ನು ಬಳಸಿಕೊಂಡಿದ್ದಾರೆ.

ಒಟ್ಟಾರೆಯಾಗಿ 'ಅಗ್ನಿ ಮತ್ತು ಮಳೆ' ನಾಟಕ ವಿಭಿನ್ನ ಆಯಾಮಗಳನ್ನು ಒಳಗೊಂಡ ಕಥನ. ಮೊದಲಿಗೆ ಯಜ್ಞ ಮತ್ತು ನಾಟಕದ ಪ್ರಶ್ನೆ ಉದ್ಭವಿಸಿ, ಅವುಗಳ ನಡುವೆ ಅಣ್ಣ ತಮ್ಮಂದಿರ ದ್ವೇಷದ ನೆಲೆಗಳು ತೆರೆದುಕೊಳ್ಳುತ್ತವೆ. ಮತ್ತೊಂದು ಕಟೆ ವೈವಾಹಿಕ ಸಂಬಂಧದ ಆಚೆಗಿನ ವೈರುಧ್ಯಗಳಿವೆ. ವಿಶಾಖಾ, ಯವಕ್ರೀತ, ಪರಾವಸು ಮತ್ತು ನಿತ್ತಿಲೆ, ಅರವಸು, ಯಜಮಾನ– ಇವರ ವಿವಾಹಬಾಹಿರ ಸಮಸ್ಯೆಗಳು ತಲೆದೋರುತ್ತವೆ. ಈ ಅಂಶಗಳಿಗಿಂತ ಮುಖ್ಯವೆನಿಸುವುದು ಜನಾಂಗ–ಸಂಸ್ಕೃತಿಗೆ ಸಂಬಂಧಿಸಿದ ನಾಟಕಕಾರನ ಕಾಳಜಿಗಳು. ಬ್ರಾಹ್ಮಣನಾದ ಅರವಸು ಜಾತಿಗಾರರೊಂದಿಗೆ ಬೆರೆತು ನಾಟಕವಾಡಿ ಬ್ರಾಹ್ಮಣ್ಯವನ್ನು ಕಳೆದುಕೊಳ್ಳುವ ಬಗೆ, ನಿಷಾದಕನ್ಯೆ ನಿತ್ತಿಲೆ ಬ್ರಾಹ್ಮಣನಾದ ಅರವಸುವನ್ನು ಬಯಸುವುದು ಮುಂತಾದ ಸಂಗತಿಗಳೆಲ್ಲಾ ಸಮಷ್ಟಿ ಜೀವನದ ಕಡೆಗೆ ಒತ್ತು ನೀಡಿದಂತೆ ಭಾಸವಾಗುತ್ತದೆ.

ಗಿರೀಶ್ ಕಾರ್ನಾಡರ 'ಟಿಪ್ಪು ಸುಲ್ತಾನ ಕಂಡ ಕನಸು'(1999) ಐತಿಹಾಸಿಕ ನಾಟಕವಾಗಿದೆ. ಮೈಸೂರು ಹುಲಿ ನಾಮಾಂಕಿತ ಟಿಪ್ಪು ಸುಲ್ತಾನನ ಕೊನೆಯ ದಾರುಣ ದುರಂತದ ಹಿನ್ನೆಲೆಯಲ್ಲಿ ಈ ನಾಟಕ ರೂಪುಗೊಂಡಿದೆ. ತನ್ನ ಇಡೀ ಬದುಕನ್ನು ಯುದ್ಧದಾಯಸದಲ್ಲೇ ಕಳೆದ ಟಿಪ್ಪು ಸುಲ್ತಾನ ಗುಟ್ಟಾಗಿ ತನ್ನ ಕನಸುಗಳನ್ನು ಬರೆದಿಡುತ್ತಿದ್ದನಂತೆ. ಆತನ ಕನಸುಗಳು ಈ ನಾಟಕದ ಕುಸುರಿಯಲ್ಲಿ ಹುದುಗಿ ಹೋಗಿವೆ. ಟಿಪ್ಪುವಿನ ಬದುಕನ್ನು ದಾಖಲಿಸಲು ಪ್ರಯತ್ನಿಸುವ ಇತಿಹಾಸಕಾರರಾದ ಕಿರಮಾನ ಮತ್ತು ಮೆಕೆಂಜೀಯವರ ಸಂವಾದದೊಂದಿಗೆ ನಾಟಕ ಆರಂಭವಾಗುತ್ತದೆ. ಟಿಪ್ಪುವಿನ ಸಾವು, ಅದಕ್ಕೂ ಮುನ್ನ ಆತ ಕಂಡ ಕನಸುಗಳ ಚಿತ್ರಣವೂ ಈ ನಾಟಕದ ಮುಂದಿನ ಭಾಗದಲ್ಲಿ ಒಂದೊಂದಾಗಿ ಬಿಚ್ಚಿಕೊಳ್ಳುತ್ತದೆ. ಬ್ರಿಟಿಷರ ಒಡೆದು ಆಳುವ ನೀತಿ, ಇಂಗ್ಲಿಷ್–ಮರಾಠರ ಸಂಬಂಧ, ಟಿಪ್ಪುವಿನ ವೈಯಕ್ತಿಕ ಕೌಟುಂಬಿಕ ಬದುಕು, ಟಿಪ್ಪುವಿನ ದೂರಾಲೋಚನೆಗಳೆಲ್ಲ ಈ ನಾಟಕದ ಹತ್ತು ದೃಶ್ಯಗಳಲ್ಲಿ ತೀವ್ರವಾಗಿ ಹಾದು ಹೋಗುತ್ತದೆ.

ಟಿಪ್ಪು ಕಂಡ ಕನಸುಗಳು ನನಸಾಗುವುದಿಲ್ಲ. ಟಿಪ್ಪು ಸೋತು ಗೆದ್ದ ನಾಯಕನಾಗಿ ರಾಷ್ಟ್ರ ಪ್ರೇಮಿಯಾಗಿ ಈ ನಾಟಕದಲ್ಲಿ ಕಂಗೊಳಿಸುತ್ತಾನೆ. ಆತನ ದುರಂತದ ಕತೆ ಬರೀ ವೈಯಕ್ತಿಕವಾಗದೇ ರಾಷ್ಟ್ರದ ದುರಂತವಾಗಿ ಪರಿಣಮಿಸುತ್ತದೆ. ಮುಂದೆ ಇಡೀ ಭಾರತ ಬ್ರಿಟಿಷರ ಕೈವಶವಾಗುತ್ತದೆ.

– 19ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಶಿವರಾಮ ಕಾರಂತರ ಸಾಹಿತ್ಯದಲ್ಲಿನ ಶೈಕ್ಷಣಿಕ ಮೌಲ್ಯಗಳು

✍ **ರವಿ ಹೆಚ್.** ಸಹಾಯಕ ಪ್ರಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ.

**ಪೀಠಿಕೆ**



ಕಡಲತೀರದ ಭಾರ್ಗವ, ನಡೆದಾಡುವ ವಿಶ್ವಕೋಶ, ಹುಚ್ಚು ಮನಸ್ಸಿನ ಹತ್ತು ಮುಖದ, ಆಡು ಮುಟ್ಟದ ಸೊಪ್ಪಿಲ್ಲ ಎಂದೇ ಖ್ಯಾತರಾಗಿದ್ದ ಕನ್ನಡ ಸಾಹಿತ್ಯ-ಸಂಸ್ಕೃತಿಯ ವಕ್ತಾರ, ಕವಿ, ಕಾದಂಬರಿಕಾರ, ನಾಟಕಕಾರ, ಅನುವಾದಕ, ವೈಜ್ಞಾನಿಕ ಬರಹಗಾರರಾದ ಕಾರಂತಜ್ಜ ಕೈಹಾಕದ ಕ್ಷೇತ್ರವಿಲ್ಲ ಎಂದು ಗುರುತಿಸಲ್ಪಡುತ್ತಿದ್ದ ಕೋಟ ಶಿವರಾಮ ಕಾರಂತರನ್ನು ಪರಿಚಯ ಮಾಡಿಕೊಡುವುದು ಕುರುಡನಿಗೆ ಆನೆಯನ್ನು ವಿವರಿಸುವುದೂ ಒಂದೇ. ನಮ್ಮ ಊಹೆಗೆ ನಿಲುಕದ ವ್ಯಕ್ತಿತ್ವ ಮತ್ತು ಜೀವನ ಅವರದು. ಅವರು ಹೇಗಿದ್ದರು ಎನ್ನುವುದಕ್ಕಿಂತ ಹೀಗೆಲ್ಲ ಇದ್ದವರೇ ಎಂದು ಉದ್ಗಾರ ತೆಗೆಯುವುದೇ ನಮ್ಮ ಪಾಲಿಗೆ ಉಳಿದದ್ದು. ಅವರು ನುಡಿದಂತೆ ನಡೆದವರು. ಇವರು ಕೇವಲ ಕವಿಯಾಗಿ ಗೋಚರಿಸದೆ ಯುಗ ಯುಗಗಳ ಮನುಕುಲದ ವಕ್ತಾರರಾಗಿ ಕಾಣಿಸುತ್ತಾರೆ ಎಂಬುದೊಂದು ವಿಸ್ಮಯ.

ಅಕ್ಟೋಬರ್ 10, 1902ರಲ್ಲಿ ತಂದೆ ಶೇಷ ಕಾರಂತರು ಮತ್ತು ತಾಯಿ ಲಕ್ಷ್ಮಮ್ಮನವರ ನಾಲ್ಕನೇ ಮಗನಾಗಿ ಜನಿಸಿದ ಇವರು ಆಧ್ಯಾತ್ಮ ಮತ್ತು ಸಾಹಿತ್ಯದ ಹಿನ್ನಲೆಯುಳ್ಳ ಅಣ್ಣ ಮತ್ತು ರಾಜಕೀಯ ಹಿನ್ನಲೆಯ ಮತ್ತೊಬ್ಬ ಅಣ್ಣನ ಸಹಜ ಸಂಪರ್ಕದಿಂದ ವಿದ್ಯಾಭ್ಯಾಸದ ಜೊತೆಗೆ ವಿಶಿಷ್ಟ ಶೈಲಿಯ ಸಾಹಿತ್ಯ ಸೃಷ್ಟಿಯ ಗೀಳು ಮತ್ತು ಕಲಾವಂತಿಕೆ ಇವರನ್ನು ಆವರಿಸಿತ್ತು. ಅವರು ಸಾಹಿತ್ಯ ಕ್ಷೇತ್ರಕ್ಕೆ ಹಾಗೂ ಯಕ್ಷಗಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಯೇ ಅವರ ಸಾಧನೆಗೆ ಹಿಡಿದ ಕನ್ನಡಿಯಾಗಿದೆ. ಒಂದು ಶತಮಾನಕ್ಕೆ ನಾಲ್ಕು ವರ್ಷಗಳಷ್ಟೇ ಕಮ್ಮಿಯಾಗಿ ಬಾಳಿ, ಬದುಕಿ ತಮ್ಮ ಜೀವಿತಾವಧಿಯಲ್ಲಿ ಸುಮಾರು 427 ಪುಸ್ತಕಗಳನ್ನು ರಚಿಸಿದರು. ಅವುಗಳಲ್ಲಿ 47 ಕಾದಂಬರಿಗಳು, 02 ಕವನ ಸಂಕಲನಗಳು, 29 ನಾಟಕಗಳು, 04 ಸಣ್ಣಕತೆಗಳು, 06 ಪ್ರವಾಸ ಕಥನಗಳು, 03 ವಿಡಂಬನಾ ಕೃತಿಗಳು, 03 ಪ್ರಬಂಧಗಳು, 09 ಕಲಾಪ್ರಬಂಧಗಳು, 07 ವೈಜ್ಞಾನಿಕ ಕೃತಿಗಳು, 03 ಸಂಪಾದನಾ ಕೃತಿಗಳು, 04 ವಿಶ್ವಕೋಶಗಳು, 16 ನಿಘಂಟುಗಳು, 13 ಮಕ್ಕಳ ಪುಸ್ತಕಗಳು, 19 ಮಕ್ಕಳ ಶೈಕ್ಷಣಿಕ ಪುಸ್ತಕಗಳು, 05 ಪುಸ್ತಕಗಳನ್ನು ಆಂಗ್ಲಭಾಷೆಯ ಕೃತಿಗಳನ್ನು, 02 ಆತ್ಮಕತೆಗಳು, 01 ಜೀವನ ಚರಿತ್ರೆ ಹಾಗೂ 06 ವೈಚಾರಿಕ ಹಿನ್ನಲೆಯುಳ್ಳ ಕೃತಿಗಳನ್ನು ಅನೇಕ ಸಂಪುಟಗಳಲ್ಲಿ, ವಿವಿಧ ಭಾಗಗಳಲ್ಲಿ ರಚಿಸಿಸುತ್ತಾ ತಮ್ಮ 96ನೆಯ ವಯಸ್ಸಿನಲ್ಲೂ ಹಕ್ಕಿಗಳ ಕುರಿತು ಒಂದು ಪುಸ್ತಕವನ್ನು ಬರೆದಿದ್ದು, ಇದು ವಿಶ್ವ ದಾಖಲೆಗೆ ಅರ್ಹವಾಗಿರುವ ಒಂದು ಸಾಧನೆಯಾಗಿದೆ. ಇವು ಕೇವಲ ಅಂಕಿ ಸಂಖ್ಯೆಗಳಲ್ಲ, ಪ್ರತಿ ಪುಸ್ತಕದಲ್ಲಿ ಇಡೀ ಜೀವರಾಶಿಯ ಅಸ್ಥಿತ್ವವನ್ನು ಎಳೆ – ಎಳೆಯಾಗಿ ಬಿಚ್ಚಿಡುವ ಪ್ರಯತ್ನ ಅವರದು. ಅಲ್ಲದೆ ಅವರ ಸಾಧನೆಗಾಗಿ ದೊರಕಿದ ಗೌರವಗಳಿಗೇನೂ ಕೂಡ ಕಮ್ಮಿಯಿಲ್ಲ. ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ. ರಾವ್ ಬಹದ್ದೂರ್ ಪ್ರಶಸ್ತಿ, ಪಂಪ ಪ್ರಶಸ್ತಿ ವಿವಿಧ 8 ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಗಳನ್ನು ಪಡೆದ ಇವರು ಸೆಪ್ಟೆಂಬರ್ 12, 1997ರಲ್ಲಿ ತಮ್ಮ ಇಹಲೋಕವನ್ನು ತ್ಯಜಿಸಿ ಅಜರಾಮರರಾದರು.

ಇಂತಹ ಅಪ್ರತಿಮ ಸಾಹಿತಿ ತಮ್ಮ ಸಾಹಿತ್ಯ ಕೃಷಿಯಲ್ಲಿ ಮಾನವ ಕುಲವು ಯಾವಾಗಲೂ ಸ್ಮರಿಸುವಂತೆ ತಮ್ಮದೇ ವಿಚಾರಧಾರೆಗಳನ್ನು ಮಂಡಿಸಿರುವುದು ಅವರ ಸಾಹಿತ್ಯ ಅವಲೋಕನ ಮಾಡಿದಾಗ ಗೋಚರಿಸುತ್ತವೆ.

ಭಾರತದ ಅತ್ಯಂತ ಪ್ರತಿಭಾವಂತ ಸಾಹಿತಿ, ಕನ್ನಡ ಸಾರಸ್ವತ ಲೋಕದಲ್ಲಿ ವಿಸ್ಮಯಗೊಳಿಸುವ ವಿಫುಲ ಸಾಹಿತ್ಯವನ್ನು ಸೃಷ್ಟಿಸದ ಬಹುಶ್ರುತ ಲೇಖಕರು ಅನುಭವದ ಅಗ್ನಿಪರೀಕ್ಷೆಯಲ್ಲಿ ಗೆಲ್ಲದ ಯಾವುದೂ ಸತ್ಯವಲ್ಲ ಎಂದು ನಂಬಿ ಬದುಕಿನ ಅತ್ಯಂತ ನಿಷ್ಠುರ ಪರೀಕ್ಷೆಗಳಿಗೆ ತಮ್ಮನ್ನು ತಾವೇ ಒಡ್ಡಿಕೊಂಡ ಧೀಮಂತರಾದ ಕಾರಂತರ ಕೃತಿ ಕರಂಡದಲ್ಲಿ ಕಾಣಸಿಗುವ ಅತ್ಯುತ್ತಮ ಎನಿಸುವ ಮೌಲ್ಯಗಳು ಅಥವಾ ನುಡಿಮುತ್ತುಗಳಂತಿರುವ ಅನೇಕ ವಿಚಾರಗಳೇ ನಮ್ಮೆಲ್ಲರ ಮಾರ್ಗದರ್ಶಕಗಳು ಹಾಗೂ ಎಲ್ಲರೂ ಅಳವಡಿಸಿಕೊಳ್ಳುವ ಆದರ್ಶಗಳಾಗಿ ಹೊರಹೊಮ್ಮಿವೆ. ಅವುಗಳನ್ನು ಒಂದೊಂದಾಗಿ ತಿಳಿಯುವ ಪ್ರಯತ್ನ ಮಾಡೋಣ.

- ಹುಟ್ಟಿ ಬಂದಿದ್ದೇವೆ, ಕೈ, ಮೂಗು, ಬಾಯಿ, ಪಡೆದು. ಅವೆಲ್ಲ ಇರುವುದು ಯಾತಕ್ಕೆ ? ಕಚ್ಚಲಿಕ್ಕೆ ಹುಲಿಯ 'ಬಾಯಿ ಕೊಡು', ಹೊರಲಿಕ್ಕೆ ಆನೆಯ 'ಮೈ ಕೊಡು', ನುಸುಳಲಿಕ್ಕೆ ನುಸಿಯ 'ಶರೀರ ಕೊಡು' ಅಂದರೆ ಹೇಗಾದೀತು? ಎಲ್ಲರಿಗೆ ಎಲ್ಲವೂ ಬೇಕಾದರೆ ಅವನು ಕೊಡುವುದಾವುದು ಎಲ್ಲಿಂದ? ಅವನೇ ನಮ್ಮನ್ನು ಹುಟ್ಟಿಸಿದ್ದಾನೆ ಅಂತ ತಿಳಿಯುವುದಾದರೆ, ಕೊಡುವಷ್ಟನ್ನು ಕೊಟ್ಟೇ ಹುಟ್ಟಿಸಿದ್ದಾನೆ ಅಂತಾನೇ ತಿಳಿಯಬೇಕು.

- ಭೂಮಿಯಲ್ಲಿ ಹುಟ್ಟಿದ ಎಲ್ಲರೂ ಒಟ್ಟುಗೂಡಿ ಒಂದು ದೇವರನ್ನು ಮಾಡಿಕೊಂಡಿದ್ದಾರೆ. ಅವನೇನು ಮಾಡುತ್ತಿದ್ದಾನೋ? ಯಾರ್ಯಾರು ನನ್ನನ್ನು ನಂಬುತ್ತಿದ್ದಾರೆ, ಯಾರ್ಯಾರು ನಂಬುವುದಿಲ್ಲ ಎಂದು ಹುಡುಕಿ ಹೋಗಲಾರ. ಅವನ ಚಿಂತೆಯೇ ಇಲ್ಲದ ಪ್ರಾಣಿಗಳಿಲ್ಲವೋ? ಅವುಗಳನ್ನೂ ಬದುಕಿಸಿ ಇರಿಸಿದ್ದಾನಲ್ಲ. ಅವನನ್ನು ತಿಳಿಯಬೇಕಾದರೆ ನಾವು ಅವನನ್ನು ಹುಡುಕಿದ ಹಾಗೆ ಅವನೂ ನಮ್ಮನ್ನು ಹುಡುಕಿಕೊಂಡು ಬರಬೇಕಾದುದು ಇಲ್ಲ. ನಾವೇ ಅವನಲ್ಲಿ ಪ್ರಶ್ನೆ ಕೇಳುತ್ತೇವೆ. ನಾವೇ ಅವಕ್ಕೆ ಉತ್ತರವನ್ನು ಹೇಳಿಕೊಳ್ಳುತ್ತೇವೆ. ನಮಗೆ ಇಷ್ಟ ಕಂಡಂತೆ ನಡೆದಾಗ ದೇವರ ಇಚ್ಛೆ ಎನ್ನುತ್ತೇವೆ. ಅನಿಷ್ಟ ಪ್ರಾಪ್ತಿಸಿದಾಗ ಅನಿಷ್ಟ ಎನ್ನುತ್ತೇವೆ. ದೇವರು(?) ಕೊಟ್ಟ ಆಯುಷ್ಯವನ್ನು ಇದ್ದಷ್ಟು ಕಾಲ ಎಲ್ಲರ ಜೊತೆ ಒಳ್ಳೆಯ ರೀತಿಯಿಂದ ಬಾಳಿ ಬದುಕುವುದೇ ಪೂಜೆ ಎಂಬ ಬುದ್ಧಿ ಯಾಕೆ ಬರಬಾರದು ನಮಗೆ ?

- ಮನುಷ್ಯ, ಸಮಾಜದ ಋಣವನ್ನು ಹೊತ್ತುಕೊಂಡು ಬಂದಿದ್ದಾನೆ. ಅದರ ಋಣದಿಂದಲೇ ಬೆಳೆಯುತ್ತಾನೆ. ನಾಳೆ ದಿನ ಸಾಯುವಾಗ ತಾನು ಪಡೆದುದಕ್ಕಿಂತಲೂ ಹೆಚ್ಚಿನ ಋಣವನ್ನು ಸಲ್ಲಿಸಿ ಹೋದರೆ ಆತ ಹುಟ್ಟಿದ್ದಕ್ಕೊಂದು ಸಾರ್ಥಕ. ಇಲ್ಲವಾದರೆ ಅವನ ಜನ್ಮದಿಂದ ಸಮಾಜಕ್ಕೆ ನಷ್ಟ.

- ಎಷ್ಟೋ ಬಾರಿ ಅಳುವೆಂಬುದು ನಗುವಿಗಿಂತಲೂ ಸುಖದ ವಸ್ತು. ಎದೆಯ ಭಾರವನ್ನು ಅದು ಇಳಿಸಿದಷ್ಟು, ಮನಸ್ಸಿನ ಕಲ್ಮಶವನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅದು ತೊಳೆದಷ್ಟು, ಪಾಪವನ್ನು ಕಿತ್ತು ಅದು ಶುಚಿ ಮಾಡಿದಷ್ಟು ತೀರ್ಥ ಪ್ರಸಾದಗಳು ಮಾಡಲಾರವು.

● ಮುಖ್ಯವಾಗಿ ಹೆಣಗಳಲ್ಲಿರುವ ಭೇದವು ಎರಡೇ. ಜೀವ ಇರುವುದು, ಜೀವ ಇಲ್ಲದಿರುವುದು. ಪ್ರಾಣ ಹೋದರೆ ಮೊದಲನೆಯ ವರ್ಗಕ್ಕೆ ಸೇರಿಸಿ ಬಿಡುತ್ತಾರೆ. ಹಣ ಹೋದರೆ ಎರಡನೆಯ ವರ್ಗಕ್ಕೆ ದಾಖಲು ಮಾಡುತ್ತಾರೆ."

● ಕೊಳೆಯೇ ಕಾಣದ ಲೋಕವಿಲ್ಲ. ಕೊಳೆಯಿಲ್ಲದ ದೇಹವಿಲ್ಲ. ಬಂದ ಕೊಳೆಯನ್ನು ಆಗಾಗ ತೆಗೆಯುವುದೇ ಚೊಕ್ಕತನದ ಲಕ್ಷಣ.

● ಮಕ್ಕಳಿಗಾಗಿ ಆಸ್ತಿ ಮಾಡಿಡ ಬೇಡಿ! ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ.

● ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.

● ನಮ್ಮ ಹಾಗೆಯೇ ಸಾವಿರ, ಸಾವಿರ ಅಲ್ಲ, ಕೋಟಿ, ಕೋಟಿ ಪ್ರಾಣಿಗಳಿವೆ. ಅವು ಯಾವುದಾದರೂ, ಯಾರನ್ನಾದರೂ ಬೇಡುವುದನ್ನು ಕಂಡಿದ್ದೀಯಾ? ಮತ್ತೆಲ್ಲ ಬಿಡು– ಅವು ತಮ್ಮ ಅನ್ನವನ್ನು ಬೇಡುವುದಿಲ್ಲ; ಮಲಗಲು ತಾವನ್ನೂ ಬೇಡುವುದಿಲ್ಲ; ಹುಲ್ಲೆಯೆದುರಿಗೆ ಹುಲಿ ಬಂದರೆ 'ಸಹಾಯ ಮಾಡು' ಎಂತಲೂ ಬೇಡುವುದಿಲ್ಲ. ಬುದ್ಧಿ ಬಂದ ಮನುಷ್ಯ ಅದಕ್ಕಿಂತಲೂ ಕಳಪೆಯಾದರೆ ಹೇಗೆ?

● ನಮ್ಮ ಅಲ್ಪತನ ನಮಗೇ ಕಾಣಿಸುವುದಿಲ್ಲ. ನಮ್ಮಲ್ಲಿ ಇರುವ ಅಥವಾ ಇಲ್ಲದ ಸ್ವಲ್ಪ ಗುಣಗಳು ಬಹಳ ದೊಡ್ಡದಾಗಿಯೇ ಕಾಣಿಸುತ್ತವೆ.

● ಬಯಕೆಯ ಕುಡಿ ಎಷ್ಟೆಷ್ಟು ನಿರಾಸೆಯಲ್ಲಿ ಬೆಳೆಯುತ್ತದೋ, ಅದರ ಬೇರು ಅಷ್ಟಷ್ಟು ಬಲವಾಗಿ ಮನದಲ್ಲಿ ಊರಿಕೊಳ್ಳುತ್ತದೆ. ಅದೇ ಚಿಂತನೆಯನ್ನು ಮಾಡುತ್ತ, ತನಗೆ ಇಲ್ಲದ ವಸ್ತುವಿಗಾಗಿ ಅಸೂಯೆಗೊಳ್ಳುತ್ತದೆ. ತನಗೆ ದೊರೆಯದ ಸುಖ ಅನ್ಯರಿಗೆ ದೊರಕುವುದನ್ನು ಕಂಡು ಸುಪ್ತ ಮನಸ್ಸು ಊಹೆಗೆ ಶರಣಾಗುತ್ತದೆ. ಜೊತೆಗೆ ಅನ್ಯಾಯಗಾರ ರಾರೆಂಬುವವರನ್ನು ದಂಡಿಸಲು ಧೈರ್ಯ ಕೊಡುತ್ತದೆ.

● ಹಣದ ಶಕ್ತಿಯು ವಿಮರ್ಶೆಯ ಬಾಯಿಯನ್ನು ಅದುಮಿ ಹಿಡಿದಿದೆ. ಜಾಹಿರಾತಿಗಾಗಿ ಬಾಯಿ ಬಿಡುವ ಪತ್ರಕರ್ತರು ನಿರ್ಭೀತ ವಿಮರ್ಶೆಯನ್ನೇನು ಮಾಡಬಲ್ಲರು?

● ಜೀವನದಿಂದಲೇ ದೇವರು ಉದ್ಭವಿಸಬೇಕು, ಬೆಳೆಯಬೇಕು. ಎಷ್ಟು ಎಷ್ಟು ನಮ್ಮ ಜೀವನ ಹಿರಿದೋ ಅಷ್ಟು ಅಷ್ಟು ದೇವರೂ ಹಿರಿದು.

● ಬಾಳು ಇರುವುದು ಬದುಕುವುದಕ್ಕಾಗಿ; ಬದುಕಿ ಬೆಳೆಯುವುದಕ್ಕಾಗಿ !!

● ಯಾವೊಬ್ಬನ ಜೀವನದ ತೀರ್ಮಾನವೂ ಇನ್ನೊಬ್ಬನ ಬದುಕಿನ ತೀರ್ಮಾನವಾಗಲಾರದು.

● ತನ್ನಲ್ಲೇ ಪ್ರಾಮಾಣಿಕತೆ ಇಲ್ಲದಿದ್ದರೆ ಲೋಕದ ಉದ್ಧಾರಕ್ಕೆ ಪ್ರಯತ್ನಿಸುವುದು ಬೇಡ. ಉಪದೇಶ ಮಾಡುವ ಬದಲು ತಾವೇ ಅನುಸರಿಸಿದರೆ ಪ್ರಯೋಜನವಾದೀತು.

● ಜನ ಆದರ್ಶವಾದಿಗಳನ್ನು ಪೂಜಿಸುವುದರಲ್ಲಿ ತೃಪ್ತರು, ಅನುಸರಿಸುವುದರಲ್ಲಿ ಯಾವಾಗಲೂ ಹಿಂದೆಯೇ.

● ಮನೋದೌರ್ಬಲ್ಯಕ್ಕೂ ಒಂದು ಮಿತಿ ಇರಬೇಕು. ಒಂದು ಗಳಿಗೆಯ ಉನ್ಮತ್ತತೆಯಿಂದ ಯಾವ ಜೀವನದ ಭವಿಷ್ಯ ನಿರ್ಧರಿಸುವುದು ತಪ್ಪು. ಆದರ್ಶಕ್ಕಾಗಿ, ತನ್ನವರಿಗಾಗಿ, ಜನಕ್ಕಾಗಿ ವ್ಯಕ್ತಿ ಸುಖವನ್ನು ಮರೆಯಲಾರದೆ ಹೋದರೆ ಬಾಳ್ವೆಗೆ ಚೆಲುವು ಬರಲಾರದು. ಮನುಷ್ಯನ ಉದ್ಯೋಗಕ್ಕೂ ಆದರ್ಶಕ್ಕೂ ಪರಸ್ಪರ ಹೊಂದಾಣಿಕೆ ಬಾರದೆ ಹೋದಲ್ಲಿ ಜೀವನದಲ್ಲಿ ಸುಖ ಸಿಗಲಾರದು. ಆರಿಸಿದ ಬಾಳ್ವೆಯನ್ನು ಚೆನ್ನಾಗಿ ಮಾಡಿಕೊ, ಬಾಳ್ವೆ ಇರುವುದು ಕಲಿಯುವುದಕ್ಕೆ, ಕಲಿತು ತಿದ್ದಿಕೊಳ್ಳುವುದಕ್ಕೆ, ತಿದ್ದಿ ತೃಪ್ತಿ ಪಡಿಯುವುದಕ್ಕೆ. ಬಾಳು ಬೆದರುವುದಕ್ಕಾಗಿಯಲ್ಲ. ಬದುಕುವುದಕ್ಕಾಗಿ.

● ನಂಬುವುದರಿಂದ ನಾವೇನನ್ನೂ ಕಳೆದುಕೊಳ್ಳುವುದಿಲ್ಲ. ಅಪನಂಬಿಕೆಯಂಥ ಅಪಾಯಕಾರಿ ಜೊತೆಗಾರನಿಲ್ಲ.

● ನಮ್ಮಲ್ಲೆಲ್ಲ ಹೆಣ್ಣು ತರುವುದೇ ಪದ್ಧತಿ. ಎಮ್ಮೆ, ದನ, ನಾಯಿ, ಕರುಗಳನ್ನು ತರುವ ಹಾಗೆ. ಅದೊಂದು ಸಂಪ್ರದಾಯ. ನನಗೆ ಸಂಪ್ರದಾಯದ ಮದುವೆ ಬೇಕಿರಲಿಲ್ಲ. ತಿಳಿದು ಮದುವೆಯಾಗಬೇಕು. ಗಂಡಿಗೆ ಹೆಣ್ಣಿನ ಪರಿಚಯವಾಗಬೇಕು. ಮೊದಲಿಗೆ ಇಬ್ಬರೂ ಸ್ನೇಹಕ್ಕೆ ಒಲಿಯಬೇಕು. ಇದು ಕಷ್ಟದ ದಾರಿ. ಜನರು ತಿಳಿದಷ್ಟು ಸುಲಭವಲ್ಲ.

● ಜಾತ್ರೆಗೆ ಬಂದವರು ಜಾತ್ರೆ ಮುಗಿಸಿ ಹೊರಡುವಾಗ, ತಾವು ನಲಿದು, ಉಂಡು ಹೋದ ನೆಲದ ಮೇಲೆ ಎಲ್ಲೆಲ್ಲೂ ತಮ್ಮ ಉಚ್ಚಿಷ್ಟವನ್ನು ಚೆಲ್ಲಿ ಹೋದರೆ ಹೇಗಾದೀತು? ನಾವೇ ಅಲ್ಲಿಗೆ ತಿರುಗಿ ಬಾರದಿದ್ದರೇನಾಯಿತು? ಅಲ್ಲಿಗೆ ಬರುವ ನಮ್ಮ ಮಕ್ಕಳು ಏನಂದುಕೊಂಡಾರು? ಅಷ್ಟನ್ನಾದರೂ ಯೋಚಿಸುವ ಬುದ್ಧಿ ಈ ದೇಶವನ್ನು ನಡೆಸುವ ಹಿರಿಯರಿಗೆ ಇಲ್ಲದೆ ಹೋದರೆ ಹೇಗೆ? ಆ ಪ್ರಶ್ನೆಗೆ ಉತ್ತರವಾಗಿ ಅವರವರ ಕರ್ಮ ಅವರವರಿಗೆ ಎಂದರೆ ಸಾಕೇನು? ಜೀವನ ಪ್ರವಾಹದ ಕರ್ಮಕಾಂಡ ವ್ಯಕ್ತಿಗೆ ಬದ್ಧವಾದ, ವ್ಯಕ್ತಿಯಿಂದ ವ್ಯಕ್ತಿಗೆ ಪ್ರಭಾವಿತವಾಗುವ ಸಾಮೂಹಿಕ ಕರ್ಮಕಾಂಡ. ಆ ಸಮೂಹದ ಒಳಿತು ಕೆಡುಕುಗಳ ಪಾಲು ಮತ್ತು ಹೊಣೆ ಪ್ರತಿ ವ್ಯಕ್ತಿಯ ಪಾಲಿಗೆ ಇದ್ದೇ ಇದೆ.

● ಮನುಷ್ಯ ವಿನಾಶದ ಅಂಚಿನಲ್ಲಿದ್ದಾಗಲೂ ಬದುಕಿನ ತಂತು ಎಟುಕೀತೆ ಎಂದು ಅರಸಬೇಕು.

● ಕನ್ನಡದ ಮಕ್ಕಳಿಗೆ ಹಿಂದಿ, ಸಂಸ್ಕೃತಗಳ ರೂಢಿಯಿಲ್ಲ, ಹಾಗಾಗಿ ಅವರಿಗೆ 'ಭಾರತ ಮಾತೆ' ಎಟುಕದ ವ್ಯಕ್ತಿ. ಅವಳ ಸಲುವಾಗಿ ಮಕ್ಕಳ ಬಾಯಿಯಿಂದ 'ಭರತ್ ಮತಾ ಕೀ ಜೈ' ಅನ್ನಿಸುವಾಗ ನಗು ಬರುತ್ತದೆ. 'ತಾಯಿಯೇ ನಿನಗೆ ನಮಸ್ಕಾರ' ಎಂಬ ಅರ್ಥದ ಮಾತುಗಳನ್ನು 'ವಂದೇ ಮಾತರಮ್' ಎಂದು ವಿನಯ ರಹಿತವಾಗಿ 'ಜೋ ಹುಷಾರ್' ಎಂಬಂತೆ ಸಾಮೂಹಿಕವಾಗಿ ಒದರಿಸುವುದನ್ನು ಕೇಳಿದಾಗ ದುಃಖವಾಗುತ್ತದೆ.

● ಯಾರಿಗೂ ಉಪದೇಶ ಮಾಡಬೇಡಿ. ನೀವೇನು ಹೇಳ 'ಬೇಕಂತಿದ್ದೀರೋ ಹಾಗೆ ಬದುಕಿ ತೋರಿಸಿ.

● ನಮಗಿಂತ ಒಳ್ಳೆಯ ಸ್ಥಿತಿಯಲ್ಲಿರುವವರನ್ನು ಕಂಡು ಅವರನ್ನ ದ್ವೇಷಿಸಿ ಅಸೂಯೆ ಪಡುವುದೇ ಇಂದಿನ ಯುಗಧರ್ಮವಾಗಿದೆ.

● ಯಾವ ಉದ್ದೇಶಕ್ಕಾಗಿ ಬ್ರಿಟಿಷರನ್ನು ದೇಶ ಬಿಟ್ಟು ಓಡಿಸಿದೆವೋ, ಅವೆಲ್ಲ ಮಣ್ಣುಪಾಲಾಗಿದೆ. ಎಲ್ಲರಿಗೂ ಅನ್ನ ಕೊಡ್ತೀವಿ ಅಂತ ಹೇಳಿ ಅನ್ನ ಕಿತ್ತುಕೊಳ್ಳುತ್ತಿದ್ದೇವೆ. ಅದರಲ್ಲೂ ವಿದ್ಯಾವಂತರೇ ಈ ಕೆಲಸದಲ್ಲಿ ತೊಡಗಿರುವದು ನೋಡಿದರೆ ಅತೀವ ದುಃಖವಾಗುತ್ತದೆ.

● ನಾನು ದೇವರನ್ನು ನಂಬುವುದಿಲ್ಲ. ಏಕೆಂದರೆ ನಾನು ನೋಡಿಲ್ಲ. ನನಗೆ ಯಾವುದು ಗೊತ್ತಿಲ್ಲವೋ ಅದನ್ನು ನಂಬುವುದಿಲ್ಲ. ರಾಮಕೃಷ್ಣ ಪರಮಹಂಸರು ನಂಬಿದ್ದರು. ಅದನ್ನು ತಪಸ್ಸಿನಿಂದ ಕಂಡುಕೊಂಡರು. ನನಗೆ ರಾಮ ಎಂದರೆ ರಾಜಾ ರವಿವರ್ಮ ಅವರ ಚಿತ್ರ. ಕೃಷ್ಣ ಎಂದರೆ ಗುಬ್ಬಿ ವೀರಣ್ಣನವರ ಕೃಷ್ಣಲೀಲಾ ನೆನಪಿಗೆ ಬರುತ್ತದೆ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾವು ನಂಬಿ ಬಂದಿದ್ದೇವೆ. ಆದರೆ ಆ ರೀತಿ ಆಗಿಲ್ಲ. ನನಗೆ ಅನುಕೂಲವಾದಾಗ ಮಾತ್ರ ದೇವರನ್ನು ನಂಬುತ್ತೇನೆ ಎಂಬುದು ಸರಿಯಲ್ಲ.

● ತನ್ನ ಮನೆಯಲ್ಲೇ ಚೆಲುವನ್ನು ಗುರುತಿಸಲಾರದವ ಲೋಕದ ಸೌಂದರ್ಯವನ್ನು ಮೆಚ್ಚಲು ಸಮರ್ಥನಾಗುವುದು ಕಷ್ಟವೇ ಸರಿ.

● ಯಾರು ಪ್ರಪಂಚದ ಸುಖವನ್ನು ಹೆಚ್ಚಿಸಲು ಯತ್ನಿಸುತ್ತಾರೋ, ಅವರು ತಮ್ಮ ಸುಖವನ್ನೂ ಹೆಚ್ಚಿಸಿಕೊಳ್ಳುತ್ತಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

• ರಾಜಕೀಯದಲ್ಲಿ ಪ್ರಾಮಾಣಿಕತೆಯನ್ನು ಬಯಸಿದರೆ ಸಹರಾ ಮರುಭೂಮಿಯಲ್ಲಿ ಓಯಸಿಸ್ ಹುಡುಕುವಷ್ಟು ಕಷ್ಟವಾದೀತು. ಮನುಷ್ಯ ಬಾಳಬೇಕಾದರೆ ಆ ಓಯಸಿಸ್ಸನ್ನು ಹುಡಕಲೇ ಬೇಕಲ್ಲ!

• ಆ ಬಸರೀಕಟ್ಟೆಯಲ್ಲಿ ಹುಟ್ಟಿ, ಬೂದಿಕಟ್ಟೆಯಲ್ಲಿ ಮುಗಿಯುವ ಮೊದಲು, ನಾವು ಓಡಾಡಿಕೊಂಡಿರುವ ಕಟ್ಟೆ ಬಾಳಿನ ಕಟ್ಟೆಯಲ್ಲವೇ?

• ಬಾಳ್ವೆ ಇರುವುದು ಕಲಿಯುವುದಕ್ಕೆ, ಕಲಿತು ತಿದ್ದಿಕೊಳ್ಳುವುದಕ್ಕೆ, ತಿದ್ದಿ ತೃಪ್ತಿ ಪಡುವುದಕ್ಕೆ. ಬಾಳ್ವೆ ಇರುವುದು ಬದುಕುವುದಕ್ಕಾಗಿ, ಬದುಕಿನಿಂದ ಬೆಳೆಯುವುದಕ್ಕಾಗಿ.

• ಸ್ವರ್ಗ, ನರಕ ಆರಿಸಿ ಹೋಗುವ ಜನ್ಮ ಬೇಕಿಲ್ಲ. ಇಲ್ಲಿ ಬದುಕಿನಲ್ಲಿ ನಗು, ನೋವು, ಸಂಕಟಗಳು ಸಾಕಷ್ಟು ಇರುವಾಗ ಸ್ವರ್ಗದಲ್ಲಿ, ನರಕದಲ್ಲಿ ಅಂತಹ ವ್ಯವಸ್ಥೆ ಇರಬೇಕಾದದ್ದು ಯಾರ ಸಲುವಾಗಿ?

• ಯಾರು ಸಾವಿಗೆ ಅಂಜುವುದಿಲ್ಲವೋ ಅಂಥವ ಬದುಕಿಗೆ ಹೆದರಬೇಕಿಲ್ಲ, ಅಂಥವನು ಬದುಕ ಬಲ್ಲ.

• ನಾವು ಎಷ್ಟೇ ಬುದ್ಧಿವಂತರಾಗಿದ್ದರೂ, ನಾವು ಎಷ್ಟೇ ಸರಿಯಿದ್ದರೂ, ಒಂದೊಂದು ಜೀವವು ತಾನು ಕಂಡುಕೊಂಡ ಬೆಳಕಿನಲ್ಲಿ ನಡೆಯುವುದೇ ನ್ಯಾಯ. ನಮ್ಮೆಲ್ಲರ ಸಮಷ್ಟಿ ಬಾಳ್ವೆಗೆ ನಾವು ಸಲ್ಲಿಸಬೇಕಾದ ಋಣವೆಂದರೆ ಅದು. ಇದೇ ಖಂಡಿತ, ಅದೇ ಖಂಡಿತ ಎಂದು ಇನ್ನೊಬ್ಬರ ಗಂಟಲನ್ನು ಹಿಸುಕಿ ಅವರ ವಾಣಿಯನ್ನು ನಿರ್ಬಂಧಿಸುವುದು ಸಮಾಜಘಾತುಕತನ.

• ಯಾವ ನಾಡೂ ಒಬ್ಬ ಹುಟ್ಟಿದ ಊರಿನ ಸೊಗಸಿಗೆ ಸಾಟಿಯಾಗದು.

• ನೀವು ಪಾಲಿಸದ ಉಪದೇಶ ಖಂಡಿತ ಮಾಡಬೇಡಿ. ಅದು ಒಂದು ಪೈಸಕ್ಕೂ ಬೆಲೆ ಇಲ್ಲದ್ದು. ಉಪದೇಶ ಮಾಡೋ ಪುಸ್ತಕ ಕೊಡಿ ಓದಿಕೊಳ್ತಾರೆ. ಅದಕ್ಕೆ ನೀವೇ ಬೇಕಿಲ್ಲ. ನೀವು ನಡೆದು ತೋರಿಸಿ ಅದು ಮಾಡೋ ಪರಿಣಾಮ ಬೇರೆ ಯಾವುದೂ ಮಾಡಲ್ಲ.

• ಮನುಷ್ಯ ಬದುಕುವ ಮಿತಿ ನೂರು ವರ್ಷ ಎಂದು ತಿಳಿಯುವ. ಆದರೆ ಅವನು ಸಂಪತ್ತು ಕೂಡಿಹಾಕುವ ಬಗೆಯನ್ನು ಕಂಡುದಾದರೆ, ತನ್ನ ಗಳಿಮೆಯು ಮುಂದಿನ ಮೂರು ಶತಮಾನದ ಜನರಿಗೂ ಸಿಗಬೇಕೆಂದು ಬಯಸುವಂತೆ ಕಾಣುತ್ತದೆ. ಇದರಿಂದ ಅವನ ಸಂತಾನ, ನ್ಯಾಯವಾಗಿ ದುಡಿಯಬೇಕಾದಷ್ಟು ಶ್ರಮಿಸುವುದಿಲ್ಲ. ನಮ್ಮ ಅತಿ ಗಳಿಕೆಯಿಂದ ನಮ್ಮ ಆಚೀಚಿನ ಅನೇಕರ ಸುಖಗಳು ಇಲ್ಲದಾಗುತ್ತದೆ. ಅಲ್ಲದೆ, ಬಾಳ್ವೆಗೆ ಬಲವಾಗಿ ಅಂಟಿದಾತನೂ, ಅದರ ಮಿತಿಯನ್ನು ಮನಗಾಣದಾತನೂ, ಸಾವಿನ ಭೀತಿಗೆ ಗುರಿಯಾಗಬೇಕಾಗುತ್ತದೆ.

• ನಾಳೆ ಏನೆಂಬ ಪ್ರಶ್ನೆಗಿಂತಲೂ 'ಇಂದು ಹೇಗೆ?' ಎನ್ನುವ ಪ್ರಶ್ನೆ ನಮಗೆ ಮಹತ್ತರವಾಗಿ ಕಾಣಬೇಕು.

• ವ್ಯಕ್ತಿ 'ಚಿಹ್ನೆ' ಉಳಿಯುವುದೂ ಅಳಿಯುವುದೂ ಅವನ ಚರಿತ್ರೆಯಿಂದ. ಆ ಚರಿತ್ರೆ ನಮ್ಮ ನಮ್ಮ ಸ್ಮರಣೆಗಳನ್ನು ಚೇತನಗೊಳಿಸಿ ನಮ್ಮ ಬದುಕಿನ ಮೂಲಕ ಜೀವಂತವಾಗಿ ಉಳಿದರೆ, ಬೆಳೆದರೆ, ಮುಂದೆ ಸಾಗಿದರೆ, ಅದೇ ಪುನರ್ಜನ್ಮ.

• ಮಕ್ಕಳ ಶಕ್ತಿಯನ್ನು ತಿಳಿದುಕೊಂಡರೆ ಮಾತ್ರ ಅವನ್ನು ಬೆಳೆಯಿಸಬಲ್ಲ ದಾರಿಗಳು ನಮಗೆ ಗೊತ್ತಾಗುತ್ತವೆ. ಅವನ್ನು ತಿಳಿಯದೆ ಮಾಡುವ ಉಪಚಾರಗಳೋ, ಹಬ್ಬಗಳೋ ದೊಡ್ಡವರ ಹೆಮ್ಮೆಯನ್ನು ತಣಿಸುವುದಕ್ಕೆ ಸಾಕಾಗುತ್ತವೆ.

• ಮನುಷ್ಯ ಬಲಿಯಲು, ಅರಳಲು ಅವನ ಶಕ್ತಿಗಳು ಇನ್ನೆಷ್ಟೋ ಹೆಚ್ಚಿಗೆ ಬೆಳೆಯಬೇಕು. ಅವು ಎಷ್ಟೂ ಬೆಳೆಯಬಹುದು. ಅನುದಿನ ಆಫೀಸು ಕುರ್ಚಿಯಲ್ಲಿ ಸ್ವರ್ಗವನ್ನು ಕಾಣ ಬಯಸುವವನು ಬಯಲಲ್ಲಿ ಓಡಾಡಲು, ಹಳ್ಳಗುಡ್ಡಗಳಲ್ಲಿ ತಿರುಗಾಡಲು, ಸಂಜೆ ಮುಂಜಾನೆಗಳಲ್ಲಿ ದಿಗಂತವನ್ನು ನೋಡಲು ಕಲಿಯಬೇಕು. ವಿರಾಮ ದೊರೆತಾಗಲೆಲ್ಲ, ಅನುಕೂಲತೆ ಒದಗಿದಾಗಲೆಲ್ಲ ಕಡಲ ತೀರದ ಮೇಲೆ ಹಾಯಾಗಿ ಮಲಗುವುದಕ್ಕೋ, ಬೆಟ್ಟದ ತುದಿಯ ಮೇಲೆ ಮೌನವಾಗಿ ಕುಳಿತಿರುವುದಕ್ಕೋ, ಗಿಡಮರಗಳ ಎಡೆಯಲ್ಲಿ ಕಣ್ಣನ್ನು ಹಕ್ಕಿಯಿಂದ ಹೂವಿಗೂ, ಹೂವಿಂದ ಹಕ್ಕಿಗೂ ಹೊರಳಿಸುವುದಕ್ಕೋ ಕಲಿಯಬೇಕು. ಪ್ರತಿಯೊಮ್ಮೆಯೂ ನಮ್ಮ ಜೀವನ ಇದರಿಂದ ವಿಸ್ತರಿಸೀತು. ತಾಳ್ಮೆ ಔದಾರ್ಯಗಳು ಬೆಳೆದಾವು. ನಿಸರ್ಗದ ರಾಗಾಲಾಪದಲ್ಲೋ, ರೂಪರೇಖೆಯಲ್ಲೊ ಮೇಳವಿಸದ ಸ್ವರ, ನಡೆಗಳು ಇಂಥವೇ ಎಂದು ತಿಳಿಯಲು ಅವನು ಶಕ್ತನಾದಾನು. ಅಲ್ಲಿಯ ಜೀವನವನ್ನು ಕಂಡು ಮನುಷ್ಯನು ಮನುಷ್ಯ–ಸಮಾಜದ ಕೃತಕ ನೀತಿಯ ನೆಲೆ ಎಷ್ಟು ಭದ್ರವಾಗಿದೆ ಎಂದು ಅಳೆಯುವುದಕ್ಕೂ ಕಲಿತಾನು.

• ಬಾಳಿನಲ್ಲಿ ಮನುಷ್ಯ ಪಡೆಯಬಹುದಾದ ಎಲ್ಲ ಸಂಪತ್ತಿಗಿಂತ ಮಿಕ್ಕಿದ ಸಂಪತ್ತು ತಾಯ್ತನವಲ್ಲವೇ? ಶಿಶುವಿಗೆ ಮೊಲೆಯುಡಿಸುವ ಗಳಿಗೆಯಿಂದ, ಅದನ್ನು ಬೆಳೆಸಿ ಪ್ರಬುದ್ಧನನ್ನಾಗಿ ಮಾಡಿ, ಪ್ರಪಂಚಕ್ಕೆ ಒಪ್ಪಿಸುವ ಹೊಣೆ ಎಷ್ಟು ಹೆಚ್ಚಿನದೋ ಆ ಹೊಣೆಯ ನಿರ್ವಹಣೆಯ ಭಾಗ್ಯವೂ ಹೆಚ್ಚಿನದಲ್ಲವೆ?

• ದೇಶ ದೊಡ್ಡದಾಗಬೇಕಾದರೆ, ಊರಿನ ಜನ ದೊಡ್ಡವರಾಗಬೇಕು. ನಮ್ಮಲ್ಲಿ ಅದೇ ಕಾಣಿಸದಾಗಿದೆ. ನಾವೆಷ್ಟು ಹೆಮ್ಮೆ ತಾಳಿದರೇನು? ನಮ್ಮ ಶೀಲವೇ ನಷ್ಟವಾಗಿರುವಲ್ಲಿ?

• ಮನುಷ್ಯನಿಗೆ ತಾನು ಬದುಕಿದ ಮೇಲಲ್ಲವೇ ವೇದಾಂತದ ಪಾಠ, ಬದುಕುವುದಕ್ಕೇನೆ ಮೊದಲು ವೇದಾಂತವನ್ನು ಹೇಳಿ ಫಲವಿಲ್ಲ.

• ಗಾಂಧೀಜಿಯವರು ದೇಶದಲ್ಲಿ ರಾಮರಾಜ್ಯವನ್ನು ಕಟ್ಟಬೇಕೆಂದು ಹಂಬಲ ತೊಟ್ಟರು. ಅವರ ಜೊತೆಗೆ ನಾಲ್ಕು ದಿನ ಕುಣಿದ ನಾನೂ ಅಂತ ಹಂಬಲವನ್ನು ತೊಟ್ಟದ್ದುಂಟು. ಈಗ ಎಣಿಕೆ ಹಾಕುವಾಗ, ನನ್ನ ಕಾಲಕ್ಕೆ ಮಾತ್ರವಲ್ಲ, ನನ್ನ ಮೊಮ್ಮಕ್ಕಳ ಕಾಲಕ್ಕೂ ಆ ರಾಮರಾಜ್ಯವೆಂಬುದು ಬರಲಾರದು ಅನಿಸುತ್ತದೆ. ನಾವು ತಂದ ಹರಾಮರಾಜ್ಯವನ್ನು ಕಾಣುವಾಗ.

• ಮನುಷ್ಯನ ಉದ್ಯೋಗಕ್ಕೂ ಆದರ್ಶಕ್ಕೂ ಪರಸ್ಪರ ಹೊಂದಿಕೆ ಬಾರದೆ ಹೋದಲ್ಲಿ ಜೀವನದಲ್ಲಿ ಸುಖ ಸಿಗಲಾರದು.

• ನಮ್ಮ ಸ್ವಾರ್ಥವೇ ನಮ್ಮ ಅಳತೆಯ ಕೋಲು; ನಮ್ಮ ಸುಖ–ದು:ಖ, ಲಾಭ–ನಷ್ಟಗಳ ದೃಷ್ಟಿಯೇ ಬಳಸುವ ತೂಕದ ಕಲ್ಲುಗಳು. ಇತರರು ನಮಗೆ ಒಳ್ಳೆಯವರಾಗಿ ಕಾಣಿಸುವುದು ಬಿಡುವುದು ಇವುಗಳಿಂದಲ್ಲವೇ?

ಹೀಗೆ ನಾವು ಮೆಲ್ಲುವ ನುಡಿಮುತ್ತುಗಳು ಕಾರಂತರ ಸಾಹಿತ್ಯದ ಹೂರಣದ ಸಿಹಿಯನ್ನು ಲೇಪಿಸುತ್ತವೆ. ಇದರಿಂದ ಶಿವರಾಮ ಕಾರಂತರು ಒಬ್ಬ ದಾರ್ಶನಿಕ ಕವಿ, ಸಾಹಿತಿ ಮತ್ತು ಕಲಾತಪಸ್ವಿಯೆಂಬುದನ್ನು ಸಾರಿ ಸಾರಿ ಹೇಳುತ್ತವೆ. ಇವುಗಳೊಂದಿಗೆ ಒಬ್ಬ ಕವಿಯೂ ಕೂಡ ತತ್ವಜ್ಞಾನಿ, ಮನೋವಿಜ್ಞಾನಿ ಮತ್ತು ಸಂತನ ಸ್ಥಾನದಲ್ಲಿ ಕಾಣುತ್ತಾನೆ. ಅವರ ಈ ಆದರ್ಶಗಳು ಅಥವಾ ಮೌಲ್ಯಗಳು ನಮ್ಮೆಲ್ಲರ ಜೀವನದ ದಾರಿದೀಪಗಳಾಗಲಿ ಎಂಬುದೇ ಲೇಖನದ ಆಶಯ.

## ಆಕರ ಗ್ರಂಥಗಳು


- **ಡಾ. ಶಿವರಾಮ ಕಾರಂತ.** : 'ಹುಚ್ಚು ಮನಸ್ಸಿನ ಹತ್ತು ಮುಖಗಳು'
- **ಡಾ. ಶಿವರಾಮ ಕಾರಂತ.** : 'ಮೂಕಜ್ಜಿಯ ಕನಸುಗಳು'
- **ಡಾ. ಶಿವರಾಮ ಕಾರಂತ.** : 'ಸ್ಮೃತಿ ಪಟಲದಿಂದ'
- **ಕಾರಂತರ ಸಾಹಿತ್ಯ ಸಂಪುಟ** : ಕನ್ನಡ ಪುಸ್ತಕ ಪ್ರಾಧಿಕಾರ.
- **ಡಾ. ಶಿವರಾಮ ಕಾರಂತ.** :ಸಾಹಿತ್ಯ ಶ್ರೇಣಿ – ಕನ್ನಡ ಮತ್ತ ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸ್ಥಳನಾಮಗಳು

✍ **ಪ್ರೊ. ವ್ಹಿ. ಎಂ. ಕಿತ್ತೂರ,** ಕನ್ನಡ ಉಪನ್ಯಾಸಕರು, ಶ್ರೀ ಎಸ್. ಆರ್. ಕಂಠಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುಧೋಳ

ಪ್ರಾಚೀನ ಕಾಲದಿಂದಲೂ ಆದಿಮಾನವ ಅಲೆಮಾರಿ ಜೀವನ ನಡೆಸುತ್ತ ಹಂತ–ಹಂತವಾಗಿ ಒಂದೇ ಕಡೆ ನೆಲೆಯೂರಲು ಪ್ರಯತ್ನಿಸಿದ ಫಲವಾಗಿ ಸಂಘ ಜೀವನ ಕಂಡುಕೊಂಡ. ಸಂಘ ಜೀವನ ಪ್ರಾರಂಭಿಸಿದ ನಂತರ ನೆಲೆಯೂರಿನಿಂತ ಸ್ಥಳಗಳಿಗೆ ಒಂದೊಂದು ಹೆಸರು ಸೂಚಿಸುತ್ತ ಮುಂದುವರೆದನು. ಈ ಸ್ಥಳಗಳಿಗೆ ಗುರುತಿಸಿದ ಹೆಸರುಗಳಿಗೆ ಸ್ಥಳನಾಮಗಳು ಅಥವಾ ಗ್ರಾಮನಾಮಗಳೆಂದು ಕರೆಯುತ್ತೇವೆ.

ಭಾಷೆಯಲ್ಲಿ ನಾಮ ರಚನೆಗಳು ವಿಶಿಷ್ಟ ವರ್ಗದವು. ಅವುಗಳ ರಚನಾ ವಿನ್ಯಾಸ ಭಾಷಿಕ ಮಹತ್ವದಿಂದ ಅವುಗಳದೇ ಆದ ಸ್ಥಾನ ಹೊಂದಿವೆ. ಬಹುಮಟ್ಟಿನ ವಿದ್ವಾಂಸರು "ಯಾವುದೇ ಭಾಷೆಯ ಆರಂಭದ ಘಟಕಗಳು ನಾಮಗಳೇ ಆಗಿವೆ" ಎಂದು ಅಭಿಪ್ರಾಯ ಪಡುತ್ತಾರೆ.ಇಂಥ ನಾಮ ರಚನೆಗಳು ಆಯಾ ಭಾಷೆಯ ಪರಂಪರೆಯನ್ನು ಅಧ್ಯಯನ ಮಾಡುವ ಕ್ರಮದಲ್ಲಿ ಅನೇಕ ಆಸಕ್ತರು ಭಾಷೆಯೊಂದಿಗೆ ಭಾಷೆಯಲ್ಲಿಯ ನಾಮರೂಪಗಳನ್ನೇ ವಿಶಿಷ್ಟ ಆಕರಗಳನ್ನಾಗಿ ಪರಗಣಿಸಿ ವ್ಯವಸ್ಥಿವಾಗಿ ವೈಧಾನಿಕತೆಯನ್ನು ಅಳವಡಿಸಿಕೊಂಡು ಅಧ್ಯಯನ ಮಾಡಿ ಅದರ ಪ್ರಯೋಜನವನ್ನು ಹೊಂದಿರುವ ಹಾಗೂ ಅಂತಹ ಅಧ್ಯಯನ ಪರಂಪರೆಯ ಅವಲೋಕನದಿಂದ ಅರಿವಾಗುವಂತಹ ಸಂಗತಿ. ನಾಮಗಳ ಅಧ್ಯಯನ ಆರಂಭದಲ್ಲಿ ವ್ಯಾಕರಣ ಹಾಗೂ ಕೋಶಶಾಸ್ತ್ರ ದೃಷ್ಟಿಯಿಂದ ಮಾತ್ರ ಕೈಗೊಳ್ಳುವಂತಹುದಾಗಿತ್ತು. ಅದರ ಮಹತ್ವ ನೆಲೆಯಲ್ಲಿ ಇಂದು ಸಾಂಸ್ಕೃತಿಕ ಅಧ್ಯಯನ ಆಕರವಾಗಿ ವಿಸ್ತರಿಸಿಕೊಂಡಿರುವುದು ಗಮನಾರ್ಹ ಸಂಗತಿಯಾಗಿದೆ.

ಅಧ್ಯಯನ ಪರಂಪರೆಯು ಈ ಬಗೆಯ ಆಸಕ್ತಿ ತೆರೆದಿದ್ದು ಪಾಶ್ಚಾತ್ಯ ವಿದ್ವಾಂಸರಿಂದಲೇ, ಪಾಶ್ಚಾತ್ಯರಲ್ಲಿ ನಾಮಗಳ ಅಧ್ಯಯನ ಪ್ರಾಮುಖ್ಯತೆಯನ್ನು ಸೂಕ್ಷ್ಮವಾಗಿ ಹೇಳುವುದಾದರೆ ಪಾಶ್ಚಾತ್ಯ ವಿಶ್ವವಿದ್ಯಾಲಯಗಳು ಮತ್ತು ಅಲ್ಲಿಯ ಕೆಲವು ಸಂಸ್ಥೆಗಳು ಈ ಅಧ್ಯಯನವನ್ನು ಏರ್ಪಡಿಸಿದ್ದುಂಟು.

ಭಾರತದಲ್ಲಿ ಇಂಥ ಪ್ರಕ್ರಿಯೆಯು ಅವರ ಅನುಕರಣೆಯಲ್ಲಿಯೇ ಆರಂಭವಾದರೂ ಪಾಶ್ಚಾತ್ಯರಂತಹ ವ್ಯವಸ್ಥಿತ ಪ್ರಯತ್ನಗಳಿಲ್ಲದಿರುವುದು ಕಂಡುಬರುತ್ತದೆ. ಆದರೂ ಇಂದು ತಕ್ಕಮಟ್ಟಿಗೆ ಆಯಾ ಭಾಷೆಯಲ್ಲಿ ಅಧ್ಯಯನದ ಇತಿಹಾಸವನ್ನು ಗುರುತಿಸಿಕೊಳ್ಳಲು ಮುಂದಾಗಿದೆ ಇದಕ್ಕೆ ಕನ್ನಡ ಭಾಷೆಯು ಹೊರತಾಗಿಲ್ಲ. ಕನ್ನಡ ಭಾಷೆಯ ನೆಲೆಯಲ್ಲಿ ಹಲವು ವಿದ್ವಾಂಸರು ಸಮರ್ಥವಾದ ಸೈದ್ಧಾಂತಿಕತೆಯನ್ನು ಗುರುತಿಸಿಕೊಟ್ಟಿದ್ದಾರೆ. ಡಾ. ಶಂ.ಬಾ.ಜೋಶಿ, ಡಾ. ಎಂ.ಎಂ.ಕಲಬುರ್ಗಿ, ಎಂ,ಚಿದಾನಂದ ಮೂರ್ತಿ, ಸೇಡಿಯಾಪು ಕೃಷ್ಣಭಟ್ಟ, ರಘುಪತಿ ಭಟ್ಟ, ದೇ.ಜವರೇಗೌಡ, ಎ.ಮುಗೆಪ್ಪ, ಕೆ.ವಿ.ನಾರಾಯಣ, ವಿ.ಗೋಪಾಲಕೃಷ್ಣ, ಸಂಗಮೇಶ ಸವದತ್ತಿಮಠ, ಮುಂತಾದವರು. ಈ ವಿದ್ವಾಂಸರ ಪ್ರಯತ್ನ, ಪ್ರಭಾವ, ಪ್ರೇರಣೆ, ಪ್ರೋತ್ಸಾಹಗಳಿಂದ ಡಾ. ಜಾಜಿ ದೇವೇಂದ್ರಪ್ಪನಂತಹ ಹಲವಾರು ಯುವ ವಿದ್ವಾಂಸರು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದು ಅಷ್ಟೇ ಗಮನಾರ್ಹವಾದದ್ದು.

ನಾಮಗಳ ಸಹಾಯದಿಂದ ಆಯಾ ನಾಡಿನ ಸಾಮಾಜಿಕ, ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ, ಭೌಗೋಳಿಕ ಸ್ವರೂಪವನ್ನು ಅರಿಯಲು ಬರುವಂತೆ ಅಲ್ಲಿಯ ಸಾಮಾಜಿಕ, ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ, ಭೌಗೋಳಿಕ ಪರಿಸರಗಳ ಸಹಾಯದಿಂದಲೂ ನಾಮಗಳನ್ನು ಸರಿಯಾಗಿ ಅರ್ಥೈಸಲು ಸಾಧ್ಯವಾಗುತ್ತದೆ.

ಡಾ. ಎಂ. ಎಂ. ಕಲಬುರ್ಗಿಯವರು ಗ್ರಾಮನಾಮ ರೂಪಗಳನ್ನು ಗಮನಿಸಿ ಈ ರೀತಿಯಾಗಿ ವರ್ಗೀಕರಿಸಿದ್ದಾರೆ.

1. ನಿಸರ್ಗವಾಚಿ
2. ನಿರ್ಮಾಣವಾಚಿ
3. ಜನಾಂಗವಾಚಿ
4. ವ್ಯಕ್ತಿ ವಾಚಿ
5. ಆದರ್ಶ ವಾಚಿ

## 1. ನಿಸರ್ಗವಾಚಿ ಗ್ರಾಮನಾಮಗಳು

ಮಾನವನು ನಿಸರ್ಗದ ಒಂದು ಭಾಗವಾಗಿ ಬೆಳೆದು ಬಂದಿರುವಂಥವನು, ಅವನ ಬದುಕಿನ ಮೇಲೆ ಭೌಗೋಳಿಕ ಪರಿಸರದ ಪ್ರಭಾವವು ಅಪರಿಮಿತವಾಗಿದೆ. ನಿಸರ್ಗ ರೂಪವನ್ನು ಬಳಸಿಕೊಂಡು ಸ್ಥಳನಾಮಗಳನ್ನು ಗುರುತಿಸಿರುವುದು ಅತ್ಯಂತ ಪ್ರಾಚೀನವಾದ ವಿಧಾನವಾಗಿದೆ. ಗುಡ್ಡ ಭೂ ಪ್ರದೇಶದ ಸಮೀಪ, ಕಾಡು ಪ್ರಾಣಿಗಳ ಸಾಂದ್ರತೆ, ಪಕ್ಷಿಗಳು, ನದಿ, ಹಳ್ಳ–ಕೊಳ್ಳ ಮತ್ತು ಕಮರಿಗಳು ಮುಂತಾದ ಅಂಶಗಳು ನಿರ್ದಿಷ್ಟವಾಗಿ ಅಥವಾ ವಾರ್ಗಿಕವಾಗಿ ಕಾರ್ಯನಿರ್ವಹಿಸಿದುದು ಕಂಡುಬರುತ್ತದೆ. ಭೌಗೋಳಿಕ ಲಕ್ಷಣಗಳಿಂದ ಒಂದು ನಿರ್ದಿಷ್ಟ ಸ್ಥಳವನ್ನು ಗುರುತಿಸುವಲ್ಲಿ ಸ್ಪಷ್ಟತೆಯು ಇರುತ್ತದೆ. ಗುಡ್ಡ–ಬೆಟ್ಟ, ಹಳ್ಳ–ಕೊಳ್ಳಗಳು, ಗವಿ –ಗಹ್ವರಗಳು, ಗುಂಡಿ–ಸಾಗರಗಳು, ಕಲ್ಲು, ದಿಣ್ಣೆ, ತಗ್ಗು, ಗಿರಿ, ಕಂದರ, ಇಂತಹ ನೈಸರ್ಗಿಕ ಅಂಶಗಳಿಂದ ಕೂಡಿರುವ ಗ್ರಾಮಗಳು ಅದೇ ನಾಮದ ಶೇಷ ಭಾಗವನ್ನು ಹೊಂದಿರುವುದು ಕಂಡುಬರುತ್ತದೆ. ಇಂತಹ ಹಳ್ಳಿಗಳ ಸ್ಥಳ ನಾಮಗಳನ್ನು ನಿಸರ್ಗವಾಚಿ ಎಂಬ ವರ್ಗೀಕರಣದಲ್ಲಿ ಸೇರಿಸುವ ಪದ್ದತಿಯು ಪ್ರಚಲಿತದಲ್ಲಿದೆ.

**ಉದಾಹರಣೆಗೆ**

1. **ಗುಡ್ಡ :** ಗುಳೇದಗುಡ್ಡ, ಬಾಚನಗುಡ್ಡ, ಕರಡಿಗುಡ್ಡ, ಮಂಗಳಗುಡ್ಡ,
2. **ಹೊಳೆ/ ನದಿ/ ಹಳ್ಳ :** ಹಂಪಿಹೊಳಿ, ಹೊಳೆ ಆಲೂರು,
3. **ಕೆರಿ :** ಹಳ್ಳಿಕೇರಿ, ಸೀಮಿಕೇರಿ, ನೀರಲಕೇರಿ,
4. **ಗಿರಿ :** ತುಳಸಿಗಿರಿ, ಕನಸಗಿರಿ, ಕನಕಗಿರಿ,
5. **ದಿನ್ನಿ :** ಗುಡದಿನ್ನಿ, ಬುದ್ನಿ,
6. **ಝುರಿ :** ಅಮಲಝುರಿ

## 2. ನಿರ್ಮಾಣವಾಚಿ ಗ್ರಾಮನಾಮಗಳು

ಮನುಷ್ಯನು ಹಲವಾರು ಕಾರಣಗಳಿಂದ ಹೊಸತಾಗಿ ವಸತಿ ಪ್ರದೇಶಗಳನ್ನು ಅನುಕೂಲಕ್ಕೆ ತಕ್ಕಂತೆ ನಿರ್ಮಿಸಿಕೊಂಡಿದ್ದಾನೆ. ಇಂತವುಗಳನ್ನು ವಿಶಿಷ್ಟವಾದ ಪದಪುಂಜಗಳಿಂದ ಕರೆದಿವುದು ಗಮನಕ್ಕೆ ಬರುತ್ತದೆ.

**ಉದಾಹರಣೆಗೆ :** ಕಿಸುವೊಳಲು (ಸುಂದರ ಪಟ್ಟಣ – ಪಟ್ಟದ ಕಲ್ಲು)
ಮಹಾಕೂಟ
ನವನಗರ

– 42 ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಶಿಸ್ತಿನ ಮೂಲಕ ತರಗತಿ ನಿರ್ವಹಣೆ

✍ **ಡಾ. ಗಾಯತ್ರಿ ಆರ್. ಕೋಟೆಣ್ಣವರ,** ಸಹಾಯಕ ಪ್ರಾಧ್ಯಾಪಕರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ.

## ಪೀಠಿಕೆ

ವಿದ್ಯಾರ್ಥಿ ಫಲಿತಾಂಶಗಳ ಮೇಲೆ ಪರಿಣಾಮ ಬೀರುವ ಅತ್ಯಂತ ಪ್ರಬಲವಾದ ಅಂಶವೆಂದರೆ ತರಗತಿ ನಿರ್ವಹಣೆ. ತರಗತಿ ನಿರ್ವಹಣೆ ವಿದ್ಯಾರ್ಥಿಗಳಿಗೆ ಪಠ್ಯಕ್ರಮ, ಸಮಯ, ಸ್ಥಳ ಮತ್ತು ಪರಸ್ಪರ ಅಂತರಕ್ರೀಯೆಗಳ ಅಸ್ಥಿರಗಳನ್ನು ಆಯೋಜಿಸುತ್ತದೆ ಮತ್ತು ನಿರ್ವಹಿಸುತ್ತದೆ. ಪರಿಣಾಮಕಾರಿ ತರಗತಿ ನಿರ್ವಹಣೆ ಮತ್ತು ಶಿಸ್ತು ಅನೇಕ ವಿಧಾನಗಳನ್ನು ಒಳಗೊಂಡಿದೆ. ಅವು ತರಗತಿಯ ನಿಯಮಗಳು ಮತ್ತು ನಿಯಮ ವಿಧಾನಗಳ ಬೋಧನೆ, ಸೂಕ್ತ ನಡವಳಿಕೆ ಮತ್ತು ಅಪೇಕ್ಷಿತ ಸಾಮಾಜಿಕ ಕೌಶಲ್ಯಗಳ ಸ್ವೀಕೃತಿ ರೀತಿಯಲ್ಲಿ ಅಸಮರ್ಪಕ ನಡವಳಿಕೆಗಳಿಗೆ ಭಿನ್ನಾಪ್ರಾಯದ ಗಮನ ಮತ್ತು ಪ್ರತಿಕ್ರಿಯೆ ವಿವಿಧ ಸೂಚನಾ ವಿಧಾನಗಳ ಬಳಕೆ, ಪರಿಣಾಮಕಾರಿ ಸಮಯ ನಿರ್ವಹಣೆ ಹಾಗೂ ಎಲ್ಲಾ ವಿದ್ಯಾರ್ಥಿಗಳ ಭಾವನಾತ್ಮಕ ನಡುವಳಿಕೆಯಾಗಿದೆ.

ಶೈಕ್ಷಣಿಕ ಸಿದ್ಧತೆ ಮತ್ತು ಕೆಲಸದ ಮೂಲಕ ಉತ್ತಮ ತರಗತಿಯ ಶಿಷ್ಟಾಚಾರಗಳನ್ನು ಶಿಕ್ಷಕರು ಕಲಿಸುತ್ತಾರೆ. ಉತ್ತಮ ಶಿಕ್ಷಕರು ತಮ್ಮ ಪಾಠದ ಕೊಠಡಿಗಳಲ್ಲಿ ಕೆಲಸ ಮಾಡುವ ಉತ್ತಮ ಪದ್ಧತಿಗಳನ್ನು ಕಂಡು ಹಿಡಿಯಲು ಮೂಲ ತಂತ್ರಗಳನ್ನು ಹೊಂದಿದ್ದಾರೆ. ವಿದ್ಯಾರ್ಥಿಗಳು ತರಗತಿಗಳು ಮತ್ತು ಅನುಭವ ಪ್ರಕಾರಗಳನ್ನು ಅವಲಂಬಿಸಿ ಅವುಗಳನ್ನು ಬದಲಾಯಿಸಬಹುದು ಉತ್ತಮ ಶಿಸ್ತು ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಸಮಯ ತೆಗೆದುಕೊಳ್ಳಬಹುದು. ಆದರೆ ಉತ್ತಮ ಶಿಕ್ಷಕರು ಯಾವಾಗಲೂ ವಿನೋದ ಮತ್ತು ಸುರಕ್ಷಿತ ಕಲಿಕೆಯ ಪರಿಸರವನ್ನು ಖಚಿತಪಡಿಸಿಕೊಳ್ಳುವ ತಮ್ಮ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಸಾಧಿಸಲು ಹೊಸ ಮಾರ್ಗಗಳನ್ನು ಹುಡುಕುತ್ತಾರೆ.

## 1. ಯಾವ ನಿಯಮಗಳನ್ನು ಅತ್ಯಂತ ಮುಖ್ಯ ಎಂದು ನಿರ್ಧರಿಸುವುದು

ಯಾವ ಮಾರ್ಗವು ನಿಮ್ಮ ವರ್ಗವನ್ನು ಸುರಕ್ಷಿತ ಮತ್ತು ವಿನೋದ ಕಲಿಕೆಯ ಪರಿಸರವನ್ನು ಉಳಿಸುತ್ತದೆ ಎಂಬುದರ ಕುರಿತು ಯೋಚಿಸಿ ಈ ಗುರಿಯನ್ನು ಪ್ರತಿಬಿಂಬಿಸಲು ವಿನ್ಯಾಸ ನಿಯಮಗಳು. ಈ ನಿಯಮಗಳು ವಿದ್ಯಾರ್ಥಿಗಳ ವಯಸ್ಸಿನ ಮತ್ತು ಬೋಧಿಸುತ್ತಿರುವ ವರ್ಗ ಪ್ರಕಾರವನ್ನು ಅವಲಂಬಿಸುವುದು ವಿಭಿನ್ನವಾಗಿರುತ್ತದೆ ಕೆಲವು ಮಾದರಿ ನಿಯಮಗಳನ್ನು ಒಳಗೊಂಡಿದೆ.

- ಇತರರಿಗೆ ಗೌರವ ನೀಡುವುದು.
- ತರಗತಿಯ ಆಸಕ್ತಿಯನ್ನು ಸಂರಕ್ಷಿಸುವುದು
- ಮತ್ತೊಬ್ಬರ ಗಮನವನ್ನು ನಮ್ಮ ಕಡೆಗೆ ಪ್ರಯತ್ನಿಸುವುದು.

## 2. ನಮ್ಮ ತರಗತಿಯಲ್ಲಿ 5 ಕ್ಕಿಂತ ಹೆಚ್ಚಿನ ನಿಯಮಗಳನ್ನು ಆಯ್ಕೆ ಮಾಡಿಕೊಳ್ಳುವುದು

ಇದು ವಿದ್ಯಾರ್ಥಿಗಳು ಅವರನ್ನು ನೆನಪಿಟ್ಟುಕೊಳ್ಳಲು ಸುಲಭ ಗೊಳಿಸುತ್ತದೆ. ಈ ನಿಯಮಗಳನ್ನು ವಿವಿಧ ಸಂದರ್ಭಗಳಲ್ಲಿ ನಡವಳಿಕೆಗಳನ್ನು ಮಾರ್ಗದರ್ಶನ ಮಾಡುತ್ತದೆ. ಇದರಿಂದ ಪ್ರತಿಯೊಂದು ಸನ್ನಿವೇಶಕ್ಕೆ ನಿಯಮಗಳನ್ನು ಉತ್ತರಿಸಲು ಅಗತ್ಯವಿಲ್ಲ.

## 3. ವಿದ್ಯಾರ್ಥಿಗಳಿಗೆ ನಿಯಮಗಳು ತಿಳಿದಿದೆ ಎಂದು ಖಚಿತಪಡಿಸಿಕೊಳ್ಳುವುದು

ನಿಮ್ಮ ತರಗತಿಯ ನಿಯಮಗಳನ್ನು ಸರಿಯಾಗಿಸಲು ಮೊದಲ ದಿನದ ತರಗತಿಯಲ್ಲಿ ಸಮಯ ತೆಗದುಕೊಂಡು ಪ್ರತಿ ನಿಯಮ ಎಂದರೆ ಏನು ಎಂದು ವಿವರಿಸಿ – ನಿಯಮಗಳು ಹೇಗೆ ಅನುಸರಿಸಲ್ಪಡುತ್ತವೆ ಎಂಬುದರ ಬಗೆಗೆ ಉದಾಹರಣೆಗಳನ್ನು ನೀಡುವುದು.

## 4. ತರಗತಿಯ ಹೊರಗಿನ ಪರಿಣಾಮಗಳು

ನಿಯಮಗಳನ್ನು ಮುರಿಯಲು ಪರಿಣಾಮಗಳ ಬಗೆಗೆ ವಿದ್ಯಾರ್ಥಿಗಳಿಗೆ ತಿಳಿಸಿ ಇವು ಎಚ್ಚರಿಕೆಯಂತಹ ಹಂತಗಳಲ್ಲಿ ಸಂಬಂಧಿಸಬಹುದು.

## 5. ನಿಯಮಗಳ (ಚಾರ್ಟ್) ಫಲಕಗಳನ್ನು ಸಿದ್ಧಪಡಿಸುವುದು

ನಿಯಮಗಳ ಫಲಕಗಳನ್ನು ಸಿದ್ಧಪಡಿಸಿ ತರಗತಿಯಲ್ಲಿ ನೇತುಹಾಕಿ ನಿಯಮಗಳನ್ನು ಧನಾತ್ಮಕ ವಿಧಾನಗಳಲ್ಲಿ ಹೇಳುವುದು. ಉದಾಹರಣೆಗೆ : 'ಇತರ ಜನರನ್ನು ತಳ್ಳಬೇಡಿ' ಎಂದು ಹೇಳುವ ಬದಲು 'ಇತರರನ್ನು ಗೌರವಿಸಿ' ಎಂದು ಬರೆಯಬಹುದು.

## 6. ನಿಯಮಗಳಿಗೆ ಬದ್ಧತೆಯನ್ನು ವಿದ್ಯಾರ್ಥಿಗಳು ಮಾಡುತ್ತಾರೆ

ನಿಯಮಗಳ ಬಗ್ಗೆ ನಿಮ್ಮೊಂದಿಗೆ ಒಪ್ಪಂದಕ್ಕೆ ಬರಲು ವಿದ್ಯಾರ್ಥಿಗಳಿಗೆ ಕೇಳಿ ಅವರು ಪ್ರತಿಜ್ಞೆಯ ರೂಪದಲ್ಲಿ ಸಹಿ ಮಾಡಬಹುದು ಅಥವಾ ಕೇವಲ ತಮ್ಮ ಕೈಗಳನ್ನು ಹೆಚ್ಚಿಸಬಹುದು. ಹಾಗೆ ಮಾಡುವಾಗ ಅವರು ವರ್ಗ ನಿಯಮಗಳನ್ನು ತತ್ತಿಹಿಡಿಯಲು ಭರವಸೆ ನೀಡುತ್ತಾರೆ.

- ವಿದ್ಯಾರ್ಥಿಗಳ ಮಾಲಿಕತ್ವವನ್ನು ತೆಗೆದುಕೊಳ್ಳಲು ವಿದ್ಯಾರ್ಥಿಗಳಿಗೆ ನಿಯಮಗಳನ್ನು ಖರೀದಿಸಲು ಮತ್ತೊಂದು ವಿಧಾನವೆಂದರೆ ತರಗತಿಗೆ ನಿಯಮಗಳನ್ನು ಅಭಿವೃದ್ಧಿಪಡಿಸುವಾಗ ಅವರ ಆಂತರಿಕ ಅಂಶಗಳನ್ನು ಪಡೆಯುವುದಾಗಿದೆ.
- ನಿಯಮಗಳನ್ನು ಕುರಿತು ಮಾತನಾಡಲು ಮತ್ತು ವಿದ್ಯಾರ್ಥಿ ಗಳೊಂದಿಗೆ ಅವುಗಳನ್ನು ಪರಿಶೀಲಿಸಲು ಸಮಯ ತೆಗೆದು ಕೊಳ್ಳುವುದು.

## 7. ಮೌಖಿಕ ಸಂವಹನವನ್ನು ಬಳಸುವುದು

ಸಂಕೇತಗಳನ್ನು ದೇಹದ ಸೂಚನೆಗಳನ್ನು ಮತ್ತು ಇತರ ತಂತ್ರಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳ ಗಮನವನ್ನು ಪಡೆಯುವುದರಲ್ಲಿ ಸಹಾಯವಾಗುತ್ತದೆ. ಉದಾಹರಣೆಗೆ : ನೀವು ದೀಪಗಳನ್ನು ಆಫ್ ಮಾಡಬಹುದು ಮತ್ತು ಅದು ಒಂದು ಚಟುವಟಿಕೆಯನ್ನು ಕಟ್ಟಲು ಸಹಾಯವಾಗುವುದು.

- ಪ್ರಾಥಮಿಕ ಸಂಕೇತಗಳೊಂದಿಗೆ ಸೂಚನೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತವೆ. ನಿಯತಕಾಲಿಕವಾಗಿ ಅಲ್ಲದೇ ಮೌಖಿಕವಾಗಿ ಸೂಚನೆಗಳನ್ನು ಬದಲಿಸುವುದರಿಂದ ವಿದ್ಯಾರ್ಥಿಗಳು ಅವರೊಂದಿಗೆ ಬೇಸರಗೊಳ್ಳದಂತೆ ತಡೆಯುತ್ತಾರೆ.

## 8. ಸೂಕ್ತವಾಗಿ ನಟಿಸಲು ವಿದ್ಯಾರ್ಥಿಗಳನ್ನು ಪ್ರಶಂಸಿಸಿ

ವಿದ್ಯಾರ್ಥಿಗಳು ನಿಯಮಗಳನ್ನು ಪಾಲಿಸಿದಾಗ ಅವರಿಗೆ ತಿಳಿಸುವ ಮೂಲಕ ಸರಿಯಾಗಿ ವರ್ತಿಸುವ ವಿದ್ಯಾರ್ಥಿಗಳ ಧನಾತ್ಮಕ ಉದಾಹರಣೆಯಾಗಿದೆ, ವಿದ್ಯಾರ್ಥಿಗಳನ್ನು ತೋರಿಸುವ ಮೂಲಕ ಯಾವ ಉತ್ತಮ ನಡವಳಿಕೆ ಕಾಣುತ್ತದೆ. ಅವರು ವರ್ತನೆಯನ್ನು ಹೇಗೆ ರೂಪಿಸಬೇಕು ಎಂದು ತಿಳಿಯುತ್ತದೆ.

## 9. ಪೋಷಕರನ್ನು ಆರಂಭದಲ್ಲಿ ತೊಡಗಿಸಿಕೊಳ್ಳುವುದು

ಪ್ರಾಥಮಿಕ ಶಾಲಾ ಹಂತದಲ್ಲಿ ಶಿಸ್ತು ಸಮಸ್ಯೆಗಳು ಇದ್ದರೆ ಮಗುವಿನ ಪೋಷಕರೊಂದಿಗೆ ಸರ್ಪಕದಲ್ಲಿರಲು ಇದು ಸಹಾಯಕವಾಗಿರುತ್ತದೆ. ಶಿಸ್ತು ಸಮಸ್ಯೆಯು ಗಂಭೀರವಾಗುವುದಕ್ಕೂ ಮೊದಲು ಯೋಚಿಸಿ ಮಗುವಿಗೆ ಪುನಃ ನಿರ್ದೇಶನ ನೀಡುವದಾಗಿದೆ.

## 10. ಪರಸ್ಪರ ಸಂವಹನ ನಡೆಸಲು ವಿದ್ಯಾರ್ಥಿಗಳಿಗೆ ಉಪಕರಣಗಳನ್ನು ನೀಡಿ

ಭಿನ್ನಾಭಿಪ್ರಾಯಗಳನ್ನು ಮತ್ತು ದುರುಪಯೋಗಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ಉಪಕರಣಗಳನ್ನು ನೀಡುವ ಮೂಲಕ ಧನಾತ್ಮಕ ಪರಸ್ಪರ ವರ್ತನೆಗಳನ್ನು ಬಲಪಡಿಸುವುದು. ಈ ಪರಸ್ಪರ ಕ್ರಿಯೆಗಳಿಗೆ ಬಳಸುವ ಪರಿಕರಗಳನ್ನು ಹೊಂದಿರುವ ಸಂಭಾವ್ಯ ಶಿಸ್ತು ಸಮಸ್ಯೆಗಳನ್ನು ಪ್ರಚುರಪಡಿಸುವುದು.

## ಉಪಸಂಹಾರ

ಒಟ್ಟಾರೆ ತರಗತಿ ನಿರ್ವಹಣೆಯ ಸಂದರ್ಭದಲ್ಲಿ ಶಿಕ್ಷಕರು ನೀತಿ ನಿಯಮಗಳ ಪಾಲನೆಯೊಂದಿಗೆ ಬೋಧನೆಯ ಸಂದರ್ಭದಲ್ಲಿ ಶಿಸ್ತು ಪರಿಪಾಲನೆಯೊಂದಿಗೆ ಬೋಧನೆ ಮಾಡಿದರೆ, ತರಗತಿಯ ನಿರ್ವಹಣೆಯೊಂದಿಗೆ ಪರಿಣಾಮಕಾರಿ ಬೋಧನೆ ಹಾಗೂ ಪರಿಣಾಮಕಾರಿ ಕಲಿಕೆಯು ಕೂಡಾ ಆಗುವುದು.

## ಆಕರ ಗ್ರಂಥಗಳು


- **ಶ್ರೀಮತಿ ಡಿ.ರಾಧಾಮಣಿ ಶ್ರೀ ಸುಬ್ರಮಣ್ಯಂ, ಶ್ರೀಮತಿ ಎಸ್. ಪಾರ್ವತಿ**
  - ♦ ಶೈಕ್ಷಣಿಕ ನಿರ್ವಹಣೆ ಮತ್ತು ಶಾಲಾ ಸಂಘಟನೆ
  - ♦ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ.
- **ಶ್ರೀಮತಿ. ಎಲ್.ವಿ. ಪಟ್ಟೇದ**
  - ♦ ಶೈಕ್ಷಣಿಕ ವ್ಯವಸ್ಥೆ ಮತ್ತು ಶಾಲಾ ಆಡಳಿತ
  - ♦ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
- **ಡಾ.ಎಸ್.ಬಿ. ಕೊಂಗವಾಡ, ಪ್ರೊ ಎ.ಜಿ. ಕರಿಗಣ್ಣವರ**
  - ♦ ಶಾಲಾ ನಿರ್ವಹಣೆ
  - ♦ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
- Web Browsing


■■

– 13 ನೇ ಪುಟದಿಂದ ಮುಂದುವರೆದುದು

ಟಿಪ್ಪು ಕಂಡ ಕನಸು ಬರೀ ಒಂದು ಐತಿಹಾಸಿಕ ನಾಟಕವಾಗಿ ಮಾತ್ರ ಉಳಿಯುವುದಿಲ್ಲ; ಕನ್ನಡ ನಾಡಿನ ಚರಿತ್ರೆಯ ಪುನರ್ ವಿಮರ್ಶೆಯೂ ಇಲ್ಲಿದೆ. ಟಿಪ್ಪುವಿಗೆ ಸೋಲಾದದ್ದು ಇದರಲ್ಲಿ ತಿಳಿಯುತ್ತದೆ. ಇಂಗ್ಲಿಷರ ರಾಷ್ಟ್ರಪ್ರೇಮ, ನಿಷ್ಠೆ, ಭಾರತೀಯರ ವಿಶ್ವಾಸಘಾತುಕ ಪ್ರವೃತ್ತಿ(ಉದಾ: ನಾಟಕದ ಮೀರ್‌ಸಾಧಿಕ್) ದೂರದೃಷ್ಟಿಯ ಕೊರತೆ, ಸಮರ್ಥ ನಾಯಕತ್ವದ ಅಭಾವ ಇವೆಲ್ಲವೂ ನಾಟಕದಲ್ಲಿ ಅನಾವರಣಗೊಂಡಿವೆ.

**ನಾಟಕಗಳ ಅನನ್ಯತೆ:** ಗಿರೀಶ್ ಕಾರ್ನಾಡರ ಬಹುತೇಕ ನಾಟಕಗಳು 'ನವೋ ನವೋನ್ಮೇಷಶಾಲಿನಿ...' ಎಂಬಂತೆ ಹೊಸ ಸಂವೇದನೆಯನ್ನು ಒಳಗೊಂಡ ನವ್ಯ ನಾಟಕಗಳೇ ಆಗಿವೆ. ಮನುಷ್ಯನೇ ಅಲ್ಲಿನ ಕೇಂದ್ರ ಬಿಂದು. ಮನುಷ್ಯನ ಸಾಧ್ಯಾಸಧ್ಯತೆಯ ಶೋಧಕ್ಕೆ ಕಾರ್ನಾಡರು ನಾಟಕವನ್ನು ಸಾಧನವನ್ನಾಗಿ ಮಾಡಿಕೊಂಡಿರುವುದು ಗಮನೀಯ ಸಂಗತಿ. ಮನುಷ್ಯನ ವ್ಯಕ್ತಿತ್ವಕ್ಕೂ ಅವನು ಮಾಡುವ ಕಾರ್ಯಗಳಿಗೂ ಇರುವ ಸಂಬಂಧಗಳ ಹುಡುಕಾಟದ ಕುರುಹುಗಳು ಉಲ್ಲೇಖನೀಯ ಅಂಶಗಳಾಗಿವೆ. ಅವರ ನಾಟಕಗಳಲ್ಲಿ ಕಂಡುಬರುವ ಇತಿಹಾಸ, ಪುರಾಣ ಮತ್ತು ಜಾನಪದ ಅಂಶಗಳು ಸಮಕಾಲೀನ ಸಂದರ್ಭದಲ್ಲಿಟ್ಟು ವಿಶ್ಲೇಷಣೆ ಮಾಡುವುದು ಕಾರ್ನಾಡ ವಿಶೇಷತೆಯಾಗಿದೆ. ಅದಕ್ಕೆ ಅವರು ಹೊಸ ಹೊಸ ತಂತ್ರಗಳನ್ನು ಅಳವಡಿಸಿಕೊಂಡು ನಾಟಕಗಳನ್ನು ಕಟ್ಟಿದ್ದಾರೆ. ಅಣಕ, ವ್ಯಂಗ್ಯ ಮತ್ತು ವಿಡಂಬನೆಗಳ ಮೂಲಕ ಗಂಭೀರವಾದ ಅರ್ಥ ಪ್ರತಿಮೆಯನ್ನು ಸೃಷ್ಟಿಸುವ ಕಾರ್ಯ ಅವರ ನಾಟಕಗಳಲ್ಲಿ ದಟ್ಟವಾಗಿದೆ. ಮನುಷ್ಯನ ಮುಖವಾಡವನ್ನು ಕಳಚಿ ವಾಸ್ತವವನ್ನು ಹೊರತೆಗೆಯುವುದು ಅವರ ನಾಟಕಗಳ ವೈಶಿಷ್ಟ್ಯವಾಗಿದೆ. ಅವರದು ಪ್ರಯೋಗಶೀಲ ಪ್ರತಿಭೆ. ಅವರು ಹೊಸ ಮೌಲ್ಯಗಳ ಪ್ರತಿಪಾದಕರೂ ಹೌದು, ಅನ್ವೇಷಕರೂ ಹೌದು. ಅವನ ನಾಟಕಗಳಲ್ಲಿ ವೈಚಾರಿಕತೆ ಕೂಡ ಎದ್ದು ಕಾಣುತ್ತದೆ.

## ಆಕರ ಗ್ರಂಥಗಳು


- **ಗಿರೀಶ ಕಾರ್ನಾಡ** : 'ಯಯಾತಿ, ಮನೋಹರ ಗ್ರಂಥಮಾಲಾ, ಧಾರವಾಡ, 1961
- **ಗಿರೀಶ ಕಾರ್ನಾಡ** : 'ತುಘಲಕ್', ಮನೋಹರ ಗ್ರಂಥಮಾಲಾ, ಧಾರವಾಡ, 1964
- **ಗಿರೀಶ ಕಾರ್ನಾಡ** : 'ಹಯವದನ', ಮನೋಹರ ಗ್ರಂಥಮಾಲಾ, ಧಾರವಾಡ, 1971
- **ಗಿರೀಶ ಕಾರ್ನಾಡ** : 'ಅಂಜುಮಲ್ಲಿಗೆ', ಮನೋಹರ ಗ್ರಂಥಮಾಲಾ, ಧಾರವಾಡ, 1977
- **ಗಿರೀಶ ಕಾರ್ನಾಡ** : 'ಹಿಟ್ಟಿನ ಹುಂಜ', ಮನೋಹರ ಗ್ರಂಥಮಾಲಾ, ಧಾರವಾಡ, 1980
- **ಗಿರೀಶ ಕಾರ್ನಾಡ** : 'ನಾಗಮಂಡಲ', ಮನೋಹರ ಗ್ರಂಥಮಾಲಾ, ಧಾರವಾಡ, 1988
- **ಗಿರೀಶ ಕಾರ್ನಾಡ** : 'ತಲೆದಂಡ', ಮನೋಹರ ಗ್ರಂಥಮಾಲಾ, ಧಾರವಾಡ, 1990
- **ಗಿರೀಶ ಕಾರ್ನಾಡ** : 'ಅಗ್ನಿ ಮತ್ತು ಮಳೆ', ಮನೋಹರ ಗ್ರಂಥಮಾಲಾ, ಧಾರವಾಡ, 1995
- **ಗಿರೀಶ ಕಾರ್ನಾಡ** : 'ಟಿಪ್ಪು ಸುಲ್ತಾನ ಕಂಡ ಕನಸು', ಮನೋಹರ ಗ್ರಂಥಮಾಲಾ, ಧಾರವಾಡ, 1999


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕುಲಗೋಡ ತಮ್ಮಣ್ಣ ಪಾರಿಜಾತದ ಕೊರವಂಜಿ

✍ **ಡಾ. ರಾಜು ಕಂಬಾರ, ಕೌಜಲಗಿ,** ಕನ್ನಡ ಪ್ರಾಧ್ಯಾಪಕರು, ಶ್ರೀ ಅದೃಶ್ಯ ಗುರುಸಿದ್ಧೇಶ್ವರ ಪದವಿ ಮಹಾವಿದ್ಯಾಲಯ, ಮರಡಿಮಠ (ತಾ. ಗೋಕಾಕ)

ಕರ್ನಾಟಕ ಜನಪದ ರಂಗಭೂಮಿಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಅದು ಬೆಳೆದು ಬಂದ ರೀತಿಯಲ್ಲಿ ಒಂದು ಕೌತುಕವಿದೆ. ಜನಪದ ಕಲೆಗಳ ಆಗರವಾದ ಹಳ್ಳಿಗಳು, ಆಯಾಸಗೊಳ್ಳದೆ ದುಡಿಯುವ ಜನಪದರು ವಿವಿಧ ಮನರಂಜನೆ ನೀಡುವ ಕಲಾಶಕ್ತಿಗಳು. ಜಾತ್ರಾ–ಉತ್ಸವ, ಕಾರ್ತಿಕ ಓಕುಳಿ ಮುಂತಾದ ಧಾರ್ಮಿಕ ಆಚರಣೆಯ ಸಂದರ್ಭದಲೆಲ್ಲ ಹಳ್ಳಿಗರು ಹಾಡುವುದು, ಕುಣಿಯುವುದು, ವಾದ್ಯ ನುಡಿಸುವುದು ಮುಖಕ್ಕೆ ಬಣ್ಣ ಬಳಿದುಕೊಂಡು, ರಂಗುರಂಗಿನ ವೇಷಭೂಷಣ ಧರಿಸಿ, ಅಟ್ಟವೇರಿ ಆಟವಾಡುವ ದೃಶ್ಯಗಳು ಅದ್ಭುತವೆನಿಸುತ್ತವೆ. ಸೋಗುಗಳನ್ನು, ಹಗಲು ವೇಷಗಳನ್ನು ಧರಿಸಿ ಜನರಿಗೆ ಮನರಂಜನೆ ನೀಡುತ್ತಿದ್ದ ಕಲೆ, ಅನಂತರದಲ್ಲಿ ಇಡೀ ರಾತ್ರಿಯೆಲ್ಲ ಪ್ರದರ್ಶಿಸುವ ಬಯಲಾಟವಾಗಿ ರೂಪಾಂತರಗೊಂಡಿತು. ಎಲ್ಲ ಜನಪದ ಕಲೆಗಳನ್ನು ತನ್ನೊಳಗೆ ಮೈಗೂಡಿಸಿಕೊಂಡು ಒಂದು ಸಂಕೀರ್ಣ ಕಲೆಯಾಗಿ ಬಯಲಾಟ ಕರ್ನಾಟಕದಲ್ಲಿ ನೆಲೆಗೊಂಡಿತು.

ಕನ್ನಡದ ಬಯಲಾಟಗಳು ಪ್ರಾದೇಶಿಕವಾರು ವೈವಿಧ್ಯತೆಯನ್ನು ಪಡೆದುಕೊಂಡಿವೆ. ದಕ್ಷಿಣದಲ್ಲಿ ಯಕ್ಷಗಾನ ಬಯಲಾಟಗಳು ಪ್ರಸಿದ್ಧಗೊಂಡಿದ್ದರೆ ಕನ್ನಡದ ಉತ್ತರ ಭಾಗದಲ್ಲಿ ಸಣ್ಣಾಟ, ದೊಡ್ಡಾಟ, ಶ್ರೀಕೃಷ್ಣ ಪಾರಿಜಾತ ಬಯಲಾಟಗಳು ಜನಪ್ರಿಯಗೊಂಡಿವೆ. ಶ್ರೀ ಕೃಷ್ಣಪಾರಿಜಾತ ಬಯಲಾಟಕ್ಕೆ ಎರಡುನೂರು ವರ್ಷಗಳ ಇತಿಹಾಸ ದೊರೆಯುತ್ತದೆ. ಮೂಲತಃ ಹಾಡುಗಬ್ಬವಾಗಿ ಪಾರಾಯಣಗೊಳ್ಳುತ್ತಿದ್ದ ಶ್ರೀಕೃಷ್ಣನ ಕಥೆ ಅನಂತರದಲ್ಲಿ ಒಂದು ಸ್ವತಂತ್ರ ಬಯಲಾಟವಾಗಿ ಪ್ರಸಿದ್ಧಿ ಪಡೆದಿದೆ. ಇಂಥಹ ಶ್ರೀಕೃಷ್ಣಪಾರಿಜಾತ ಬಯಲಾಟವನ್ನು ಕನ್ನಡಿಗರಿಗೆ ಸಂಪಾದಿಸಿಕೊಟ್ಟ ಕೀರ್ತಿ ಜಾನಪದ ವಿದ್ವಾಂಸ ಡಾ. ಎಂ.ಎಸ್. ಸುಂಕಾಪುರ ಅವರಿಗೆ ಸಲ್ಲುತ್ತದೆ.

ಮರಿಬಸಪ್ಪ ಸಣ್ಣಬಸಪ್ಪ ಸುಂಕಾಪುರ ಅವರು ಗದಗ ಜಿಲ್ಲೆಯ ಮುಳಗುಂದದಲ್ಲಿ 10ನೇ ಜನೇವರಿ 1921 ರಂದು ಜನಿಸಿ ಕನ್ನಡ ಸಾಹಿತ್ಯ ಲೋಕಕ್ಕೆ; ಜನಪದ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದವರು. ಗದಗದಲ್ಲಿ ಪ್ರೌಢ ಶಿಕ್ಷಣ ಪಡೆದು, ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಬಿ.ಎ. ಪದವಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಎಂ.ಎ. ಪದವಿ ಪಡೆದವರು. ಬೆಳಗಾವಿ, ಬಾಗಲಕೋಟ ಪದವಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಅನಂತರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಗ್ರಂಥ ಸಂಪಾದನ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದವರು. ಲಲಿತ ಪ್ರಬಂಧ, ಜಾನಪದ ಸಂಗ್ರಹ–ಸಂಪಾದನ, ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಗಮನಾರ್ಹವಾದ ಸಾಧನೆಗೈದವರು. ಗರತಿಯ ಗರಿಮೆ, ಹೋಳಿಹಾಡು, ಗಂಗೀಗೌರಿ ಸಂವಾದ, ಜಾನಪದ ಸಾಹಿತ್ಯ ದರ್ಶನ, ದುಂದುಮೆ ಪದ ಮುಂತಾದ ಜಾನಪದ ಕೃತಿಗಳನ್ನು ರಚಿಸಿದ ಸುಂಕಾಪುರ ಅವರು 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎಂಬ ವಿಷಯದಲ್ಲಿ ಸಂಶೋಧನೆ ಮಾಡಿದವರು. 'ಅಲ್ಲಮಪ್ರಭು ಸಣ್ಣಾಟ', 'ಕೃಷ್ಣ ಸಂಧಾನ', 'ಬಬ್ರುವಾಹನ ವಿಜಯ' ಮುಂತಾದ ಬಯಲಾಟಗಳ ಜಾನಪದ ಕೃತಿಗಳನ್ನು ಸಂಪಾದಿಸಿ ಕನ್ನಡ ಬಯಲಾಟಗಳನ್ನು ಚಿರಸ್ಥಾಯಿಯಾಗಿದ್ದವರು. ಡಾ. ಎಂ.ಎಸ್. ಸುಂಕಾಪುರ ಅವರ ಬಯಲಾಟ ಸಂಪಾದನೆ ಕೃತಿಗಳಲ್ಲಿ 'ಕುಲಗೋಡ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ' ಅದ್ವಿತೀಯ ಜಾನಪದ ಸಂಗ್ರಹವಾಗಿದೆ.

ಡಾ. ಎಂ.ಎಸ್. ಸುಂಕಾಪುರ ಅವರು ಸಂಪಾದಿಸಿದ 'ಶ್ರೀಕೃಷ್ಣ ಪಾರಿಜಾತ'ದ ಕರ್ತೃ ಕುಲಗೋಡ ತಮ್ಮಣ್ಣ ಬಲಭೀಮನ ಪರಮಭಕ್ತ. ಬೆಳಗಾವಿ ಜಿಲ್ಲೆಯ, ಗೋಕಾಕ ತಾಲೂಕಿನ ಕುಲಗೋಡ ಗ್ರಾಮದ ತಮ್ಮಣ್ಣ ಚಿನಿವಾರ ವೃತ್ತಿಗಾರ ವೈದಿಕ ಪರಂಪರೆಯಲ್ಲಿ ಹುಟ್ಟಿ ಬೆಳೆದು ಬಂದ ತಮ್ಮಣ್ಣ ಮಹಾರಾಷ್ಟ್ರದ ತಮಾಷಾ ಮತ್ತು ಕನ್ನಡ–ಮರಾಠಿ ಅಭಿಜಾತ ನಾಟಕಗಳಿಂದ ಪ್ರಭಾವಿತಗೊಂಡಿದ್ದನು. ಸಂಗೀತ–ಸಾಹಿತ್ಯದ ಪರಿಚಯವಿದ್ದ ನಾಟಕಕಾರ, ತನ್ನದೇ ಆದ ವಿಶಿಷ್ಟ ಸಂಗೀತ–ಸಾಹಿತ್ಯ ಅಭಿನಯ ಪ್ರತಿಭಾ ಶಕ್ತಿಗಳನ್ನು ಹುರಿಗೊಳಿಸಿ ಬಯಲಾಟವಾಗಿಸುವ ರಂಗತಂತ್ರಜ್ಞ, ರಾಯಚೂರ ಜಿಲ್ಲೆಯ ಅಪರಾಳ ಗ್ರಾಮದ ಶ್ರೀಹರಿಯ ಭಕ್ತನಾಗಿದ್ದ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ ಕಾವ್ಯ ಕೃತಿಯನ್ನು ಕುಲಗೋಡ ತಮ್ಮಣ್ಣ ರಂಗಭೂಮಿಗೆ ತರುವಲ್ಲಿ ತನ್ನೆಲ್ಲ ಪ್ರತಿಭೆಯನ್ನು ಧಾರೆ ಎರೆದಿದ್ದಾನೆ. ಕೃಷ್ಣ ಪಾರಿಜಾತ ಬಯಲಾಟವನ್ನು ಕುಲಗೋಡ ಗ್ರಾಮದ ಬಲಭೀಮನ ದೇವಸ್ಥಾನದಲ್ಲಿದ್ದುಕೊಂಡು ರಚಿಸಿದ್ದಾನೆ. ಅದಕ್ಕೊಸ್ಕರ ಕುಲಗೋಡ ತಮ್ಮಣ್ಣ ಬಯಲಾಟ ಕೃತಿಯನ್ನು ಬಲಭೀಮನಿಗೆ ಅರ್ಪಿಸಿದ್ದಾನೆಂದು ಹೇಳುವ ಮಾತಿಗೆ ಪುಷ್ಠಿ ನೀಡುವಂತೆ 'ನೋಡಿರೋ ಬಲಭೀಮನ ದಯವಿದು' ಎಂದು ಹಾಡು ರಚಿಸುತ್ತಾನೆ.

ಅಪರಾಳ ತಮ್ಮಣ್ಣ–ಸಿರಗುಪ್ಪಿ ಸದಾಶಿವಯ್ಯರಿಂದ ಪೂರ್ಣಗೊಂಡ ಮೂಲ ಶ್ರೀಕೃಷ್ಣ ಪಾರಿಜಾತದ ಕೆಲವು ಹಾಡುಗಳನ್ನು ಕುಲಗೋಡ ತಮ್ಮಣ್ಣ ಕೈ ಬಿಟ್ಟಿದ್ದಾನೆ. ಪದ್ಯದ ಭಾವಾರ್ಥಗಳನ್ನೆ ಸಂಭಾಷಣೆಯಾಗಿ ರೂಪಾಂತರಿಸಿದ್ದಾನೆ. 1750 ರಲ್ಲಿ ರಚನೆಗೊಂಡ ಅಪರಾಳ ತಮ್ಮಣ್ಣನ ಕೃತಿಯನ್ನು ಕುಲಗೋಡ ತಮ್ಮಣ್ಣನು 1860 ಸುಮಾರಿಗೆ ಬಯಲಾಟವಾಗಿಸಿದ್ದಾನೆ. ಶ್ರೀಕೃಷ್ಣಪಾರಿಜಾತ ಬಯಲಾಟ ಜನಪ್ರಿಯತೆಗೆ ಕೆಲವು ಅಂಶಗಳನ್ನು ಸೇರಿಸಿದ್ದಾನೆ. ಗೊಲ್ಲತಿ ಸನ್ನಿವೇಶ ಮತ್ತು ಕೃಷ್ಣ–ರುಕ್ಮಿಣಿಯ ಸಂವಾದ ಮುಖ್ಯವಾಗಿವೆ. ಗೊಲ್ಲತಿಯ ಸನ್ನಿವೇಶದಲ್ಲಿ ಕುಲಗೋಡ ತಮ್ಮಣ್ಣನು ಸ್ವತಃ ಕೆಲವು ಹಾಡುಗಳನ್ನು ರಚಿಸಿರುವ ಸಾಧ್ಯತೆಗಳಿವೆ ಎಂದು ವಿದ್ವಾಂಸರಾದ ಡಾ. ಶ್ರೀರಾಮ ಇಟ್ಟಣ್ಣವರ ಅಭಿಪ್ರಾಯಿಸಿದ್ದು ಸತ್ಯವೆನಿಸುತ್ತದೆ. ಕೆಲವು ಜಾವಳಿ ಪದಗಳನ್ನು ಸ್ವೀಕರಿಸಿದ್ದಾನೆ. ಶ್ರೀಕೃಷ್ಣಪಾರಿಜಾತ ಬಯಲಾಟದ ಸಂಗೀತವು ವಿಶಿಷ್ಟವಾಗಿದೆ. ಮುಖ್ಯ ಪಾತ್ರದಾರಿಗಳಿಗೆ ಇಲ್ಲಿ ಹಾಡಿಸುವ ಪ್ರಯತ್ನವನ್ನು ತಮ್ಮಣ್ಣ ಮಾಡಿಸಿದ್ದಾನೆ. ಸ್ವತಃ ತಮ್ಮಣ್ಣನೆ ಭಾಗವತ ಪಾತ್ರಧಾರಿಯಾಗಿ ಕೆಲವು ವರ್ಷ ಮೇಳ ಕಟ್ಟಿಕೊಂಡು ಬಯಲಾಟ ಪ್ರದರ್ಶನ ಮಾಡಿದ್ದಾನೆ. ಕೌಜಲಗಿ ನಿಂಗವ್ವ, ಹುಕ್ಕೇರಿ ಸಿದ್ಧರಾಮಪ್ಪ ಬಡಕುಂದ್ರಿ ಬಸಪ್ಪ, ನೀಲವ್ವ ಬಾರಕಿ, ಯಾದವಾಡ ಮಲಕಪ್ಪ ಮೊದಲಾದ ಪಾರಿಜಾತ ಕಲಾವಿದರನ್ನು ಸಂಘಟಿಸಿಕೊಂಡು ರಂಗ ಪ್ರಯೋಗಗೊಳಿಸಿ ಅನಂತರದಲ್ಲಿ ನೂರಾರು ಪಾರಿಜಾತ ಮೇಳಗಳ ಹುಟ್ಟಿಗೆ ಕುಲಗೋಡ ತಮ್ಮಣ್ಣ ಕಾರಣವಾಗಿದ್ದಾನೆ.

ಕುಲಗೋಡ ತಮ್ಮಣ್ಣ ಪಾರಿಜಾತದಲ್ಲಿ ಕೃಷ್ಣ ಕಥಾನಾಯಕ, ರುಕ್ಮಿಣಿ–ಸತ್ಯಭಾಮೆ ಇಬ್ಬರು ನಾಯಕಿಯರು. ಭಾಗವತ ಅಥವಾ ಧೂತಿ ಹಾಸ್ಯಪಾತ್ರ ಹಾಗೂ ಕಥಾನಿರೂಪಕಿ ಪಾತ್ರವಾದರೆ, ನಾರದ ಪಾರಿಜಾತ ಪುಷ್ಪದ ಮಹತ್ವ ಸಾರುವ, ಅದರ ಮೂಲಕ ದಾಂಪತ್ಯದಲ್ಲಿ ಐಕ್ಯತೆ ಮೂಡಿಸುವ ಪಾತ್ರವಾಗಿ ಬಯಲಾಟದಲ್ಲಿ ಕಂಡುಬರುತ್ತದೆ. ಈ ಎಲ್ಲ ಪಾತ್ರಗಳೊಂದಿಗೆ ಕೊರವಂಜಿ ಪಾತ್ರವು ಇಡೀ ಶ್ರೀಕೃಷ್ಣ ಪಾರಿಜಾತ ಬಯಲಾಟಕ್ಕೆ ಒಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿಶಿಷ್ಟ ಮತ್ತು ಮಹತ್ವದ ಪಾತ್ರವಾಗಿ ಪರಿಣಮಿಸಿದೆ. ಬಯಲಾಟದ ಕಥಾನಾಯಕ ಕೃಷ್ಣನೆ ಕೊರವಂಜಿ ವೇಷ ಧರಿಸಿ ಜಗದ ಸಕಲ ಜ್ಞಾನಗಳನ್ನು ಬಿತ್ತರಿಸುವ ಪಾತ್ರವಾಗಿದೆ.

ಕುಲಗೋಡ ತಮ್ಮಣ್ಣ ಪಾರಿಜಾತ ಕೃಷ್ಣನ ಪಾತ್ರಕ್ಕೆ ಎಷ್ಟು ಮಹತ್ವ ನೀಡಿದಾನೋ ಅಷ್ಟೇ ಮಹತ್ವವನ್ನು ಕೊರವಂಜಿ ಪಾತ್ರಕ್ಕೂ ನೀಡಿದ್ದಾನೆ. ಕೃಷ್ಣನೇ ಕೊರವಂಜಿಯಾದುದರಿಂದ ಕೃಷ್ಣ–ಕೊರವಂಜಿ ಅಭೇದ ಪಾತ್ರಗಳಾಗಿ ಕಂಡುಬರುತ್ತವೆ. ಕೃಷ್ಣ ದೈವಿಕತೆಯಿಂದ ಸಾಮಾನ್ಯ ಮನುಷ್ಯ ಸ್ವರೂಪಿಯಂತೆ ಕಾಣುತ್ತಾನೆ. ನಾರದರು ದೇವಲೋಕದಿಂದ ತಂದ ಪಾರಿಜಾತ ಪುಷ್ಪವು ರುಕ್ಮಿಣಿ ಬಳಿಯಿರುವ ಸಂಗತಿ ಕೇಳಿ ಕೋಪಗೊಂಡ ಸತ್ಯಭಾಮೆ ಕೃಷ್ಣನನ್ನು ತನ್ನ ಅಂತಃಪುರಕ್ಕೆ ಕರೆಯುತ್ತಾಳೆ. ಕೃಷ್ಣನು ಭಾಮೆಯ ಅರಮನೆಗೆ ಹೋಗಲು ನಿರಾಕರಿಸುತ್ತಾನೆ. ಸತ್ಯಭಾಮೆ ಪ್ರತಿಜ್ಞೆ ಗೈದು "ಕೃಷ್ಣಾ ನಿನ್ನ ಕಲ್ಲಿನಂಥ ಮನಸ್ಸನ್ನು ಕರಗಿಸಿ ಬೆಣ್ಣೆ ಸರಿ ಮಾಡದಿದ್ದರೆ ತಾನು ಭಾಮೆಯೇ ಅಲ್ಲ"ವೆಂದು ಹೇಳಿ ಶಕ್ತಿ ಪೂಜೆಗೆ ಅಣಿಯಾಗುತ್ತಾಳೆ. ಪತಿಯ ಒಲ್ಮೆಕೆಗಾಗಿ ಸತ್ಯಭಾಮೆ ದೇವಿಯನ್ನು ಆರಾಧಿಸಿದಾಗ, ದೇವಿಯ ವರ ಭಾಮೆಗೆ ದೊರೆಯುತ್ತದೆ. ಇತ್ತ ಕೃಷ್ಣನ ಮನಸ್ಸು ತಳಮಳಗೊಳ್ಳಲು ಆರಂಭಿಸುತ್ತದೆ.

**"ಶಿವ ಶಿವಾ ಇದು ಏನು ಸೋಜಿಗವೋ**
**ಜೀವ ಮರುಗುತಿದೆ**
**ಕದಡಿದಂತಃಕರಣ ಕಾಯ ತಲ್ಲಣೀಸುತ್ತಿದೆ"**

ಎಂಬ ಹಾಡಿನೊಂದಿಗೆ ಕೊರವಂಜಿ ಪಾತ್ರ ಪ್ರವೇಶಗೊಳ್ಳುತ್ತದೆ. ಸತ್ಯಭಾಮೆಗೆ ತಾನು ಅನ್ಯಾಯ ಮಾಡಿದೆ. ನನ್ನ ಮನಸ್ಸು ಕರಗುತಿದೆ. ಅವಳನ್ನು ನೋಡುವ ಹಂಬಲ ಹೆಚ್ಚುತಿದೆ ಎಂದು ಕೃಷ್ಣಧೂತಿಯ ಜೊತೆ ತನ್ನ ಮನದ ಭಾರವನ್ನು ಹೇಳಿ ಹಗುರಗೊಳಿಸಲು ಪ್ರಯತ್ನಿಸುತ್ತಾನೆ.

ಸತ್ಯಭಾಮೆಯನ್ನು ಕಾಣಲು ಕೃಷ್ಣ ವೇಷ ಬದಲಿಸುವ ಕುರಿತು ಧೂತಿಯ ಜೊತೆ ಸಮಾಲೋಚಿಸುತ್ತಾನೆ. ಕೊನೆಗೆ ಕೊರವಂಜಿ ವೇಷ ಧರಿಸಲು ನಿರ್ಧರಿಸಿ, ಕೊರವಂಜಿಗೆ ಅಗತ್ಯವಾಗಿರುವ ಸಲಕರಣೆಗಳನ್ನು ಧರಿಸುತ್ತಾನೆ. ಶಂಕಾಮಣಿ, ತಾವರೆಮಣಿ, ಗುಲಗಂಜಿಹಾರ ಮೊದಲಾದವುಗಳನ್ನು ಅಲಂಕರಿಸಿಕೊಂಡು ಜಡೆಬಿಚ್ಚಿದ ಕೃಷ್ಣ, ಸುಗಂಧ ದ್ರವ್ಯಗಳನ್ನು ಬಳಿದುಕೊಳ್ಳುತ್ತಾನೆ. ಕೃಷ್ಣ–ಕೊರವಂಜಿಯಾಗಿ ಕುಲದೈವ ಭೈರವಿ, ಶಾಖಾಂಬರಿಯನ್ನು ಪೂಜಿಸುತ್ತಾಳೆ. ಕುಲದೇವಿಯ ಆಶೀರ್ವಾದದೊಂದಿಗೆ ಕೊರವಂಜಿ ರಂಗ ಪ್ರವೇಶಿಸುತ್ತಾಳೆ. "ತೂಗಿರೆ ರಂಗನ ತೂಗಿರೆ ಕೃಷ್ಣನ, ತೂಗಿರೆ ಅಚ್ಯುತ ಅನಂತನ" ಎಂದು ತನ್ನ ಕೂಸನ್ನು ತೂಗುತ್ತ, ಜೋಗಳ ಹಾಡುತ್ತ ಲೋಕವನ್ನು ಸುತ್ತುತ್ತಾಳೆ. ಧೂತಿಗೆ ತಾನು ದೇವಲೋಕದ ಕೊರವಂಜಿ ಎಂದು ತಿಳಿಸುತ್ತಾಳೆ. ಕೊರವಂಜಿ ತನಗೆ ಗೊತ್ತಿರುವ ವಿದ್ಯೆಗಳ ಬಗ್ಗೆ ಧೂತಿಗೆ ವಿವರಿಸುತ್ತಾಳೆ. ಭೂತ ಬಿಡಿಸುವುದು, ಬೇತಾಳ ಬಿಡಿಸುವುದು, ಮಾತನಾಡದ ಮೂಕರನ್ನು ಮಾತನಾಡಿಸುವ ಕಲೆ ತನಗೆ ತಿಳಿದಿದೆ ಎಂದು ಕೊರವಂಜಿ ಜಗತ್ತಿಗೆ ತಿಳಿಸುತ್ತಾಳೆ.

"ಕೇರಿ ಕೇರಿಯೊಳಾಡುತ ಪಾಡುತ, ವೈಯಾರದಿ ಮನಿಮನಿ ತಿರಗುತ" ದೇವಲೋಕದಿಂದ ಭೂಲೋಕಕ್ಕೆ ಬಂದಿರುವ ಸಂಗತಿಯನ್ನು ಧೂತಿಗೆ ನೀಡುತ್ತಾಳೆ. ಊರೂರು ಸುತ್ತಿ ಸುತ್ತಿ ನಾರಿಯರಿಗೆಲ್ಲ ಶಕುನ, ಹಸ್ತಮುದ್ರಿಕೆ ಜ್ಞಾನವನ್ನು ವಿವರಿಸುತ್ತ ಕೊರವಂಜಿ ಸಂಚರಿಸುತ್ತಾಳೆ. ಛಪ್ಪನ್ನ ದೇಶಗಳನ್ನು ಸುತ್ತಾಡಿಸಿ, ತೆಲುಗು ನಾಡಿನ ಮೂಲಕ ಕೊರವಂಜಿಯನ್ನು ಕನ್ನಡ ನಾಡಿಗೆ ತರುವಲ್ಲಿ ಕುಲಗೋಡ ತಮ್ಮಣ್ಣ ಯಶಸ್ವಿಯಾಗುತ್ತಾನೆ. ದೇವಲೋಕದ ಕೊರವಂಜಿಯನ್ನು ನಾಟಕಕಾರ ಕನ್ನಡದ ಕೊರವಂಜಿಯಾಗಿಸುತ್ತಾನೆ. ಧೂತಿ ಕೊರವಂಜಿಯ ನಿಜವಾದ ಜ್ಞಾನವನ್ನು ಪರೀಕ್ಷಿಸಲು ಹಲವಾರು ಪ್ರಶ್ನೆಗಳನ್ನು, ಸಮಸ್ಯೆಗಳನ್ನು ಇಡುತ್ತಾಳೆ. ಕೊರವಂಜಿ ಅವುಗಳಿಗೆ ಸೂಕ್ತ ಉತ್ತರಗಳನ್ನು ನೀಡುತ್ತಾಳೆ. ಇದರಿಂದ ಆಶ್ಚರ್ಯಗೊಂಡ ಧೂತಿ, ಕೊರವಂಜಿಯನ್ನು ತನ್ನ ದೊರೆಶ್ಯಾನಿ ಸತ್ಯಭಾಮೆಯ ಬಳಿ ಕರೆದೊಯ್ಯಲು ಯೋಚಿಸಿ ಕೊರವಂಜಿಯನ್ನು ಮತ್ತೊಮ್ಮೆ ಪರೀಕ್ಷೆಗೊಳಪಡಿಸುತ್ತಾಳೆ. ಕೊರವಂಜಿಯನ್ನು ಸತ್ಯಭಾಮೆಯ ಮಂದಿರಕ್ಕೆ ಕರೆದುಕೊಂಡು ಹೋಗುವ ಮುನ್ನ ಎಲ್ಲಿಗೆ ಹೋಗುವುದಾಗಿ ಮತ್ತು ಯಾರ ಬಳಿ ಹೋಗುತ್ತಿದ್ದೇವೆ ಎಂಬುದನ್ನು ತಿಳಿಸಬೇಕೆಂದು ಧೂತಿ ಕೊರವಂಜಿಗೆ ಪ್ರಶ್ನಿಸುತ್ತಾಳೆ. ಧೂತಿಯ ಸಂಶಯಗಳನ್ನು ಸಂಯಮದಿಂದ ಕೊರವಂಜಿ ಪರಿಹರಿಸುತ್ತ, "ದ್ವಾರಾವತಿ ಪುರದರಸ ಯದುವೀರ ಶ್ರೀಕೃಷ್ಣನ ಅರ್ಧಾಂಗಿ ಸತ್ಯಭಾಮೆ ಹೌದೇನೆ?" ಎಂದು ಕೇಳುತ್ತಾಳೆ. ಸತ್ಯವನ್ನು ಹೇಳಿದ ಕೊರವಂಜಿ ಮಾತುಗಳಿಗೆ ಧೂತಿ ಬೆರಗಾಗುತ್ತಾಳೆ. ಇದು ಹೇಗೆ ಸಾಧ್ಯವೆಂದು ಧೂತಿ ಪ್ರಶ್ನಿಸುತ್ತಾಳೆ. ತಾನು ತ್ರಿಕಾಲ ಜ್ಞಾನಿಯಾಗಿದ್ದು ಭೂತ, ವರ್ತಮಾನ, ಭವಿಷ್ಯತ್ ಕಾಲ ಜ್ಞಾನದ ಬಲದಿಂದ ಭವಿಷ್ಯ ಹೇಳಲು ಸಾಧ್ಯವೆಂದು ಕೊರವಂಜಿ ಧೂತಿಗೆ ಮನವರಿಕೆ ಮಾಡಿಕೊಡುತ್ತಾಳೆ. "ನಿನ್ನಂಥ ಶ್ಯಾಣ್ಯಾಕಿ ನಮಗ ಬೇಕಾಗಿತ್ತು. ನಮ್ಮ ದೊರೆ ಶ್ಯಾನಿ ಮಂದಿರಕ್ಕೆ ಹೋಗೋಣ"ವೆಂದು ಧೂತಿಗೆ ಕೇಳಿಕೊಂಡಾಗ ಕೊರವಂಜಿ ಮೊದಮೊದಲು ನಿರಾಕರಿಸುತ್ತಾಳೆ. ಸತ್ಯಭಾಮೆಯನ್ನು ನೋಡುವ ಒಳಮನಸ್ಸು ಇದ್ದರೂ ಕೂಡ ಧೂತಿಯ ಸಂಶಯಗಳನ್ನು ನಿವಾರಿಸಲು ಸತ್ಯಭಾಮೆಯ ಅರಮನೆಗೆ ಹೋಗಲು ಕೊರವಂಜಿ ಸುಲಭವಾಗಿ ತೆರಳಲು ಒಪ್ಪುವುದಿಲ್ಲ. ಅಷ್ಟೇ ಅಲ್ಲದೆ ಶ್ರೀಹರಿ ಜಾರ, ಚೋರ, ಸ್ತ್ರೀಲೋಲನಿದ್ದು ಅಲ್ಲಿ ಬರಲು ಭಯವಾಗುತ್ತದೆಂದು ಕೊರವಂಜಿ ಧೂತಿಗೆ ಹೇಳುವುದರ ಮೂಲಕ ಶ್ರೀಮಂತರ ಉಸಾಬರಿ ನಮ್ಮಂಥ ಬಡ ಕೊರವಂಜಿಗೇಕೆ? ನಾವು ಬಡವರು ನಮ್ಮ ನೆರಳಿಗೆ ನಾವು ಹೆದರುವವರೆಂದು ಕೊರವಂಜಿ ಧೂತಿಗೆ ತಿಳಿಸುತ್ತಾಳೆ. ನಾವು ಪತಿವ್ರತಾ ಸ್ತ್ರೀಯರೆಂದು ಕೊರವಂಜಿ ಹೇಳುವುದರ ಜೊತೆಗೆ ಅನ್ಯ ಪುರುಷರ ಕರಿನೆರಳಿನಿಂದ ದೂರವಿರುವುದು ಯೋಗ್ಯವೆಂಬುದರ ಸಂಗತಿಯನ್ನು ಲೋಕಕ್ಕೆ ನೀಡುತ್ತಾಳೆ.

"ಊರೂರು ಸುತ್ತುವ ಬಡಕೊರವಿ ನೀನೆಂಥ ಪತಿವ್ರತಾ ಸ್ತ್ರೀಯಾಗಲು ಸಾಧ್ಯವಿದೆ" ಎಂದು ಧೂತಿ ಕೊರವಂಜಿಯನ್ನು ಪ್ರಶ್ನಿಸಿದಾಗ, ಕೊರವಂಜಿ ಪತಿವ್ರತಾ ಲಕ್ಷಣಗಳನ್ನು ವಿವರಿಸುತ್ತಾಳೆ. ಪತಿವ್ರತಾ ಮಹಿಳೆಯು ಮತ್ತೊಬ್ಬರ ಮನೆಯ ಹೊಸ್ತಿಲನ್ನು ತುಳಿಯುವೆಂದರೆ ಸರ್ಪದ ಹೆಡೆಯ ಮೇಲೆ ಕಾಲಿಟ್ಟಂಥ ಅನುಭವವಾಗುತ್ತದೆ. ಪರಪುರುಷರೊಡನೆ ಪತಿವ್ರತಾ ಸ್ತ್ರೀಯರು ಮಾತನಾಡುವುದಿಲ್ಲ. ಪರಪುರುಷನೆಂದರೆ ಚವತಿ ಚಂದ್ರನಿದ್ದಂತೆ ಅಪವಾದಗಳು ಬರುತ್ತವೆಂದು ಕೊರವಂಜಿ ಪತಿವ್ರತೆಯರ ಗುಣಲಕ್ಷಣಗಳನ್ನು ಧೂತಿಗೆ ಅರಹುತ್ತಾಳೆ. ಮಕ್ಕಳ ಮಹತ್ವವನ್ನು ಸಾರುತ್ತಾಳೆ. ಜ್ಞಾನದ ಬಲವನ್ನು ಕೊರವಂಜಿ ಸಮರ್ಥಿಸಿಕೊಳ್ಳುತ್ತಾಳೆ. ಜಗತ್ತಿನಲ್ಲಿ ಹಣಬಲಕ್ಕಿಂತ ಜ್ಞಾನದ ಬಲ ಹೆಚ್ಚೆಂದು ಧೂತಿಗೆ ತಿಳಿಸುತ್ತಾಳೆ.

ಮಕ್ಕಳ ಮಹತ್ವ ಸಾರುವ ಕೊರವಂಜಿ, ಕೂಸುಗಳು ಅಳುವನ್ನು ಬಲವನ್ನಾಗಿಸಿಕೊಂಡಿರುತ್ತವೆ ಎಂದು ಹೇಳುವ ಮೂಲಕ ಮಕ್ಕಳನ್ನು ಸಂತೈಸುವುದು ಸುಲಭದ ಕೆಲಸವಲ್ಲವೆಂದು ವಿಶ್ವಕ್ಕೆ ತಿಳಿಸುತ್ತಾಳೆ.

**"ಮತ್ಸ್ಯಾನಾಂ ಬಲಮುದಕಂ ಪಕ್ಷಿಣಾಂ ಚ ಬಲಂ ನಭಃ ।**
**ದುರ್ಬಲನಾಂ ಬಲಂ ರಾಜಾ ಬಾಲಾನಾಂ ರೋದನಂ ಬಲಂ"॥**

ಮೀನಿಗೆ ನೀರು, ಪಕ್ಷಿಗಳಿಗೆ ಆಕಾಶ, ದುರ್ಬಲರಿಗೆ ರಾಜನು ಬಲ ಅಥವಾ ಆಶ್ರಯವಾಗಿರುವಂತೆ ಅಳುವು ಮಕ್ಕಳಿಗೆ ದೊಡ್ಡ ಬಲವಾಗಿದೆ ಎಂದು ಕೊರವಂಜಿ ಹೇಳುತ್ತ, ಯಾರ್‍ಯಾರ ಪುಣ್ಯದಿಂದ ಎಂಥೆಂಥ ಮಕ್ಕಳು ಜನಿಸುತ್ತಾರೆಂದು ಧೂತಿಗೆ ವಿವರಿಸುತ್ತಾಳೆ.

**"ದಾನವತಾ ಬಲವತಾ ಪಿತೃಪುಣ್ಯೇನ**
**ಯಶವತಾ ಕೀರ್ತಿವತಾ ಮಾತೃಪುಣ್ಯೇನ**
**ದಾನವತಾ ದಯಾವತಾ ವಂಶಪುಣ್ಯೇನ"**

ತಂದೆಯ ಪುಣ್ಯದಿಂದ ಬಲಾಢ್ಯ ಮಗ, ತಾಯಿಯ ಪುಣ್ಯದಿಂದ ಕೀರ್ತಿವಂತ, ವಂಶಪುಣ್ಯದಿಂದ ದೈವಾನನು ಮತ್ತು ಆತ್ಮ ಪುಣ್ಯದಿಂದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಜ್ಞಾನವಂತ ಮಕ್ಕಳು ಜನಿಸುವುದೆಂದು ಕೊರವಂಜಿ ಧೂತಿಗೆ ಹೇಳುತ್ತಾಳೆ. ಪುಣ್ಯದ ಫಲವಾಗಿ ಉತ್ತಮ ಮಕ್ಕಳು ಜನಿಸುವ ಕುರಿತು ಜಗತ್ತಿಗೆ ಕೊರವಂಜಿ ಮಾಹಿತಿ ನೀಡುವುದು ಪ್ರಸ್ತುತ ಮಹತ್ವದೆನಿಸುತ್ತದೆ. ಸಮಾಜವನ್ನು ಸತ್ಯಮುಖಿಯಾಗಿಸುವ ಕೊರವಂಜಿ ವಿಚಾರಗಳು ಆಧುನಿಕ ಸಮುದಾಯಕ್ಕೆ ಮುಖ್ಯವೆನಿಸುತ್ತವೆ. ಪುಣ್ಯದ ಫಲವಾಗಿ ಉತ್ತಮ ಮಕ್ಕಳು ಜನಿಸಿದರೆ; ಪಾಪದ ಫಲವಾಗಿ ದುಷ್ಟ ಮಕ್ಕಳು ಜನಿಸಿ ಲೋಕಕ್ಕೆ ಕಂಟಕರಾಗುವ ಎಚ್ಚರಿಕೆಯನ್ನು ಕೊರವಂಜಿ ಸಮಾಜಕ್ಕೆ ನೀಡಬಯಸುತ್ತಾಳೆ. ಜಗತ್ತಿನಲ್ಲಿ ಹಣಕ್ಕಿಂತ ವಿದ್ಯೆಯೇ ಬಲು ದೊಡ್ಡದು. ವಿದ್ಯಾಬಲದ ಮುಂದೆ ಹಣಬಲ ಹುಲ್ಲಿನ ಕಡ್ಡಿಗೆ ಸಮವೆಂದು ಕೊರವಂಜಿ ಅಭಿಪ್ರಾಯಿಸುತ್ತಾಳೆ. ವಿದ್ಯೆ ಮಾನವನಿಗೆ ಅಧಿಕ ರೂಪವಾಗಿದೆ. ವಿದ್ಯೆಯನ್ನು ಯಾರು ಕಸಿಯಲಾರರು. ಯಾತ್ರೆಯಲ್ಲಿ ವಿದ್ಯೆ ಪರದೈವವಾಗಿ ಕಾಣುತ್ತದೆ. ವಿದ್ಯೆ ಇಲ್ಲದವನು ಪಶುವಿಗೆ ಸಮಾನನಾಗಿದ್ದಾನೆಂದು ಕೊರವಂಜಿ ಧೂತಿಯ ಮೂಲಕ ಸಮಾಜಕ್ಕೆ ಮೌಲ್ಯಯುತ ಸಂದೇಶ ನೀಡುತ್ತಾಳೆ.

ಕೊರವಂಜಿಯ ಸಕಲ ಜ್ಞಾನದ ಪರಿಚಯ ಮಾಡಿಕೊಂಡ ಧೂತಿ ಸತ್ಯಭಾಮೆಯ ಅರಮನೆಗೆ ಕರೆದೊಯ್ಯುವ ಪ್ರಸಂಗವನ್ನು 'ಸತ್ಯಭಾಮೆ ಪ್ರವೇಶ'ವೆಂದು ಕರೆಯಲಾಗುತ್ತದೆ. ಆದಿಶಕ್ತಿಯ ಪೂಜೆಗೈದ ಭಾಮೆಯು ಕೃಷ್ಣನ ಬರುವಿಕೆಗಾಗಿ ಕಾಯುತ್ತಿರುತ್ತಾಳೆ. ಧೂತಿ ಕೊರವಂಜಿಯನ್ನು ಮಂದಿರಕ್ಕೆ ಕರೆತರುತ್ತಾಳೆ. ನಿನಗೆ ಬೇಡಿದ್ದನ್ನು ಕೊಡಿಸುವುದಾಗಿ ಧೂತಿ ಕೊರವಂಜಿಗೆ ಹೇಳುತ್ತಾಳೆ. ಧೂತಿಯ ಭರವಸೆಯಾಧಾರಿತವಾಗಿ ಕೊರವಂಜಿ ಸತ್ಯಭಾಮೆ ಮಂದಿರಕ್ಕೆ ಆಗಮಿಸುತ್ತಾಳೆ. ವೈಯಾರದಿಂದ ಹೊರಬಂದ ಸತ್ಯಭಾಮೆ "ಏನೇ ಕೊರವಂಜಿ! ನನ್ನ ಮನಸ್ಸಿನ ಮಾತ ಹೇಳ್ತಿಯೇನ?' ಎಂದು ಸೊಕ್ಕಿನಿಂದ ಕೇಳುತ್ತಾಳೆ. ಕೊರವಂಜಿ ಮೌನಗೊಂಡಾಗ, ಕೊರವಿ ಸೊಕ್ಕಿನವಳೆಂದು ಜರಿಯುತ್ತಾಳೆ. ಸತ್ಯಭಾಮೆಗೆ ಮಾತನಾಡಿಸುವ ಪದ್ಧತಿಯೇ ತಿಳಿದಿಲ್ಲವೆಂದು ಕೊರವಂಜಿ ಹೇಳಿದ ಮಾತಿಗೆ, ಧೂತಿ ಪದ್ಧತಿಯ ವಿಧಾನಗಳನ್ನು ಕೇಳುತ್ತಾಳೆ.

ಮನುಷ್ಯ-ಮನುಷ್ಯನನ್ನು ಪ್ರೀತಿಸುವ, ಗೌರವಿಸುವ ಗುಣವನ್ನು ಕಲಿತುಕೊಳ್ಳುವ ನೀತಿಯನ್ನು ಸಾರುವ ಕೊರವಂಜಿ, ಗೌರವದ ಪ್ರತಿನಿಧಿಯಾದ ಹೆಣ್ಣು ಇನ್ನೊಂದು ಹೆಣ್ಣನ್ನು ಸತ್ಕರಿಸುವ ಬಗೆಯನ್ನು ಭಾಮೆಗೆ ಹೇಳಿಕೊಡುತ್ತಾಳೆ.

**ಬಿಡಿಮುತ್ತು ಮರದಲ್ಲಿ ತರಿಸೆ, ನೀ**
**ಪಡಸಾಲೆಯೊಳು ರಂಗಾ ಬರೆಸೆ, ಏಳು**
**ತಡವ್ಯಾಕೆ ದೀಪಗಳಿರಿಸೆ, ನೆನ**
**ಗಡಲೆ ಕಬ್ಬು-ತೆಂಗು ಸುರಿಸೆ**
**ನೀ ದೇವಿಯರ ತೃಪ್ತಿ ಬಡಿಸೆ ।**

ಪಡಸಾಲೆಯಲ್ಲಿ ರಂಗವಲ್ಲಿ ಹೊಯ್ಯಿಸಿ, ಮೊರದಲ್ಲಿ ಮುತ್ತು-ರತ್ನ ತಂದು ಅದರ ಮೇಲೆ ಹಾಸೆಯಾಕಿ ಕೈಮುಗಿದು ಕುಳಿತು ಕೇಳಿದರೆ ಮನದೊಳಗಿರುವ ಮಾತು ಹೇಳುವುದಾಗಿ, ಕೊರವಂಜಿ ಹೆಣ್ಣಿಗೆ ಶ್ರೀಮಂತಿಕೆ ಸೊಕ್ಕು ಸರಿಯಾದುದಲ್ಲವೆಂದು ತಿಳಿಸುತ್ತಾಳೆ. ಬಡ ಕೊರವಿಗೆ ಕೈ ಮುಗಿಯುವುದು ನನಗೆ ಯೋಗ್ಯವೆನಿಸುವುದಿಲ್ಲವೆಂದು ಸತ್ಯಭಾಮೆ ಸೊಕ್ಕಿನಿಂದ ಮೆರೆಯುತ್ತಾಳೆ. ತನಗೆ ಕೈ ಮುಗಿಯದಿದ್ದರೆ ಮನದ ಮಾತು ಹೇಳುವುದಿಲ್ಲವೆಂದು ಕೊರವಂಜಿ ಹಟಹಿಡಿಯುತ್ತಾಳೆ. ಸತ್ಯಭಾಮೆಯ ಶ್ರೀಮಂತಿಕೆಗಿಂತ ಕೊರವಂಜಿಯ ಜ್ಞಾನ ಇಲ್ಲಿ ಪ್ರಧಾನವಾದದ್ದೆಂದು ಕುಲಗೋಡ ತಮ್ಮಣ್ಣ ಜಗತ್ತಿಗೆ ತಿಳಿಸಿಕೊಡಲು ಪ್ರಯತ್ನಿಸುತ್ತಾನೆ. ಧೂತಿಯ ಸಲಹೆ ಮೇರೆಗೆ ಸತ್ಯಭಾಮೆ ಕೊರವಂಜಿಗೆ ಕೈ ಮುಗಿಯುತ್ತಾಳೆ. ಮುಖಕ್ಕೆ ಮುಖ ಕೊಟ್ಟು, ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ, ಸತ್ಯಭಾಮೆಯಲ್ಲಿ ಅನುರಾಗ ಉಂಟಾಗುತ್ತದೆ. ತಕ್ಷಣವೇ ಸತ್ಯಭಾಮೆಯ ಮನಸ್ಸು ತಲ್ಲಣಗೊಂಡು, "ವಿರಹ ತಾಪ ಹೆಚ್ಚಿತಮ್ಮಾ ಇವಳಲ್ಲೆ ಕೊರವಿ, ಮನ್ಮಥನ ಮಸೆವ ಶರವೆ ನಿಜವಮ್ಮಾ!" ಎಂದು ಸತ್ಯಭಾಮೆ ತನ್ನ ಮನಸ್ಸಿನಲ್ಲಿ ಉಂಟಾಗುವ ತಳಮಳಕ್ಕೆ ಕಾರಣಗಳನ್ನು ಹುಡುಕುತ್ತಾಳೆ. ಕೊರವಂಜಿಯನ್ನು ನೋಡಿದ ತಕ್ಷಣ ತನ್ನ ಮನಸ್ಸು ಏಕೆ ಸೆಳೆಯಿತೆಂದು ಪ್ರಶ್ನಿಸಿಕೊಳ್ಳುತ್ತಾಳೆ. ಪರಪುರುಷರನ್ನು ನೋಡಿದರೆ ಮನಸೆಳೆಯಬಹುದು. ಆದರೆ ಹೆಣ್ಣಾದ ಬಡ ಕೊರವಂಜಿಯನ್ನು ನೋಡಿದಾಗ ತನ್ನ ಮನಸ್ಸು ಸೆಳೆಯುತ್ತಿದೆಯಲ್ಲಾ ಎಂದು ಸತ್ಯಭಾಮೆ ಯೋಚಿಸುವ ಭಾವನಾತ್ಮಕ ಬೆಸುಗೆ ನಾಟಕಕಾರ ರೂಪಿಸಿದ್ದಾನೆ. ಒಂದು ಹೆಣ್ಣನ್ನು ನೋಡಿ ಇನ್ನೊಂದು ಹೆಣ್ಣು ಮನಸೋಲುತ್ತದೆಂದರೆ ಇದು ಜಗದ ವಿಸ್ಮಯವೆಂದು ಸತ್ಯಭಾಮೆ ಕೊರವಂಜಿಯ ಮುಖವನ್ನು ಮತ್ತೊಮ್ಮೆ ನೋಡಿ ಇವಳು ಕೊರವಂಜಿಯಲ್ಲವೆಂದು ಸಂಶಯ ವ್ಯಕ್ತಪಡಿಸುತ್ತಾಳೆ.

ಸತ್ಯಭಾಮೆಯ ಸಂಶಯಗಳನ್ನು ನಿವಾರಿಸಲು ಕೊರವಂಜಿ, ತಾನು ಐವತ್ತಾರು (ಛಪನ್ನ) ದೇಶ ಸುತ್ತಿ ಬಂದಿರುವುದಾಗಿ ಅವುಗಳ ವಿವರಣೆಯನ್ನು ನೀಡುತ್ತಾಳೆ. ವೇದಶಾಸ್ತ್ರ, ಪುರಾಣ, ಯುಗ, ಲೋಕಗಳ ಮಾಹಿತಿ ಒದಗಿಸುತ್ತಾಳೆ. ಸತ್ಯಭಾಮೆಯ ಕೈ ನೋಡಿ "ತೋರುವುದು ಕೈಯಲ್ಲಿ ಚಾರುಚಕ್ರವೆಂದು, ಭಾಮೆಯಲ್ಲಿ ಕೈಯಲ್ಲಿ ಚಾರುಚಕ್ರ ಮತ್ಸ್ಯರೇಖೆ, ಧನರೇಖೆ, ದಾಂಪತ್ಯರೇಖೆ, ಆಯುಷ್ಯರೇಖೆಗಳ ಮಹತ್ವವನ್ನು ಸಾರುವಳು ಕೊರವಂಜಿ. ಶಕುನ ಹೇಳುವುದರ ಜೊತೆಗೆ ಅಗಲಿದ ಗಂಡನನ್ನು ಒಂದುಗೂಡಿಸುವುದು, ಸವತಿಯ ಬಾಯಿ ಕಟ್ಟಿ ಹಾಕುವ ವಿದ್ಯೆ ತನಗೆ ಗೊತ್ತಿರುವುದಾಗಿ ಕೊರವಂಜಿ ತಿಳಿಸುತ್ತಾಳೆ. ಭೂಲೋಕ, ಭುವಲೋಕ, ಸ್ವರ್ಲೋಕ, ಮಹರ್ಲೋಕ, ಜಗಲೋಕ, ತಪೋಲೋಕ, ಸತ್ಯಲೋಕ, ಅತಳ, ವಿತಳ, ಸುತಳ, ತಳಾತಳ, ಮಹಾತಳ, ರಸಾತಳ ಮತ್ತು ಪಾತಾಳ ಲೋಕಗಳನ್ನು ಕೊರವಂಜಿ ಸತ್ಯಭಾಮೆಗೆ ತಿಳಿಸಿ ಇವೆಲ್ಲವನ್ನು ಸಂಚರಿಸಿ ಬಂದ ಕೊರವಂಜಿಯಿದ್ದುದಾಗಿ ಸಂಶಯಿಸಬೇಡವೆಂದು ಕೊರವಂಜಿ ಹೇಳುತ್ತಾಳೆ.

ಸತ್ಯಭಾಮೆಯಲ್ಲಿ ಮೂಡಿದ ಕೃಷ್ಣನ ಆಗಮನದ ಪ್ರಶ್ನೆಯನ್ನು ಅರಿತುಕೊಂಡ ಕೊರವಂಜಿ ಚಿಂತಿಸಬೇಡವೆಂದು ಹೇಳುತ್ತಾಳೆ. "ದುಂಡಿ ನಿನಗಂಡ ಪ್ರಚಂಡ ಉದ್ದಂಡ, ದನುಜರ ಗಂಟಲಗಾಣ, ಪಾಂಡವರ ಪಂಚಪ್ರಾಣ" ಕೃಷ್ಣ ಪರಮಾತ್ಮ ಇಂದಿನ ರಾತ್ರಿ ಗರುಡನ ಹೆಗಲೇರಿ ನಿನ್ನ ಅಂತಃಪುರಕ್ಕೆ ಬರುವನೆಂದು, ಸಮಾಧಾನವಾಗಿರೆಂದು ಸತ್ಯಭಾಮೆಗೆ ತಿಳಿಸುತ್ತಾಳೆ. ಕೊರವಂಜಿ ಮಾತು ಕೇಳಿ ಸತ್ಯಭಾಮೆ ಸಂತೋಷಭರಿತಳಾಗಿ ಊಟ ಮಾಡಲು ಹೇಳುತ್ತಾಳೆ. ಎಂಜಲು ಅಡಿಗೆ ಉಣ್ಣುವ ಕೊರವಂಜಿ ತಾನಲ್ಲವೆಂದು, ಮೀಸಲಿನ ಅಡುಗೆ ಉಣಬಡಿಸಬೇಕೆಂದು ಕೊರವಂಜಿ ಸತ್ಯಭಾಮೆಗೆ ತಿಳಿಸುತ್ತಾನೆ. ಸಕ್ಕರೆ ಇರುವೆಗೆ ಎಂಜಲು, ಹಾಲು ಕುರುವಿನ ಎಂಜಲು ಆಗಿದ್ದು ಎಲ್ಲರೂ ಊಟ ಮಾಡಿ ಉಳಿದ ತಂಗಳದಾಗಿರಬೇಕು. ದೊರೆಶ್ಯಾಣಿ ಉಣಬಡಿಸಿದರೆ ಅದು ನನಗೆ ಮೀಸಲಾಗಿರುತ್ತದೆ. ಅಂತಹ ಅಡುಗೆಯನ್ನು ಕೊರವಂಜಿ ಬಯಸುತ್ತಾಳೆ.

ಎಲ್ಲರೂ ಉಂಡು ಉಳಿದು, ತಂಗಳದಂತಿರುವ ಪರಮಾತ್ಮನ ನಾಮಸ್ಮರಣೆ ಎಂಬ ಅಡುಗೆ ನೀಡಬೇಕೆಂದು ಕೊರವಂಜಿ ಕೇಳುತ್ತಾಳೆ. ಸತ್ಯಭಾಮೆ ಶ್ರೀಮಂತಿಕೆಯ ಸೌಂದರ್ಯದ ಮದದಲ್ಲಿ ಮೆರೆಯುತ್ತ, ಪರಮಾತ್ಮನ ಭಕ್ತಿಯನ್ನು ಮರೆತವಳಾಗಿದ್ದರಿಂದ ಕೊರವಂಜಿ ಸತ್ಯಭಾಮೆಯಲ್ಲಿ ಭಕ್ತಿಯ ಮಹಿಮೆಯನ್ನು, ನಾಮಸ್ಮರಣೆಯ ಶಕ್ತಿಯನ್ನು ಜಾಗೃತಗೊಳಿಸುತ್ತಾಳೆ. ಸತ್ಯಭಾಮೆಯಿಂದ ಪರಮಾತ್ಮನ ನಾಮಸ್ಮರಣೆ ಮಾಡಿಸಿ, ಕೊರವಂಜಿ ತನ್ನ ಪಾದ ತೊಳೆಯಲು ಸತ್ಯಭಾಮೆಗೆ ಹೇಳುತ್ತಾಳೆ. ಪಾದ ತೊಳೆಯುವಾಗ ಪಾದದಲ್ಲಿ ಪದ್ಮ ಕಂಡು ಭಾಮೆ ಆಶ್ಚರ್ಯ ಪಡುತ್ತಾಳೆ. ಪದ್ಮವಿರುವ ಪಾದ ತನ್ನ ಪತಿಯದೆಂದು ನೆನಪಿಸಿಕೊಳ್ಳುತ್ತಾಳೆ. ಕೊರವಂಜಿಯನ್ನು ಮತ್ತಷ್ಟು ಸಂಶಯಿಸಿದಾಗ, ಪಾದದಲ್ಲಿ ಪದ್ಮವಿರುವವರ ಮಾಹಿತಿಯನ್ನು ಕೊರವಂಜಿ ಒದಗಿಸುತ್ತಾಳೆ.

– 27 ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಬದಲಾದ ಶಿಕ್ಷಣ ವ್ಯವಸ್ಥೆಯ ಚಿಂತನೆಯಲ್ಲಿ "ತೆರೆದ ಪುಸ್ತಕ ಪರೀಕ್ಷಾ ಪದ್ಧತಿ"ಯ ಸಾಧಕ-ಬಾಧಕಗಳು

**ಡಾ. ಬಿ. ಜಿ. ಧಾರವಾಡ,** ಸಹಾಯಕ ಪ್ರಾಧ್ಯಾಪಕರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ.

ಓಪನ್ ಬುಕ್ ಪರೀಕ್ಷಾ ವ್ಯವಸ್ಥೆ ಬಗ್ಗೆ ಇತ್ತೀಚಿನ ಚಿಂತನೆ, ಬೆಳವಣಿಗೆಗಳು ಗಂಭೀರ ಚರ್ಚೆಗೆ ಗ್ರಾಸವಾಗಿದೆ. ಪರೀಕ್ಷಾ ವ್ಯವಸ್ಥೆಯನ್ನು ಬದಲಿಸಲು ಹೊರಟಿರುವುದೇಕೆ ಎಂಬುದು ಸ್ಪಷ್ಟವಾಗುತ್ತಿಲ್ಲ.

ಪರೀಕ್ಷಾ ವ್ಯವಸ್ಥೆಯಲ್ಲಿ ಅತಿಯಾದ ಭ್ರಷ್ಟತೆ ಇದೆಯೆಂದೊ, ಅಂಕಗಳಿಕೆಯ ಸ್ಪರ್ಧೆಯು ವಿದ್ಯಾರ್ಥಿಗಳಲ್ಲಿ ಮಾನಸಿಕ ಹಿಂಸೆ ಉಂಟು ಮಾಡುತ್ತದೆ ಎಂದೊ, ಕಲಿಕೆಯಿಂದ ಆಗಬೇಕಾದ ಗ್ರಹಿಕೆ ಹಾಗೂ ಆಲೋಚನಾ ಶಕ್ತಿಯ ವೃದ್ಧಿಯನ್ನು ಪರೀಕ್ಷಾ ಭಯವು ಕಸಿಯುತ್ತಿದೆ ಎಂದೊ, ಅಂಕ ಗಳಿಕೆಯ ಸ್ಪರ್ಧೆ ವಿದ್ಯಾರ್ಥಿಗಳಲ್ಲಿ ತಾರತಮ್ಯ ಮನೋಭಾವ ಮೂಡಿಸುತ್ತಿದೆ ಎಂದೊ, ಹೀಗೆಲ್ಲಾ ಪರೀಕ್ಷಾ ವ್ಯವಸ್ಥೆಯ ಬದಲಾವಣೆಯ ಹಿಂದಿನ ಆಲೋಚನೆ ಯಾವುದಾದರೂ ಇರಬಹುದು.

ಕೆಲವು ಖಾಸಗಿ ಶಾಲೆಗಳವರು, ತಮ್ಮ ತಮ್ಮ ಶಾಲೆಯಲ್ಲಿ ಸರ್ಕಾರಿ ಶಾಲೆಗಿಂತ **"ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತೇವೆ"** ಎಂದು ಹೇಳಿಕೊಳ್ಳುವುದರ ಹಿಂದೆ ಶೈಕ್ಷಣಿಕ ರಾಜಕೀಯವಿದೆ. ಪರೀಕ್ಷಾ ನಿಯಮಗಳನ್ನು ಉಲ್ಲಂಘನೆ, ಮಾಡಿ ಕೊಠಡಿಯಲ್ಲಿ ನೋಟ್ಸ್ ಕೊಟ್ಟೋ, ಉತ್ತರವನ್ನು ಹೇಳಿ ಬರೆಯಿಸುವ ಮೂಲಕವೋ ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಿಂತ ಮುಂದಿರುವುದನ್ನು ಅಂಕಿ-ಅಂಶಗಳ ಸಮೇತ ತೋರಿಸಿ, ತಮ್ಮ ಬೆನ್ನನ್ನು ತಾವೇ, ತಟ್ಟಿಕೊಳ್ಳುತ್ತಾ ಹಿಡಿಮಣ್ಣನ್ನು ಎಲ್ಲರಿಗೂ ಎರಚಿ ಜಾಣ್ಮೆ ಮೆರೆಯುತ್ತಾರೆ. ಈ ಶೇಕಡಾವಾರು ಫಲಿತಾಂಶವೇ ಪೋಷಕರಿಗೆ ಆಕರ್ಷಕವಾಗಿ ಕಾಣಿಸುತ್ತಿದೆ.

ಹೀಗೆ **"ಖಾಸಗಿ ಶಾಲಾ ಮೇನಿಯಾ"** ಸರ್ಕಾರಿ ಶಾಲೆಗಳ ಮೇಲೆ ಒತ್ತಡ ಉಂಟು ಮಾಡುತ್ತದೆ. ಕೆಲ ಸರ್ಕಾರಿ ಶಾಲೆಗಳಲ್ಲೂ ಪರಿಕ್ಷಾ ಕೊಠಡಿಯಲ್ಲಿ ಉತ್ತರ ಹೇಳಿಕೊಟ್ಟು ಅಥವಾ ನೋಟ್ಸ್ ಕೊಟ್ಟು ಉತ್ತರ ಬರೆಯಿಸಲಾಗುತ್ತದೆ. ಫಲಿತಾಂಶ ಕಡಿಮೆಯಾದರೆ ಇಲಾಖೆಯ ಮೇಲಾಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎಂಬ ಭಯ ಇದಕ್ಕೆ ಕಾರಣ. ಹೀಗೆ ಒಟ್ಟಾರೆ ಪರೀಕ್ಷಾ ವ್ಯವಸ್ಥೆ ಭ್ರಷ್ಟಗೊಂಡಿರುವ ಸಂದರ್ಭದಲ್ಲಿ ಇಂತಹ ಚಿಂತನೆ ಹಾಗೂ ಇತ್ತೀಚಿನ ಬೆಳವಣಿಗೆ ಬಹಳ ಮಹತ್ವ ಪಡೆದಿದೆ.

ಉತ್ತಮ ಫಲಿತಾಂಶವೇ ನಿರೀಕ್ಷೆಯು ಬೀಳಿಸುವ ಶಿಕ್ಷಣ ವ್ಯವಸ್ಥೆಯಲ್ಲಿ ಮನೆ ಪಾಠ ಅನಿವಾರ್ಯವೆಂದು ಒಪ್ಪಿಕೊಳ್ಳುವ ಸ್ಥಿತಿಯು ವಿದ್ಯಾರ್ಥಿಗಳ ಗಾಯದ ಮೇಲೆ ಬರೆ ಎಳೆದಂತೆ. ಇದು ಮಕ್ಕಳ ಮಾನಸಿಕ ಆರೋಗ್ಯವನ್ನು ಹಾಳುಮಾಡುತ್ತದೆ. ಇದರ ಪರಿಣಾಮ ವಿದ್ಯಾರ್ಥಿಗಳಲ್ಲಿ ಸಹಜವಾಗಿ ಇರಬೇಕಾದ **"ಓದಿನ ಪ್ರೀತಿಯನ್ನು ದ್ವೇಷ ಸಾಧನೆಗೆ ಓದು"** ಎಂಬುದಾಗಿ ಬದಲಾಯಿಸುತ್ತದೆ ಇಂಥ ಶಿಕ್ಷಣವು ಪೋಷಕರಿಗೂ ದುಬಾರಿಯಾಗಿ, ಶಾಲೆಗಳು ಬಂಡವಾಳ ಹೂಡಿಕೆಯ ಜಾಗೆಗಳಾಗುತ್ತಿವೆ.

ಇಂದಿನ ಪರೀಕ್ಷಾ ವ್ಯವಸ್ಥೆಯು ವಿದ್ಯಾರ್ಥಿಗಳ ನೆನಪಿನ ಶಕ್ತಿಯನ್ನು ಅವಲಂಬಿಸಿದ್ದಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಕಂಠಪಾಠ ಮಾಡುತ್ತಾರೆ. ಈ ಕಂಠಪಾಠವೇ ಗ್ರಹಿಕೆ, ಆಲೋಚನೆಗಳ ಜಾಗವನ್ನು ಆಕ್ರಮಿಸಿಕೊಂಡಿದೆ. ಇದರಿಂದ ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಗೂ ಅಡ್ಡಿಯಾಗಿದೆ. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಆಲೋಚನಾ ಹೀನರಾಗಿ ಉತ್ತಮ ಅಂಕ ಪಡೆಯುವ ಸಾಧನೆ ಮಾಡಬಹುದು. ಇಂಥ ಪದ್ಧತಿಯಿಂದ ಸಕಾರಾತ್ಮಕ ಸಾಮಾಜಿಕ ಬದಲಾವಣೆಗಳನ್ನು ಬಯಸುವುದು ಭ್ರಮೆಯಲ್ಲವೇ ?

ಇಂಥ ಶೈಕ್ಷಣಿಕ ವ್ಯವಸ್ಥೆಯ ಮಧ್ಯದಲ್ಲೇ ಪರೀಕ್ಷೆಯ ಬಿಗುವಿನ ವಾತಾವರಣವನ್ನು ಸಡಿಲಗೊಳಿಸುವ ಚಿಂತನೆ ಇಂದು ವಿದ್ಯಾರ್ಥಿಗಳಿಗೆ ಕೊಂಚ ಸಮಾಧಾನ ತರಬಹುದು. ಇದರ ಜೊತೆಗೆ ಪ್ರಾಥಮಿಕ ಹಂತದಲ್ಲಾದರೂ ಕಲಿಕಾ ಸ್ವರೂಪವನ್ನೂ ಬದಲಾಯಿಸಿದರೆ ಒಳಿತು ಎನಿಸುತ್ತದೆ.

ಆದರೆ ಓಪನ್ ಪರೀಕ್ಷಾ ವ್ಯವಸ್ಥೆಯ ಬಗ್ಗೆ ಈ ರೀತಿಯಾಗಿ ಏನೆಲ್ಲಾ ಚರ್ಚೆಗಳು ನಡೆಯುವುದರ ಮಧ್ಯೆ ಈ ವ್ಯವಸ್ಥೆಯಿಂದ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗುತ್ತದೆ. ಸ್ಮರಣಶಕ್ತಿ, ಗ್ರಹಣ-ಶಕ್ತಿ ಕುಂಠಿತವಾಗುತ್ತದೆ. ತರಗತಿಯಲ್ಲಿ ಪಾಠ ಮಾಡುವಾಗ ವಿದ್ಯಾರ್ಥಿಗಳು, ಏಕಾಗ್ರತೆಯಿಂದಿರುವ ಬದಲು ಹೇಗೊ ಪುಸ್ತಕ ನೋಡಿ ಬರೆದರಾಯಿತು ಎಂಬ ಧೋರಣೆ ತಳೆದು, ಓದುವ ಅಭ್ಯಾಸ, ಹವ್ಯಾಸದಿಂದ ದೂರವಾಗುತ್ತಾರೆ ಎಂಬುದು ನನ್ನ ಅಭಿಪ್ರಾಯ.

ಹಲವು ದಶಕಗಳಿಂದ ಬಂದಿರುವ ವ್ಯವಸ್ಥೆಯನ್ನು ಏಕಾಏಕಿ ಬದಲಿಸುವುದು ಸಮಂಜಸವಲ್ಲ, ಖಾಸಗಿ ಶಾಲೆಯೇ ಆಗಿರಲಿ ನರ್ಸರಿಯಿಂದ ಪ್ರೌಢಶಾಲಾ ಹಂತದವರೆಗೆ ಅಕ್ಷರಜ್ಞಾನವಿಲ್ಲದಿರುವ ಹಲವು ವಿದ್ಯಾರ್ಥಿಗಳಿದ್ದಾರೆ. ಇದಕ್ಕೆ ಸರ್ಕಾರದ ನಿಯಮಗಳೇ ಕಾರಣ. ಮಕ್ಕಳನ್ನು ಅನುತ್ತೀರ್ಣಗೊಳಿಸಬಾರದು. ಅವರನ್ನು ಗದರಿಸಬಾರದು, ಬೆದರಿಸಬಾರದು ಮಕ್ಕಳು ಏನೇ ಮಾಡಿದರೂ ಓದಲು, ಬರೆಯಲು, ಹೋಂ ವರ್ಕ್ ಮಾಡಲುಬಾರದಿದ್ದರೂ ಯಾವುದೇ ದಂಡನೆ ಇರಬಾರದು, ಎಂಬುದಾಗಿ ಹೀಗೆಲ್ಲಾ ಮಾಡಿದರೆ ಮಕ್ಕಳಲ್ಲಿ ನಾವು 'ಹೇಗಿದ್ದರೂ ಸರಿ' ಎಂಬ ಸ್ವೇಚ್ಛಾ ಪ್ರವೃತ್ತಿ ಬರುತ್ತದೆ.

ಆದ್ದರಿಂದ ತರಗತಿಗಳಲ್ಲಿ ಮಾಡಿದ ಪಾಠವನ್ನು ಓದಿ, ಅರ್ಥೈಸಿ, ಚಿಂತನ-ಮನನ ಮಾಡಿ, ಸ್ವಂತವಾಗಿ ಬರೆಯುವ ರೀತಿಯನ್ನು ಶಿಕ್ಷಕರು ಬೆಳೆಸಬೇಕು. ಪ್ರತೀ ಪಾಠವನ್ನು ಬೋಧಿಸಿದ ನಂತರ ಶಿಕ್ಷಕರೇ ಆ ಪಾಠದಿಂದ ಕೆಲವು ಪ್ರಶ್ನೆಗಳನ್ನು ಕೇಳುವಂತೆ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮನೋಭಾವವನ್ನು ರೂಢಿಸಿದಂತೆ ಆಗುತ್ತದೆ. ಅವರಲ್ಲಿ ಆಲೋಚನಾ ಶಕ್ತಿಯನ್ನು ಉದ್ದೇಶಿಸಿದಂತಾಗುತ್ತದೆ. ಇದು ಹೆಚ್ಚು ಸೃಜನಾತ್ಮಕತೆ ಅಲ್ಲವೇ ? ಇದು ಸಮಾಜದಲ್ಲಿ ಸಕಾರಾತ್ಮಕ ಪರಿಣಾಮವನ್ನು ಬೀರಬಹುದು. ಆದರೆ, ಪುಸ್ತಕ ನೋಡಿ ಬರೆಯುವ ವ್ಯವಸ್ಥೆ ಮಕ್ಕಳ ಕಲಿಕಾಮಟ್ಟವನ್ನು ಕುಗ್ಗಿಸುತ್ತದೆ. ಟಿ.ವಿ, ಕಂಪ್ಯೂಟರ್, ಸ್ಮಾರ್ಟ್ ಫೋನ್‌ಗಳು ಇಂದು ಮಕ್ಕಳನ್ನು ಓದುವ ಅಭ್ಯಾಸದಿಂದ ದೂರ ಮಾಡುತ್ತಿವೆ. ಆದರೂ ಇವುಗಳಿಂದ ಸದ್ವಿನಿಯೋಗವಾಗಬಲ್ಲ ನಿರ್ದಿಷ್ಟ ಬಳಕೆಯಿಂದ ಸ್ಪಷ್ಟರೂಪದ ಶಿಕ್ಷಣವನ್ನು ಧನಾತ್ಮಕ ವ್ಯವಸ್ಥೆಯಿಂದ ಹೊಸ ಪದ್ದತಿಗೆ ಮಕ್ಕಳನ್ನು ಸ್ಪಂದಿಸುವಂತೆ ರೂಪಿಸಬಹುದಲ್ಲವೇ ?

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಧಾರವಾಡ ಜಿಲ್ಲೆಯ ಜನಾಂಗವಾಚಿ ಸ್ಥಳನಾಮಗಳು

✍ **ರಾಜೇಂದ್ರ. ಹ. ಹೊನ್ನಾಪೂರ,** ಜಾನಪದ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಧಾರವಾಡ ಜಿಲ್ಲೆಯ ಸ್ಥಳನಾಮಗಳ ಅಧ್ಯಯನದಿಂದ ಯಾವ ಯಾವ ಜನಾಂಗಗಳು ಈ ಪ್ರದೇಶದಲ್ಲಿ ನೆಲೆಸಿವೆ ಎಂಬುದನ್ನು ತಿಳಿಯಬಹುದು. ಹೆಚ್ಚಿದ ಜನಸಂಖ್ಯೆಯಿಂದಾಗಿ ಆಹಾರ, ವಸತಿ, ಭೂಮಿ ಉಳುಮೆಗಾಗಿ ಪಶುಸಂಗೋಪನೆ ಮಾಡಲು ಬೇರೆ ಬೇರೆ ಪ್ರದೇಶಗಳಿಗೆ ಜನಾಂಗಗಳು ಚದುರಿ ಹೋಗಿದ್ದನ್ನು ಕರ್ನಾಟಕದಾದ್ಯಂತ ಕಾಣಬಹುದಾಗಿದೆ. ಜನಾಂಗಗಳು ಅನುಕೂಲಕರ ಪ್ರದೇಶ ಹುಡುಕಿಕೊಂಡು ಹೋಗಿದ್ದರ ಪ್ರಯುಕ್ತ ಕರ್ನಾಟಕದಲ್ಲಿ ವಿವಿಧ ಜನಾಂಗಗಳ ಹರಡುವಿಕೆಗೆ ಕಾರಣವಾಗಿರಲಿಕ್ಕೆ ಸಾಧ್ಯ. ಪ್ರಾಚೀನ ಕಾಲದಲ್ಲಿ ತಮ್ಮ ತಮ್ಮ ಜನಾಂಗಗಳಿಗೆ ಮಾತ್ರ ಸೀಮಿತವಾದ ಪ್ರದೇಶದಲ್ಲಿ ನೆಲೆಸುತ್ತಿದ್ದಿರಬೇಕು. ನಂತರದಲ್ಲಿ ಬೇರೆ ಬೇರೆ ಜನಾಂಗಗಳು ಸಹಿತ ಆಯಾ ಪ್ರದೇಶದ ಜನಾಂಗಗಳ ಜೊತೆ ಸಾಮರಸ್ಯದಿಂದ ಬದುಕಿದ ಸಂದರ್ಭದಲ್ಲಿ ಎಲ್ಲಾ ಜನಾಂಗಗಳು ಕೂಡಿಕೊಂಡು ಬಾಳುತ್ತಿರುವುದನ್ನು ಗ್ರಾಮನಾಮಗಳ ಅಧ್ಯಯನದಿಂದ ತಿಳಿಯಬಹುದು. "ಜನಾಂಗವಾಚಿ ಸ್ಥಳನಾಮಗಳನ್ನು ಗುರುತಿಸಲು ಗ್ರಾಮನಾಮಗಳ ನಿರ್ದಿಷ್ಟ (ಪೂರ್ವಪದ) ದ ಅಂತ್ಯದಲ್ಲಿ ರ ಇದ್ದರೆ ಅದು ಜನಂಗವಾಚಿ ಗ್ರಾಮವಾಗಿರುತ್ತದೆ."[1]

## ಅಗಸನಹಳ್ಳಿ (ಧಾ)

ಈ ಗ್ರಾಮ ಅಗಸ ಸಮುದಾಯದ ವೃತ್ತಿಯ ನೆಲೆಯಾಗಿರಬೇಕು. ಅಗಸರು ಈ ಊರಿನಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದರಿಂದ ಅಗಸನಹಳ್ಳಿ ಎಂದು ಹೆಸರು ಬಂದಿರಬಹುದು.

ಅಗಸ+ನ+ಹಳ್ಳಿ=ಅಗಸನಹಳ್ಳಿ ಎಂದಾಗಬಹುದು. ಈ ನಿಷ್ಪತ್ತಿಯಲ್ಲಿ ನ ಕಾರ ಬಂದಿದ್ದರಿಂದ ಇದು ವ್ಯಕ್ತಿವಾಚಿಯಾಗಿ ಕಂಡರೂ ಸಹಿತ ನ ಕಾರವನ್ನು ಉಚ್ಚಾರಣೆಯಲ್ಲಿ ಸುಲಭವಾಗಿಸಲು ತೋರ್ಪಡಿಸಿದಂತಿದೆ.

## ಅದರಗುಂಚಿ

"ಕ್ರಿ. ಶ. 1072 ರ ನೂಲ್ವಿ ಗ್ರಾಮದಲ್ಲಿ ದೊರೆತ ಶಾಸನದಲ್ಲಿ "ಅದರಗುಂಚಿ" ಎಂದು ಉಲ್ಲೇಖಗೊಂಡಿದೆ."[2] ಅದರ ಎಂಬ ಜನಾಂಗದವರು ನೆಲೆಸಿದ್ದ ಪ್ರದೇಶದಿಂದ ಅದರಗುಂಚಿ ಎಂದು ಹೆಸರು ಬಂದಿರಬಹುದು. ಕ್ರಿ. ಶ. 1072 ರ ಹೊತ್ತಿಗೆ ಈ ಗ್ರಾಮ ಉದಯವಾಗಿತ್ತು ಎಂಬುದು ತಿಳಿದುಬರುತ್ತದೆ.

## ಕವಲಗೇರಿ (ಧಾ)

ಕೌಲ ಎಂಬ ಜನಾಂಗದವರು ನೆಲೆಸಿದ ಪ್ರದೇಶವಾಗಿದ್ದರಿಂದ ಕವಲಗೇರಿ ಎಂದು ಹೆಸರು ಬಂದಿರಲಿಕ್ಕೆ ಸಾಧ್ಯ.

ಕೌಲ+ಕೇರಿ=ಕೌಲಗೇರಿ>ಕವಲಗೇರಿ ಎಂದಾಗಬಹುದು.

## ಕುರುಬಗಟ್ಟಿ (ಧಾ)

ಕುರುಬ ಜನಾಂಗದವರ ನೆಲೆನಿಂತ ಪ್ರದೇಶವಾಗಿದ್ದರಿಂದ ಕುರುಬಗಟ್ಟಿ ಎಂದು ಹೆಸರು ಬಂದಿರಬಹುದು.

ಕುರುಬ+ಕಟ್ಟಿ=ಕುರುಬಗಟ್ಟಿ

## ಕುರಡಿಕೇರಿ (ಹು)

ಈ ಗ್ರಾಮದಲ್ಲಿ ದೊರೆತ "ಕ್ರಿ. ಶ. 1108 ರ ಶಾಸನದಲ್ಲಿ ಹಂಚವೊಳಲ ಮತ್ತು ಕುಡಿನಾಥ ಎಂಬ ಶಬ್ದಗಳು ಬಳಕೆಗೊಂಡಿವೆ."[3] ಕುರುಡಿಕೇರಿಯ ಮೂಲ ಹೆಸರು ಹಂಚವೊಳಲು ಎಂದಿದೆ. ಹಂಚ ಎಂಬ ವ್ಯಕ್ತಿಯಿಂದ ಮತ್ತು ವೋಳಲ್ (ಹೊಳಲ) ಎಂದರೆ ಪಟ್ಟಣ ಎಂದರ್ಥವಿದ್ದು, ಇದರಿಂದಾಗಿ ಈ ಗ್ರಾಮಕ್ಕೆ ಹಂಚವೋಳಲ್ ಎಂದು ಹೆಸರು ಬಂದಿರಬಹುದು. ಹಂಚ+ವೋಳಲ್=ಹಂಚವೋಳಲ್ ಎಂದಾಗಬಹುದು. ಇದೇ ಶಾಸನದಲ್ಲಿ ಕುಡಿನಾಥ ಎಂಬ ದೇವರ ಹೆಸರು ಕಂಡು ಬರುವುದರಿಂದ ಕುಡಿ ಎಂಬ ಜನಾಂಗದವರು ಅಲ್ಲಿ ನೆಲೆಸಿದ್ದರೆಂಬುದನ್ನು ತಿಳಿಯಬಹುದು. ಮತ್ತು "ಕ್ರಿ. ಶ. 1126 ರ ಕುರಡಿಕೇರಿ ಶಾಸನದಲ್ಲಿ ಕುಡಿಯೇಶ್ವರ ಎಂಬ ದೇವರ ಹೆಸರು ಉಲ್ಲೇಖಗೊಂಡಿದೆ."[4] ಇದರಿಂದಾಗಿ ಕುಡಿ ಎಂಬ ಜನಾಂಗ ಇಲ್ಲಿ ಇದ್ದಿತೆಂಬುದನ್ನು ತಿಳಿಯಬಹುದು. ಈ ಜನಾಂಗದವರಿಂದ ಈ ಗ್ರಾಮಕ್ಕೆ ಕುರಡಿಕೇರಿ ಹೆಸರು ಬಂದಿರಬಹುದು.

ಹಂಚವೋಳಲ್ ಕಾಲಾನಂತರದಲ್ಲಿ ಕುಡಿ ಜನಾಂಗದವರು ಹೆಚ್ಚಿನ ಪ್ರಮಾಣದಲ್ಲಿದ್ದಿರಬೇಕು. ಆದ್ದರಿಂದ ಕುರಡಿಕೇರಿ ಎಂದು ಹೆಸರು ಮರುನಾಮಕರಣವಾಗಿದೆ. ಕುಡಿಕಾರ ಜನಾಂಗದವರು ಈಗಲೂ ಕಂಡುಬರುತ್ತಾರೆ.

ಕುಡಿ+ ಕೇರಿ=ಕುಡಿಕೇರಿ>ಕುರಡಿಕೇರಿ ಎಂದಾಗಬಹುದು. ಭಾಷಾ ಉಚ್ಚಾರಣೆಯಲ್ಲಿ ರ ಕಾರ ಆಗಮವಾಗಿದ್ದನ್ನು ಕಾಣಬಹುದು.

## ಕಂಬಾರಗಣವಿ (ಧಾ)

ಕಂಬಾರ ಜನಾಂಗ ನೆಲೆಸಿದ ಪ್ರದೇಶ ಮತ್ತು ಕಣವೆ ಎಂದರೆ ಎರಡು ಬೆಟ್ಟಗಳ ನಡುವಿನ ಇಕ್ಕಟ್ಟಾದ ಪ್ರದೇಶ ಅಂದರ್ಥ. ಈ ಬೆಟ್ಟಗಳ ಮಧ್ಯದಲ್ಲಿ ಈ ಊರು ನೆಲೆಗೊಂಡಿದ್ದರಿಂದ ಕಂಬಾರಗಣವಿ ಎಂದು ಹೆಸರು ಬಂದಿರಬಹುದು.

ಕಂಬಾರ+ಕಣಿವೆ=ಕಂಬಾರಕಣಿವೆ>ಕಂಬಾರಗಣಿವೆ>ಕಂಬಾರಗಣವಿ ಎಂದಾಗಬಹುದು. ಕಂಬಾರರು ಕಬ್ಬಿಣದ ಕೆಲಸ ಮಾಡುವ ವೃತ್ತಿಯನ್ನು ಮಾಡುವವರ ನೆಲೆ ಎಂದರ್ಥ. ಕಂಬಾರಗಣವಿಯಿಂದ ಕಿತ್ತೂರಿಗೆ ಸುಮಾರು 12 ಕಿ. ಮೀ. ದೂರವಿದ್ದು ಕಿತ್ತೂರು ಚನ್ನಮ್ಮನ ಸೈನಿಕರು ಕಂಬಾರಗಣವಿಗೆ ಬಂದು ಕಬ್ಬಿಣ ಸಾಮಾನುಗಳನ್ನು ಇಲ್ಲಿಂದಲೆ ಕೊಂಡೊಯ್ಯುತ್ತಿದ್ದರು ಮತ್ತು ವಿಧವಿಧ ಸಲಕರಣೆಗಳನ್ನು ನಯಗೊಳಿಸಲು ಈ ಗ್ರಾಮಕ್ಕೆ ಬರುತ್ತಿದ್ದರು ಎಂದು ಗ್ರಾಮಸ್ಥರು ಹೇಳುತ್ತಾರೆ.

## ಕುಂಬಾರಗೊಪ್ಪ (ಧಾ)

ಕುಂಬಾರ ಜನಾಂಗದವರ ನೆಲೆಸಿದ ಅಥವಾ ಈ ಊರಿನಲ್ಲಿ ಕುಂಬಾರರು ಹೇರಳವಾಗಿ ಕಂಡುಬರುವ ಊರಾಗಿದ್ದರಿಂದ ಕುಂಬಾರಗೊಪ್ಪ ಎಂಬ ಹೆಸರು ಬಂದಿರಲಿಕ್ಕೆ ಸಾಧ್ಯ.

ಕುಂಬಾರ+ಕೊಪ್ಪ=ಕುಂಬಾರಕೊಪ್ಪ>ಕುಂಬಾರಗೊಪ್ಪ>ಎಂದು ಇದರ ನಿಷ್ಪತ್ತಿಯಾಗಬಹುದು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಕೊಂಗವಾಡ(ನ)

ಕೊಂಗ ಎಂಬ ಜನಾಂಗದವರ ನೆಲೆಯಾಗಿದ್ದರಿಂದ ಈ ಗ್ರಾಮಕ್ಕೆ ಕೊಂಗವಾಡ ಎಂದು ಹೆಸರು ಬಂದಿರಲಿಕ್ಕೆ ಸಾಧ್ಯ.

ಕೊಂಗ+ವಾಡ=ಕೊಂಗವಾಡ

## ಕೊಕ್ಕರೆವಾಡ (ಧಾ)

ಮರಾಠ ಸಮುದಾಯದಲ್ಲಿ ಕೊಕ್ಕರೆ ಎಂಬ ಜನಾಂಗವಿದ್ದು ಇವರು ನೆಲೆಸಿದ ಪ್ರದೇಶಕ್ಕೆ ಕೊಕ್ಕರೆವಾಡ ಎಂದು ಹೆಸರು ಬಂದಿದೆ.

ಕೊಕ್ಕರೆ+ವಾಡ+ಕೊಕ್ಕರೆವಾಡ

## ಕೋಳಿವಾಡ (ಹು)

"ಕ್ರಿ. ಶ. 11ನೇ ಶತಮಾನದ ಶಾಸನದಲ್ಲಿ ಕೋಳಿವಾಡ ಎಂದೇ ದಾಖಲಾಗಿದೆ."[5] ಕೋಳಿ ಎಂಬ ಜನಾಂಗದವರಿಂದ ಈ ಗ್ರಾಮಕ್ಕೆ ಕೋಳಿವಾಡ ಎಂದು ಹೆಸರು ಬಂದಿರಲಿಕ್ಕೆ ಸಾಧ್ಯ.

## ನಾಗರಹಳ್ಳಿ(ನ)

ನಾಗ ಜನಾಂಗದವರ ನೆಲೆಸಿದ ಪ್ರದೇಶವಾಗಿದ್ದರಿಂದ ನಾಗರಹಳ್ಳಿ ಎಂದು ಹೆಸರು ಬಂದಿರಬೇಕು.

## ನಾಯ್ಕನೂರ(ನ)

ನಾಯಕ (ವಾಲ್ಮೀಕಿ) ಎಂಬ ಜನಾಂಗದವರು ನೆಲೆಸಿದ ಗ್ರಾಮವಾಗಿದ್ದರ ಪ್ರಯುಕ್ತ ಈ ಊರಿಗೆ ನಾಯ್ಕನೂರು ಎಂದು ಹೆಸರು ಬಂದಿರಬಹುದು.

ನಾಯಕ+ನ+ಊರು=ನಾಯಕನೂರು>ನಾಯ್ಕನೂರು ಎಂದು ಇದರ ನಿಷ್ಪತ್ತಿ ಗುರುತಿಸಬಹುದು.

## ಬೋಗೂರು (ಧಾ)

ಜೈನರಲ್ಲಿ ಒಂದು ಪಂಗಡವಾದ ಬೋಗರು ಎಂಬ ಸಮುದಾಯ ದವರ ನೆಲೆಯಿಂದ ಈ ಗ್ರಾಮಕ್ಕೆ ಬೋಗೂರು ಎಂದು ಹೆಸರು ಬಂದಿರಬಹುದು ಅಥವಾ ಬೋಗಾರ ಎಂದರೆ ಲೋಹದ ಕೆಲಸ ಮಾಡುವವರು ಎಂದರ್ಥವಿದ್ದು. ಈ ವೃತ್ತಿಯವರಿಂದಾಗಿ ಬೋಗೂರು ಎಂದು ಹೆಸರು ಬಂದಿರಬಹುದು.

## ಮಡಕಿಕೊಪ್ಪ(ಧಾ)

ಮಡಕೆ ಎಂದರೆ ಮಣ್ಣಿನ ಗಡಿಗೆ, ಮಣ್ಣಿನ ಪಾತ್ರ ಎಂದರ್ಥವಿದ್ದು, ಕುಂಬಾರ ಜನಾಂಗದವರು ಈ ಗ್ರಾಮದಲ್ಲಿ ಮಡಕೆ ತಯಾರಿಸುತ್ತಿದ್ದಿರಬೇಕು. ಈ ಜನಾಂಗದಿಂದ ಮಡಕೆಕೊಪ್ಪ ಎಂದು ಹೆಸರು ಬಂದಿರಬಹುದು.

ಮಡಕೆ+ಕೊಪ್ಪ=ಮಡಕೆಕೊಪ್ಪ>ಮಡಕಿಕೊಪ್ಪ ಎಂದು ಇದರ ನಿಷ್ಪತ್ತಿ ಗುರುತಿಸಬಹುದು.

## ವಡ್ಡರ ಕಾಲನಿ

ವಡ್ಡರ ಜನಾಂಗದವರು ನೆಲೆಸಿರುವ ಪ್ರದೇಶದಿಂದ ಈ ಗ್ರಾಮಕ್ಕೆ ವಡ್ಡರಕಾಲನಿ ಎಂದು ಹೆಸರು ಬಂದಿದೆ. ಈ ಗ್ರಾಮದಲ್ಲಿ ವಡ್ಡರ ಜನಾಂಗಕ್ಕೆ ಸಂಬಂಧಿಸಿದಂತೆ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ.

## ಮಂಟೂರು (ಹು)

"ಕ್ರಿ. ಶ. 1076ರ ಶಾಸನದಲ್ಲಿ ಮಂಟೂರು ಎಂದೇ ದಾಖಲಾಗಿದೆ."[6] ಮಂಟ ಎಂಬ ಜನಾಂಗದಿಂದ ಈ ಗ್ರಾಮಕ್ಕೆ ಮಂಟೂರು ಎಂದು ಹೆಸರು ಪ್ರಾಪ್ತವಾಗಿರಬೇಕು.

ಮಂಟ+ಊರು=ಮಂಟೂರು.

## ಉಪಸಂಹಾರ

ಈ ರೀತಿಯಾಗಿ ಧಾರವಾಡ ಪ್ರದೇಶದಲ್ಲಿ ಯಾವ ಜನಾಂಗಗಳು ನೆಲೆಸಿವೆಯೋ ಆ ಜನಾಂಗದ ಆಧಾರದ ಮೇಲೆ ಸ್ಥಳನಾಮಗಳಿಗೆ ನಾಮಕರಣ ಪ್ರಕ್ರಿಯೆ ನಡೆದಿರಲು ಸಾಧ್ಯ. ಜನಾಂಗವಾಚಿ ಗ್ರಾಮಗಳ ಅಧ್ಯಯನದಿಂದ ವೃತ್ತಿಯನ್ನು ಅನುಸರಿಸಿ ಆಯಾ ಗ್ರಾಮಗಳಿಗೆ ನಾಮಕರಣ ಪ್ರಕ್ರಿಯೆ ನಡೆದಿದೆ ಎಂಬುದು ಸ್ಪಷ್ಟವಾಗುತ್ತದೆ. ಜನಾಂಗವಾಚಿ ಗ್ರಾಮಗಳು ಮೊದಲು ತಮ್ಮದೇ ಆದ ಗುಂಪುಮಾದರಿಯಲ್ಲಿ ನೆಲೆಸಿದ ಜನರು ಕಾಲಕ್ರಮೇಣ ಮಾನವ ಸಮಾಜಜೀವಿ ಎಂಬುದನ್ನು ಅರಿತ ಜನಾಂಗಗಳು ಬೇರೆ ಬೇರೆ ಜನಾಂಗಗಳು ತಮ್ಮ ಗ್ರಾಮಗಳಲ್ಲಿ ನೆಲೆಸಲು ಅವಕಾಶ ನೀಡಿರಬೇಕು.

## ಅಡಿ ಟಿಪ್ಪಣಿಗಳು

1. ಎಂ.ಎಂ. ಕಲಬುರ್ಗಿ ಕನ್ನಡ ನಾಮ ವಿಜ್ಞಾನ ಪು.ಸಂ. –71.
2. ಶ್ರೀಮತಿ ಹನುಮಾಕ್ಷಿ ಗೋಗಿ ಹುಬ್ಬಳ್ಳಿ ತಾಲೂಕಿನ ಶಾಸನಗಳು (ಸಂ). ಪು. ಸಂ. 74
3. ಶ್ರೀಮತಿ ಹನುಮಾಕ್ಷಿ ಗೋಗಿ ಹುಬ್ಬಳ್ಳಿ ತಾಲೂಕಿನ ಶಾಸನಗಳು (ಸಂ). ಪು. ಸಂ. 60.
4. ಶ್ರೀಮತಿ ಹನುಮಾಕ್ಷಿ ಗೋಗಿ ಹುಬ್ಬಳ್ಳಿ ತಾಲೂಕಿನ ಶಾಸನಗಳು (ಸಂ). ಪು.ಸಂ. 62.
5. ಶ್ರೀಮತಿ ಹನುಮಾಕ್ಷಿ ಗೋಗಿ ಹುಬ್ಬಳ್ಳಿ ತಾಲೂಕಿನ ಶಾಸನಗಳು (ಸಂ). ಪು.ಸಂ. 64.
6. ಶ್ರೀಮತಿ ಹನುಮಾಕ್ಷಿ ಗೋಗಿ ಹುಬ್ಬಳ್ಳಿ ತಾಲೂಕಿನ ಶಾಸನಗಳು (ಸಂ). ಪು.ಸಂ. 87.

## ಆಕರ ಗ್ರಂಥಗಳು


- **ಡಾ.ಎಂ.ಎಂ.ಕಲಬುರ್ಗಿ:** ಕನ್ನಡ ನಾಮ ವಿಜ್ಞಾನ, ಸಪ್ನ ಬುಕ್ ಹೌಸ್, ಬೆಂಗಳೂರು, 1989.
- **ಡಾ.ವ್ಹಿ.ಎಲ್. ಪಾಟೀಲ :** ಮೌಖಿಕ ಪರಂಪರೆ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, 2012.
- **ಡಾ. ವ್ಹಿ.ಎಲ್. ಪಾಟೀಲ :** ಅಡ್ಡಹೆಸರುಗಳು, ಕೀರ್ತಿ ಪ್ರಕಾಶನ ಧಾರವಾಡ, 2005.
- **ಶಂ.ಭಾ. ಜೋಶಿ :** ಎಡೆಗಳು ಹೇಳುವ ಕಂನಾಡ ಕಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2011.
- **ಆರ್ಕೆ :** ಮಣಿಪಾಲ, ಹೆಸರಿನಲ್ಲೇನಿದೆ ? ನ್ಯೂಸ್ಟಾರ್ ಪಬ್ಲಿಕೇಷನ್, ಬೆಂಗಳೂರು, 1989.
- **ಪಂಡಿತ ಕವಲಿ :** ಸಚಿತ್ರ ಕನ್ನಡ–ಕನ್ನಡ ಕಸ್ತೂರಿಕೋಶ, ಶ್ರೀ ರಾಮಾಶ್ರಯ ಪ್ರಕಾಶನ, ಧಾರವಾಡ, 2016.
- **ನಂಜಯ್ಯ :** ಹೊಂಗನೂರು, ಸ್ಥಳನಾಮಗಳು ನಿರ್ದೇಶಕರು ಪ್ರಸಾರಾಂಗ ಮಾನಸ ಗಂಗೋತ್ರಿ ಮೈಸೂರು, 2009.
- **ಎಸ್.ಎಲ್. ದೇಶಪಾಂಡೆ :** ಕರ್ನಾಟಕದ ಸ್ಥಳನಾಮಗಳು ಒಂದು ಅಧ್ಯಯನ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ 2007–08.


### ಸಂಕ್ಷೇಪಗಳು

(ಧಾ)–ಧಾರವಾಡ (ಹು)–ಹುಬ್ಬಳ್ಳಿ

(ನ)– ನವಲಗುಂದ (ಕ)–ಕಲಘಟಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನ್ನಡಾಂಬೆಯ ಸಂಸ್ಕೃತಿ

✍ **ಪ್ರೊ. ಎಸ್. ಎಮ್. ಮುಳ್ಳೂರ,** ಉಪನ್ಯಾಸಕರು, ಕನ್ನಡ ವಿಭಾಗ, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟ.

ದ್ರಾವಿಡಾಂಬೆಯ ಮಗಳು ಕನ್ನಡಾಂಬೆ ಸುದೀರ್ಘವಾದ ಇತಿಹಾಸ ಹೊಂದಿ ವಿಶಿಷ್ಟ ಬಗೆಯ ಸಂಸ್ಕೃತಿಯ ಆಡುಂಬೊಲವಾಗಿ ಬೆಳೆದಿದೆ. ಪರಧರ್ಮಗಳನ್ನು ಗೌರವಿಸುವ ಆರಾಧಿಸುವ ಭಾವನೆ ಕನ್ನಡಿಗರಲ್ಲಿ ರಕ್ತಗತವಾಗಿ ಬಂದುದನ್ನು ಕವಿರಾಜಮಾರ್ಗಕಾರ ಉಲ್ಲೇಖಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಕನ್ನಡದ ಸಂಸ್ಕೃತಿಯು ಭಾರತದ ಚೌಕಟ್ಟಿನಲ್ಲಿ ಹೊಂದಿಕೊಂಡು ಸುಂದರವಾಗಿ ಅರಳಿದೆ. ಮಾನವನಲ್ಲಿ ಮಾನವೀಯತೆಯ ಮಂದಾರವನ್ನು ಪ್ರತಿಬಿಂಬಿಸುತ್ತದೆ. ಸಾಂಸ್ಕೃತಿಕ ದೃಷ್ಟಿಯಿಂದ ಈ ನಾಡಿಗೆ ಉಜ್ವಲವಾದ ಪರಂಪರೆಯಿದೆ. ಇತಿಹಾಸ, ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ದರ್ಶನ, ಸಾಹಿತ್ಯ ಸೃಷ್ಟಿ, ಶಿಲ್ಪ, ಸಂಗೀತ ಹಾಗೂ ನೃತ್ಯ – ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಕನ್ನಡವು ಅನನ್ಯ ಶೈಲಿಯ ಸಂಸ್ಕೃತಿಯನ್ನು ವಿಜೃಂಭಿಸುತ್ತದೆ.

● **ಜನಪದ ಸಾಹಿತ್ಯದಲ್ಲಿ ಕನ್ನಡ ಸಂಸ್ಕೃತಿ :** ಕನ್ನಡ ಜನ ಸಾಮಾನ್ಯರು ರಚಿಸಿದ ಜನಪದ ಸಾಹಿತ್ಯವು ಪಾಮರ ಸಾಹಿತ್ಯವೆನಿಸಿದರೂ ವೈವಿಧ್ಯಪೂರ್ಣವಾಗಿದೆ. ಇದನ್ನು ಮನಗಂಡೆ ಕವಿರಾಜಮಾರ್ಗಕಾರ **'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್'** ಎಂದು ಕೊಂಡಾಡಿದ್ದಾನೆ. ಬದುಕಿನ ಸರಸ–ವಿರಸ, ಸುಖ–ದುಃಖ, ನೋವು–ನಲಿವು, ಪ್ರೀತಿ–ವಾತ್ಸಲ್ಯ, ಆಸರಿಕೆ–ಬೇಸರಿಕೆ, ಭಕ್ತಿ–ಭಾವ ಮೊದಲಾದ ಅನುಭವಗಳಿಗೆ ಬಣ್ಣ ತುಂಬಿದ್ದು, ಆಕಾರ ನೀಡಿದ್ದು ಈ ಸಾಹಿತ್ಯದ ಮೂಲಕ. ಬೆಳಿಗ್ಗೆ ಹಾಸುಗೆಯಿಂದ ಮೇಲೇಳುತ್ತಿದ್ದಂತೆಯೇ –

**ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ**
**ಎಳ್ಳು ಜೀರಿಗೆ ಬೆಳೆಯೊಳ । ಭೂತಾಯಿ**
**ಎದ್ದೊಂದುಗಳಿಗೆ ನೆನೆದೇನ**

**(ಜನಪದ ಸಾಹಿತ್ಯ)**

ಎನ್ನುವ ಸಂಸ್ಕೃತಿ ಕನ್ನಡ ತಾಯಿಯದು. ಮಲೆಯ ಮಾದೇಶ್ವರ, ಮಂಟೇಸ್ವಾಮಿ ಹಾಗೂ ಜುಂಜಪ್ಪ ಮೊದಲಾದ ಸಾಂಸ್ಕೃತಿಕ ವೀರರನ್ನು ಕುರಿತ ಮಹಾಕಾವ್ಯಗಳು ಜನಪ್ರಿಯವಾಗಿವೆ. ಅವುಗಳನ್ನು ತಿಂಗಳುಗಟ್ಟಲೆ ಹಾಡುವ ವೃತ್ತಿಗಾಯಕರು ರಕ್ಷಿಸಿಕೊಂಡು ಬೆಳೆಸಿಕೊಂಡು ಜೀವಂತವಾಗಿಟ್ಟಿದ್ದಾರೆ. ಶುದ್ಧ ಕನ್ನಡ ಸಂಸ್ಕೃತಿಯ ಸಾಂದ್ರತೆಯನ್ನಿಲ್ಲಿ ಕಂಡು ಆನಂದಿಸಬಹುದು. ಕನ್ನಡಿಗರ ವೈವಿಧ್ಯಮಯ ಉತ್ಸಾಹ ಪೂರ್ಣ ಜೀವನಕ್ಕೆ ಹಬ್ಬ, ಉತ್ಸವ, ಜಾತ್ರೆ, ಮದುವೆ ಮೊದಲಾದ ಸಂಭ್ರಮದ ಸಂಪ್ರದಾಯಗಳೇ ಸಾಕ್ಷಿ. ಇಂಥವುಗಳಲ್ಲಿ ಅವರ ಉಡುಗೆ–ತೊಡುಗೆ, ಸೌಂದರ್ಯಪ್ರಜ್ಞೆಯಲ್ಲಿ ಬಹುಮುಖ ಶೈಲಿನ ಸಂಸ್ಕೃತಿ ಕಂಡು ಬರುತ್ತದೆ.

● **ಶಾಸನ ಸಾಹಿತ್ಯದಲ್ಲಿ ಕನ್ನಡ ಸಂಸ್ಕೃತಿ:** ಶಾಸನ ಸಾಹಿತ್ಯ ಅಭಿಜಾತ ಸಾಹಿತ್ಯದ ಮುಂಗೋಳಿ ಎಂದೇ ಹೇಳಬಹುದು. ಕ್ರಿ. ಶ. 450 ರ ಹಲ್ಮಿಡಿ ಶಾಸನವೇ ಕನ್ನಡದ ಮೊಟ್ಟಮೊದಲ ಶಾಸನ. ದತ್ತಿ ದಾನಗಳು ಮತ್ತು ವೀರರ ಸಾಹಸಗಳು ಶಾಸನಗಳ ವಸ್ತುವಾಗುತ್ತವೆ. ದಾನ ಧರ್ಮ ಕನ್ನಡ ಸಂಸ್ಕೃತಿಯ ಸಹಜ ಲಕ್ಷಣ ಎಂದು ತಿಳಿದುಬರುತ್ತದೆ. ವಿಜಯನಗರದ ಪ್ರೌಢಪ್ರತಾಪ ದೇವರಾಯನ ಮಂತ್ರಿ ಲಕ್ಷ್ಮೀಧರ ಮಗುವಿದ್ದಾಗ ಅವರ ತಾಯಿ ಹಾಲೆರೆಯುತ್ತ ಕಿವಿಗೆ ಉದಾತ್ತ ಸಂಸ್ಕೃತಿಯ ಬೀಜ ಮಂತ್ರಗಳ ಮಾಧುರ್ಯವನ್ನು ಸುರಿಯುತ್ತಾಳೆ.

**ಕರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ**
**ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ**
**ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆ ಎನ್ನುತ್ತಿಂತೆಲ್ಲಮಂ ಪಿಂತೆ ತಾ**
**ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ**

**(ಲಕ್ಷ್ಮೀಧರಾಮಾತ್ಯ ಶಾಸನ)**

ಎಂದು ಹೇಳುವ ಮಾತು ಜಗತ್ತಿನ ಯಾವ ಸಾಹಿತ್ಯದಲ್ಲಿಯೂ ತಾಯಿ ಹೇಳುವ ಇಂತಹ ಹರಕೆ ಸಿಗಲಾರದು. ಕನ್ನಡದ ಸಂಸ್ಕೃತಿಯೇ ಇಲ್ಲಿ ಹೆಪ್ಪುಗಟ್ಟಿದಂತಿದೆ. ಲಕ್ಷ್ಮೀಧರಾ ಬೆಳೆಯುತ್ತ ತಾಯಿಯ ಹರಕೆಯನ್ನು ಕಾರ್ಯಗತಗೊಳಿಸುತ್ತಾನೆ. ಕಪ್ಪೆ ಅರಭಟ್ಟನ ವ್ಯಕ್ತಿತ್ವವು ಒಂದೆಡೆ ವೀರ ಮೌಲ್ಯಗಳಿಂದ ಕೂಡಿದರೆ ಇನ್ನೊಂದೆಡೆ ಸಾಂಸ್ಕೃತಿಕ ಸೌರಭವನ್ನು ಸೂಸುವ ಜೀವನವೂ ಆಗಿದೆ. **'ಶಿಷ್ಟ ಜನವರ್ಜಿತನ್'** ಆಗಿದ್ದನೆಂಬ ಮಾತು ವೀರ ಸಂಸ್ಕೃತಿಯ ದ್ಯೋತಕವೇ ಸರಿ.

● **ಶಿಷ್ಟ ಸಾಹಿತ್ಯದಲ್ಲಿ ಕನ್ನಡ ಸಂಸ್ಕೃತಿ :** ಕನ್ನಡ ನಾಡು ನುಡಿಯು ಎಲ್ಲ ಸಾಹಿತ್ಯಗಳಿಂದ ಪ್ರೇರಣೆ ಪ್ರಚೋದನೆಗಳನ್ನು ಸ್ವಾಗತಿಸಿ ಸ್ವತಂತ್ರ ಸಾಹಿತ್ಯವನ್ನು ಕನ್ನಡವು ಬೆಳೆಸಿಕೊಂಡಿತು. ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ ಈ ಯಾವ ಪ್ರಕಾರಗಳನ್ನು ತೆಗೆದುಕೊಂಡರೂ ಕನ್ನಡವು ತನ್ನ ವಿಭಿನ್ನ ಶೈಲಿಯ ಸ್ವಂತಿಕೆಯನ್ನು ಉಳಿಸಿಕೊಂಡಿದೆ. ಪಂಪ, ರನ್ನ, ಕುಮಾರವ್ಯಾಸರು ಮಹಾಭಾರತದ ವಸ್ತುವನ್ನು ಆರಿಸಿಕೊಂಡಿದ್ದರೂ ಅವು ಕನ್ನಡದ ನೆಲಕ್ಕೆ ಹೊಂದಿಕೊಂಡಿವೆ. ಕಥೆ ಹಲವು ಶತಮಾನಗಳಷ್ಟು ಹಿಂದಿನದಾದರೂ ಸಮಕಾಲೀನ ಕ್ಷೇತ್ರದ ಸಂಸ್ಕೃತಿಯನ್ನು ಅಲ್ಲಿ ಮೂಡಿಸಿದ್ದಾರೆ. ವಚನ ಸಾಹಿತ್ಯವಂತೂ ವಿಶ್ವಸಾಹಿತ್ಯಕ್ಕೆ ಕೊಟ್ಟ ಅತ್ಯಂತ ಮಹತ್ತ್ವದ ಕಾಣಿಕೆಯಾಗಿದೆ. ಶರಣರು, ಸಂತರು, ದಾಸರು, ಅನುಭಾವಿಗಳು, ದಾರ್ಶನಿಕರು ಹಾಗೂ ಕವಿಪುಂಗವರು ಕನ್ನಡದ ಹಿರಿಮೆ ಹಾಗೂ ಸಂಸ್ಕೃತಿಯನ್ನು ಬಣ್ಣಿಸಿದ್ದಾರೆ. ಕನ್ನಡಿಗರ ಜಾಣ್ಮೆ, ಕೆಚ್ಚು, ದಾನಗುಣ, ಭೌಗೋಳಿಕ ಹರವಿನ ಸಾಂಸ್ಕೃತಿಕ ವೈಭವ ಕವಿಯ ಮನಸ್ಸಿಗೆ ಮನೋಹರವಾಗಿ ಸಾರ್ಥಕ್ಯದ ಗಣಿಯಾಗಿ ಕಂಡಿದೆ.

● **ಶಿಲ್ಪ – ವಾಸ್ತುಶಿಲ್ಪದಲ್ಲಿ ಕನ್ನಡ ಸಂಸ್ಕೃತಿ :** ಕರ್ನಾಟಕವು ಉತ್ತರದ ನಾಗರ, ದಕ್ಷಿಣದ ದ್ರಾವಿಡ ಎಂಬ ಎರಡು ವಾಸ್ತಿಶಿಲ್ಪ ಕಲೆಗಳ ಸಂಗಮವಾಗಿದೆ. ಕನ್ನಡ ಸಂಸ್ಕೃತಿಯ ಶಿಖರಪ್ರಾಯದ ವೈಭವೋನ್ನತಿಗೆ ವಿವಿಧ ರಾಜಮನೆತನಗಳು ಅಳವಡಿಸಿಕೊಂಡಿರುವ ಶಿಲ್ಪ– ವಾಸ್ತುಶಿಲ್ಪಗಳು ಮುಖ್ಯವಾಗಿರುತ್ತವೆ. ಐಹೊಳೆ, ಪಟ್ಟದಕಲ್ಲು ಭಾರತೀಯ ವಾಸ್ತುಶಿಲ್ಪದ ಕಾರ್ಯಾಗಾರಗಳೆಂದು ಪ್ರಸಿದ್ಧವಾಗಿವೆ. ಅಲ್ಲಿನ ಶಿಲ್ಪಗಳ ಸಮೃದ್ಧ ಸಾಮಾಜಿಕ ಜೀವನದ ಸಂಸ್ಕೃತಿಯ ಲವಲವಿಕೆಯ ಉತ್ಸಾಹಗಳ ಸಂಕೇತವಾಗಿವೆ. ಶಿಲ್ಪಕಲೆಗೆ ಕರ್ನಾಟಕ ನೀಡಿದ ಅತ್ಯಮೂಲ್ಯ ವರದಾನವೆಂದರೆ ಗಂಗರ ಮನೆತನದ ಶ್ರವಣಬೆಳಗೊಳದ ಬಾಹುಬಲಿ ಸ್ವಾಮಿಯ ವಿಗ್ರಹ ಅದರಲ್ಲಿ ಮಾನವೀಯ ಸದ್ಗುಣಗಳು ಹೆಪ್ಪುಗಟ್ಟಿದಂತಿವೆ. ಆ ಸುಂದರ ಮೊಗದಲ್ಲಿ ಸೂಸುವ ಮುಗುಳ್ನಗೆಯ ಸ್ನಿಗ್ಧತೆಯಲ್ಲಿ ಶಾಂತಿ, ಪ್ರೇಮಗಳು ಮುಕ್ಕುಳಿಸುವಂತೆ ನೋಟಕರಿಗೆ ಭಾಸವಾಗುತ್ತದೆ. ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪಗಳು ನಾಡಿನ ಹಿರಿಮೆಗೆ ಸಾಕ್ಷಿಯಾದರೆ, ಹೊಯ್ಸಳ ದೊರೆಗಳ ವಾಸ್ತುಶಿಲ್ಪ ಸುವರ್ಣಯುಗವಾಗಿದೆ. ಇವರ ದೇವಾಲಯದ ವಿನ್ಯಾಸ ನಕ್ಷತ್ರಾಕಾರದ್ದಾಗಿದೆ, ಕುಸುರಿ ಕೆಲಸ ಸೂಕ್ಷ್ಮದ್ದಾಗಿದೆ. ಶಿಲ್ಪಿಯ

ಕೈಯಲ್ಲಿ ಕಲ್ಲು ಮೃದುವಾಗಿ ಕರಗಿದೆ. ಇವರ ದೇವಾಲಯವು ಕರ್ನಾಟಕದ ಸುಪ್ರಸಿದ್ಧ ಪ್ರವಾಸಿ ಕೇಂದ್ರವೂ, ಸಾಂಸ್ಕೃತಿಕ ಕೇಂದ್ರವೂ ಆಗಿದೆ.

● **ನೃತ್ಯದಲ್ಲಿ ಕನ್ನಡ ಸಂಸ್ಕೃತಿ :** ಕರ್ನಾಟಕದ ಬಹುಮುಖಿಯ ಸಂಸ್ಕೃತಿಯು ನೃತ್ಯದಲ್ಲಿ ಅಡಕಗೊಂಡಿದೆ. ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರ ದೇವಾಲಯಗಳ ಶಿಲ್ಪಗಳ ಆಧಾರದಿಂದಲೂ ಕನ್ನಡ ಕಾವ್ಯ ಶಾಸನಗಳಲ್ಲಿ ಬರುವ ನರ್ತನಗಳ ಆಧಾರಿಂದಲೂ ಅರಿಯಬಹುದು. ಬೇಲೂರು ದೇವಾಲಯದ ಶಿಲಾಬಾಲಿಕೆಯ ಸೌಂದರ್ಯದ ನೋಟ ಅದ್ಭುತವಾದದ್ದು, ಕಲ್ಲನ್ನು ಮೇಣದಂತೆ ಬಳಸಿದ ಆ ಶಿಲ್ಪಿಗಳ ಕೌಶಲ್ಯ ಅನನ್ಯವಾಗಿದೆ. ಆದಿಕವಿ ಪಂಪ ನೀಲಾಂಜನೆಯ ನೃತ್ಯವನ್ನು ವರ್ಣಿಸುತ್ತ –

**ಅಂಬರ ಭೂಷಣ ಮಾಲಾ**
**ಡಂಬರದ ಬೆಡಂಗನಮರನರ್ತಕಿ ಗಡಮೇ**
**ನೆಂಬುದೊ ಧರಣೇಂದ್ರಂಗಮ**
**ಉಂಬಂ ಪೊಗಳಲ್ಕೆ ರೂಪು ನೀಳಾಂಜನೆಯಾ** **(ಆದಿಪುರಾಣ)**

ಅವರ ನರ್ತಕಿಯ ಚೆಲುವನ್ನು ಹೊಗಳಲು ಧರಣೇಂದ್ರನಿಗೂ ಅಸಾಧ್ಯ ಎನ್ನುತ್ತಾನೆ. ಅವಳ ವೇಷ–ಭೂಷಣಗಳು ವಿಶಿಷ್ಠ ಬಗೆಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಸಾಂಗತ್ಯ ಕವಿ ರತ್ನಾಕರವರ್ಣಿಯು ತನ್ನ **'ಭರತೇಶವೈಭವ'** ಕಾವ್ಯದಲ್ಲಿ ನರ್ತನ ಶಾಲೆಯ ವರ್ಣನೆಯನ್ನಲ್ಲದೆ ದಿಕ್ಕನ್ನಿಕಾ ನಾಟ್ಯ, ಜಲ ಕನ್ನಿಕಾ ನಾಟ್ಯಗಳಂತಹ ಬ್ಯಾಲೆಗಳನ್ನು ವರ್ಣಿಸಿದ್ದಾನೆ. ಆ ವರ್ಣನೆಗಳ ಆಧಾರದ ಮೇಲೆ ಇಂದಿಗೂ ಹೊಸ **'ಬ್ಯಾಲೆ'**ಗಳನ್ನು ರೂಪಿಸಬಹುದು. ಹೊಯ್ಸಳರ ಮನೆತನದಲ್ಲಿ ನಾಟ್ಯ ಸರಸ್ವತಿ ಎಂದು ಖ್ಯಾತಿ ಪಡೆದ ಶಾಂತಲೆ ಒಬ್ಬ ಅದ್ವಿತೀಯ ನರ್ತಕಿಯಾಗಿದ್ದಳು ಎಂಬುದು ಹೃದಯಂಗಮವಾಗಿ ನಿರೂಪಿತವಾಗಿದೆ.

## ಆಕರ ಗ್ರಂಥಗಳು


- **ಎಚ್. ತಿಪ್ಪೇರುದ್ರಸ್ವಾಮಿ :** ಕರ್ನಾಟಕ ಸಂಸ್ಕೃತಿ ಸಮೀಕ್ಷೆ
- **ಹಲಸಂಗಿ ಗೆಳೆಯರು ಸಂ.** : ಗರತಿಯ ಹಾಡು ಸಂಪಾದಕರು
- **ಕೆ. ಎಲ್. ನರಸಿಂಹಶಾಸ್ತ್ರಿ :** ಆದಿಪುರಾಣ ಸಂಪಾದಕರು
- **ಎಂ. ಚಿದಾನಂದ ಮೂರ್ತಿ :** ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು–2002.


■■

– 22 ನೇ ಪುಟದಿಂದ ಮುಂದುವರೆದುದು

ಸತ್ಯಭಾಮೆ ಬಡಿಸಿದ ಊಟವನ್ನ ಸೇವಿಸುವ ಮುನ್ನ ಅಷ್ಟದಿಕ್ಪಾಲಕರಿಗೆ ನೈವೇದ್ಯ ಅರ್ಪಿಸುವ ರೀತಿ ವಿಶಿಷ್ಟವಾಗಿದೆ. ಸತ್ಯಭಾಮೆ ಈ ಪದ್ಧತಿಯ ಕುರಿತಾಗಿ ವಿಚಾರಿಸುತ್ತಾಳೆ. ಕೊರವಂಜಿಯು ಎಂಟು ದಿಕ್ಕುಗಳಲ್ಲಿರುವ ದಿಕ್ಪಾಲಕರಿಗೆ ನೈವೇದ್ಯ ಸಮರ್ಪಿಸುವುದು ಉತ್ತಮ ನಡವಳಿಕೆಯಾಗಿದೆ. ಇದರಿಂದ ದಿಕ್ಪಾಲಕರು ಸಂತುಷ್ಟರಾಗುವುದಾಗಿ ಕೊರವಂಜಿ ವಿವರಿಸುತ್ತಾಳೆ. ಕೊನೆಗೆ ಸತ್ಯಭಾಮೆ ಕೃಷ್ಣನು ಯಾವಾಗ ಬರುವನೆಂದು ಕೇಳುತ್ತಾಳೆ. ಸತಿಗೆ ಪತಿಯೇ ಪರದೈವ ಪರಮಾತ್ಮ ಎಂಬುದನ್ನು ತಿಳಿಸಲು ನಾಟಕಕಾರ ಪ್ರಯತ್ನಿಸಿದಂತಿದೆ. ಪತಿಗೋಸ್ಕರ ಕಾಯುವ ಹೆಣ್ಣಿನ ತವಕ–ತಲ್ಲಣಗಳನ್ನು ಕುಲಗೋಡ ತಮ್ಮಣ್ಣ ಅದ್ಭುತವಾಗಿ ಚಿತ್ರಿಸಿದ್ದಾನೆ.

ಸತ್ಯಭಾಮೆಯ ಮನಸ್ಸಿನಲ್ಲಾಗುವ ಕಳವಳವನ್ನು ಕಂಡ ಕೊರವಂಜಿ, "ಬಂದಾನೆಂದು ತಿಳಿಯೇ ನೀ ಸ್ಮರನ ಮಾತಿನ ಗಿಳಿಯೆ." ಸೂರ್ಯ, ಚಂದ್ರ, ಭೂಮಿ, ಮಕ್ಕಳು ಉಣ್ಣುವ ಊಟದ ಮೇಲೆ ಆಣೆ ಮಾಡಿ ಕೊರವಂಜಿ ಸತ್ಯಭಾಮೆಗೆ ಕೃಷ್ಣನ ಆಗಮನದ ಕುರಿತಾಗಿ ಭರವಸೆ ನೀಡುತ್ತಾಳೆ. ಕೃಷ್ಣ ಪರಮಾತ್ಮ ನಿನ್ನ ಮಂದಿರಲ್ಲಿಯೇ ಇದ್ದಾನೆಂದು ಕೊರವಂಜಿ ಹೇಳುವಾಗ, ಸತ್ಯಭಾಮೆ ಕೃಷ್ಣನನ್ನು ಹುಡುಕುವ ದೃಶ್ಯಗಳಲ್ಲಿ ಸಂಯೋಗ ಶೃಂಗಾರವನ್ನು ನಾಟಕಕಾರ ಕಾಣಿಸುತ್ತಾನೆ. ಭಕ್ತಿಯ ಕಣ್ಣುಗಳಿಂದ ಮುಕ್ತಿದಾಯಕನನ್ನು ಕಾಣಬಯಸಿದರೆ ಮಾತ್ರ ಪರಮಾತ್ಮ ಸಿಗಬಲ್ಲನೆಂಬ ಸತ್ಯವನ್ನು ಕೊರವಂಜಿ ಲೋಕಕ್ಕೆ ತಿಳಿಯಪಡಿಸುತ್ತಾಳೆ. ಪರಮಾತ್ಮನ ನಾಮಸ್ಮರಣೆ ಮಾಡಿದರೆ ಕೃಷ್ಣನು ಪ್ರತ್ಯಕ್ಷನಾಗುತ್ತಾನೆಂದು ತಿಳಿಸುತ್ತ, ಪರಮಾತ್ಮ ಭಕ್ತಿಗೆ ಒಲಿಯುತ್ತಾನೆ; ಸೊಕ್ಕಿಗೆ ಒಲಿಯುವವನಲ್ಲ ಎಂಬ ಸಂದೇಶ ಸಾರುತ್ತ, ಸತ್ಯಭಾಮೆಯನ್ನು ಭಕ್ತಿಯ ಸಾಗರದಲ್ಲಿ ತೇಲಿಸಿ ಕೊರವಂಜಿ ಅದೃಶ್ಯಳಾಗುತ್ತಾಳೆ.

ಕುಲಗೋಡ ತಮ್ಮಣ್ಣ ತನ್ನ ಪಾರಿಜಾತದ ಕೊರವಂಜಿ ಪಾತ್ರವನ್ನು ವಿಶಿಷ್ಟವಾಗಿ ರೂಪಿಸಿದ್ದಾನೆ. ಅಪರಾಳದ ಕೊರವಂಜಿಯನ್ನು ಕುಲಗೋಡದ ಕೊರವಂಜಿಯಾಗಿಸಿ ರಂಗಭೂಮಿಯಲ್ಲಿ ಪ್ರದರ್ಶಿಸುವಲ್ಲಿ ಕುಲಗೋಡ ತಮ್ಮಣ್ಣ ತನ್ನೆಲ್ಲ ಪ್ರತಿಭಾ ಶಕ್ತಿಯನ್ನು ಧಾರೆ ಎರೆದಿದ್ದಾನೆ. ಉಳಿದೆಲ್ಲ ಪಾತ್ರಗಳಿಗಿಂತ ಕೊರವಂಜಿ ಕುಲಗೋಡ ತಮ್ಮಣ್ಣನಲ್ಲಿ ವಿಭಿನ್ನವಾಗಿ ನಿಲ್ಲುತ್ತಾಳೆ. ರಂಗಭೂಮಿಯಲ್ಲಿ ಕೃಷ್ಣ–ಕೊರವಂಜಿಯಾಗಿ ವೇಷ ಬದಲಿಸುವ ಸನ್ನಿವೇಶ ಕುಲಗೋಡ ತಮ್ಮಣ್ಣನ ಕಲಾ ಕುಶಲಗಾರಿಕೆಗೆ ಹಿಡಿದ ಕೈಗನ್ನಡಿಯಂತಿದೆ.

ಜಗದ ಸಾಮಾನ್ಯ ಕೊರವಂಜಿಯಂತೆ ಕಂಡರೂ, ಕುಲಗೋಡ ತಮ್ಮಣ್ಣನ ಪಾರಿಜಾತ ಕೊರವಂಜಿ ಜ್ಞಾನ ಪ್ರಸಾರತೆಯ ಪ್ರಾಧ್ಯಾಪಕಿಯಾಗಿ ಅಟ್ಟದ ಮೇಲೆ ಕಂಡು ಬರುತ್ತಾಳೆ. ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ನೀಡುತ್ತಾಳೆ. ಕುಲದೇವತೆಯ ಆರಾಧನೆ, ಕೋಲಾಟದ ಹಾಡು–ಕುಣಿತಗಳು ಪಾತ್ರಕ್ಕೆ ಸಹಜತೆ ತಂದುಕೊಟ್ಟು ಸಾಮಾನ್ಯರಲ್ಲಿ ಅಸಾಮಾನ್ಯಳಾಗಿ ಕಾಣಿಸುತ್ತಾಳೆ. ಸಂಗೀತ, ಸಂಭಾಷಣೆ, ವೇಷಗಾರಿಕೆಯಿಂದಲೂ ಕೊರವಂಜಿ ಪಾತ್ರ ಪ್ರೇಕ್ಷಕರ ಮನಸೆಳೆಯುತ್ತದೆ. ಆಗಾಧ ಜ್ಞಾನವನ್ನು ತುಂಬಿದ ಕೊರವಂಜಿ ಪಾತ್ರವನ್ನು ಕುಲಗೋಡ ತಮ್ಮಣ್ಣ ಜಾನಪದ ವಿಶ್ವವಿದ್ಯಾಲಯವಾಗಿ ಕಾಣಿಸುತ್ತಾನೆ. ನೀಲಾಂಬರಿ, ಸಾರಂಗ ಭೂಪ, ಝುಂಜಟರಾಗಗಳಲ್ಲಿ ಕೊರವಂಜಿಯನ್ನು ಹಾಡಿಸುವ ತಮ್ಮಣ್ಣನ ಕಲೆ ಅಪೂರ್ವವೆನಿಸುತ್ತದೆ. ಜಾನಪದ ಸೊಗಡಿನ ಹಾಡುಗಳು ಪ್ರೇಕ್ಷಕನ ಮನಗೆಲ್ಲುತ್ತವೆ. ವ್ಯಕ್ತಿ ವೇಷ ಬದಲಾಯಿಸಿಕೊಂಡಾಗ ಆಗುವ ಬದಲಾವಣೆಯ ರೀತಿ–ನೀತಿ, ಹಾವ–ಭಾವಗಳನ್ನು ಕೊರವಂಜಿ ಪಾತ್ರದಲ್ಲಿ ತಮ್ಮಣ್ಣ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ.

ಹಳ್ಳಿಗರ ಮಧ್ಯೆದಲ್ಲಿ ಬೆಳೆದು ಬಂದ ಕೊರವಂಜಿಯನ್ನು ಕುಲಗೋಡದ ತಮ್ಮಣ್ಣ ಸತ್ಯಭಾಮೆಯ ಮುಂದೆ ಜ್ಞಾನದ ಖಣಿಯಾಗಿಸುತ್ತಾನೆ. ಲೌಕಿಕತೆಯಿಂದ ಅಲೌಕಿಕತೆಯತ್ತ ಸಾಗುವ ಕೊರವಂಜಿ ಪಾತ್ರ ನಾಟಕಕಾರನಲ್ಲಿಯ ಆಗಾಧ ಶಕ್ತಿಗೆ ಸಾಕ್ಷಿಯಾಗುತ್ತದೆ. ಒಟ್ಟಾಗಿ ಕೊರವಂಜಿ, ಕುಲಗೋಡ ತಮ್ಮಣ್ಣ ಪಾರಿಜಾತದ ಅಸಾಮಾನ್ಯ, ಜನಪ್ರಿಯ ಪಾತ್ರ. ಕುಲಗೋಡ ತಮ್ಮಣ್ಣನ ದೇಶಿಯತೆ ದೃಷ್ಟಿ; ಪಾರಿಜಾತದ ಕೊರವಂಜಿ ಪಾತ್ರ ಸೃಷ್ಠಿ.

## ಆಕರ ಗ್ರಂಥಗಳು


- **ಬಸವರಾಜ ಮಲಶೆಟ್ಟಿ** (ಸಂ.)1999 : ಶ್ರೀ ಕೃಷ್ಣ ಪಾರಿಜಾತ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.
- **ಬಸವರಾಜ ಮಲಶೆಟ್ಟಿ** 2008 : ಕರ್ನಾಟಕ ಜನಪದ ರಂಗಭೂಮಿ ಸ್ನೇಹ ಪ್ರಿಂಟರ್ಸ್, ಬೆಂಗಳೂರು.
- **ಸುಂಕಾಪುರ ಎಂ.ಎಸ್.** (ಸಂ.) 1972 : ಕುಲಗೋಡ ತಮ್ಮಣ್ಣ ಕೃತ ಶ್ರೀಕೃಷ್ಣ ಪಾರಿಜಾತ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- **ಶ್ರೀರಾಮ ಇಟ್ಟಣ್ಣವರ** 1991 : ಶ್ರೀಕೃಷ್ಣ ಪಾರಿಜಾತ; ಒಂದು ಅಧ್ಯಯನ, ವಿನಿ ಪ್ರಕಾಶನ, ಬೀಳಗಿ.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಮತ್ತು ಸಾಧನಾ ಅಭಿಪ್ರೇರಣೆಯ ಸಹಸಂಬಂಧದ ಅಧ್ಯಯನ

✍ **ಬೈರಸಿದ್ದಪ್ಪ ಜಿ.ಇ.** ಸಂಶೋಧನಾ ವಿದ್ಯಾರ್ಥಿ, ಸಹಾಯಕ ಪ್ರಾಧ್ಯಾಪಕರು, ಶ್ರೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ

✍ **ಡಾ. ಹೆಚ್.ವಿ. ವಾಮದೇವಪ್ಪ,** ವಿಶ್ರಾಂತ ಪ್ರಾಧ್ಯಾಪಕರು ಮತ್ತು ಸಂಶೋಧನಾ ಮಾರ್ಗದರ್ಶಕರು, ಸ್ನಾತಕೋತ್ತರ ಶಿಕ್ಷಣ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

## ಅಧ್ಯಯನದ ಸಾರಾಂಶ

ಈ ಸಂಶೋಧನಾ ಅಧ್ಯಯನದಲ್ಲಿ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿಯ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಮತ್ತು ಸಾಧನಾ ಅಭಿಪ್ರೇರಣೆಗಳ ಸಹಸಂಬಂಧವನ್ನು ತಿಳಿಯಲು ಕರ್ನಾಟಕ ರಾಜ್ಯದ 14 ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಿಗೆ ಭೇಟಿ ನೀಡಿ, ಪ್ರೊ. ಪ್ರತಿಭಾಡಿಯೋ ಮತ್ತು ಡಾ. ಆಶಾಮೋಹನ್‌ರವರು ರೂಪಿಸಿರುವ ಸಾಧನಾ ಅಭಿಪ್ರೇರಣೆ ಪರೀಕ್ಷಣ(2011) ಮತ್ತು ಸಂಶೋಧಕರು ರೂಪಿಸಿರುವ ಶೈಕ್ಷಣಿಕ ಸಾಧನ ಪರೀಕ್ಷಣವನ್ನು ಬಳಸಿಕೊಂಡು, ದತ್ತಾಂಶವನ್ನು ಸಂಗ್ರಹಿಸಿ 't' ಪರೀಕ್ಷೆ, ಒಂದು ಮಾರ್ಗದ ಪ್ರಸರಣೆಯ ವಿಚಲನೆಯ ವಿಶ್ಲೇಷಣೆ (One way ANOVA), ಕಾರ್ಲ್ ಪಿಯರ್‌ಸನ್‌ರವರ ಸಹಸಂಬಂಧ ಗುಣಾಂಕ ತಂತ್ರ ಹಾಗೂ Tukeys Multiple Posthoc Procedures ವಿಧಾನಗಳನ್ನು ಅಳವಡಿಸಿಕೊಂಡು, ದತ್ತಾಂಶಗಳನ್ನು ವಿಶ್ಲೇಷಣೆ ಮಾಡಿ ಶೈಕ್ಷಣಿಕ ಸಾಧನೆ ಮತ್ತು ಸಾಧನಾ ಅಭಿಪ್ರೇರಣೆಯ ಸಹಸಂಬಂಧವನ್ನು ಅಧ್ಯಯನ ಮಾಡಲಾಗಿದ್ದು, ಈ ಅಧ್ಯಯನದಲ್ಲಿ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಗೆ ಸಾಧನಾ ಅಭಿಪ್ರೇರಣೆಯು ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧವನ್ನು ಹೊಂದಿರುವುದು ಕಂಡುಬಂದಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಗಿಂತ ನಗರ ಪ್ರದೇಶದ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯು ಉತ್ತಮವಾಗಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಗಿಂತ ನಗರ ಪ್ರದೇಶದ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯು ಉತ್ತಮವಾಗಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವೆ ಧನಾತ್ಮಕ ಮಹತ್ವಪೂರ್ಣ ಸಹಸಂಬಂಧ ಕಂಡುಬಂದಿದೆ ಮತ್ತು ನಗರ ಪ್ರದೇಶದ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವೆ ಧನಾತ್ಮಕ ಮಹತ್ವಪೂರ್ಣ ಸಹಸಂಬಂಧ ಕಂಡುಬಂದಿದೆ.

## ಪೀಠಿಕೆ

ನಮ್ಮ ದೇಶದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ, ಪ್ರಾಥಮಿಕ ಶಿಕ್ಷಣ ಸೌಲಭ್ಯದಲ್ಲಿ ವಂಚಿತರಾಗಿರುವ, ಅರ್ಧಕ್ಕೆ ಶಿಕ್ಷಣವನ್ನು ನಿಲ್ಲಿಸಿರುವ ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಬುಡಕಟ್ಟು ಜನಾಂಗದ, ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಲು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ 3–12–2004ರಂದು ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, 2005–06ನೇ ಸಾಲಿನಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆರ್ಥಿಕ ನೆರವಿನೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಪ್ರಸ್ತುತ ಕರ್ನಾಟಕದಲ್ಲಿ ಒಟ್ಟು 71 ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಿದ್ದು, ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ.

## ಅಧ್ಯಯನದ ಅಗತ್ಯತೆ

ಪ್ರಸ್ತುತ ಸಂಶೋಧನೆಯಿಂದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿಯ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಮತ್ತು ಸಾಧನಾ ಅಭಿಪ್ರೇರಣೆಯ ಸಹಸಂಬಂಧವನ್ನು ತಿಳಿದುಕೊಂಡು ಕಂಡುಬಂದಂತಹ ಫಲಿತಾಂಶಗಳನ್ನು ಶಿಕ್ಷಕರು, ಮುಖ್ಯೋಪಾಧ್ಯಾಯರು, ಶಿಕ್ಷಣ ತಜ್ಞರು ಹಾಗೂ ಅಧಿಕಾರಿ ವರ್ಗದವರಿಗೆ ಉಪಯುಕ್ತ ಮಾಹಿತಿಗಳನ್ನು ಒದಗಿಸಿ, ಸೂಕ್ತ ನಿಯಮಾವಳಿಗಳನ್ನು ರೂಪಿಸಲು, ಸಾಧನೆ ಅಭಿಪ್ರೇರಣಾ ಮಟ್ಟವನ್ನು ಹೆಚ್ಚಿಸಲು ಈ ಅಧ್ಯಯನವು ಮಹತ್ವವನ್ನು ಪಡೆಯುತ್ತದೆ.

## ಅಧ್ಯಯನದ ಉದ್ದೇಶಗಳು

1) ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯ ವ್ಯತ್ಯಾಸವನ್ನು ಕುರಿತು ಅಧ್ಯಯನ ಮಾಡುವುದು.
2) ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿನ ವ್ಯತ್ಯಾಸವನ್ನು ಕುರಿತು ಅಧ್ಯಯನ ಮಾಡುವುದು.
3) ಕಡಿಮೆ, ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯ ಮಟ್ಟವನ್ನು ಕಂಡುಹಿಡಿಯುವುದು.
4) ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವಿನ ಸಹಸಂಬಂಧವನ್ನು ಕುರಿತು ಅಧ್ಯಯನ ಮಾಡುವುದು.
5) ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವಿನ ಸಹಸಂಬಂಧವನ್ನು ಕುರಿತು ಅಧ್ಯಯನ ಮಾಡುವುದು.

6) ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವಿನ ಸಹಸಂಬಂಧವನ್ನು ಕುರಿತು ಅಧ್ಯಯನ ಮಾಡುವುದು.

## ಪ್ರಾಕಲ್ಪನೆಗಳು

1) ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

2) ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

3) ಕಡಿಮೆ, ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ಯಾವುದೇ ಗಣನೀಯ ವ್ಯತ್ಯಾಸ ಕಂಡುಬರುವುದಿಲ್ಲ.

4) ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವೆ ಯಾವುದೇ ಮಹತ್ವಪೂರ್ಣ ಸಹಸಂಬಂಧ ಕಂಡುಬರುವುದಿಲ್ಲ.

5) ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವೆ ಯಾವುದೇ ಮಹತ್ವಪೂರ್ಣ ಸಹ ಸಂಬಂಧ ಕಂಡುಬರುವುದಿಲ್ಲ.

6) ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವೆ ಯಾವುದೇ ಮಹತ್ವಪೂರ್ಣ ಸಹ ಸಂಬಂಧ ಕಂಡುಬರುವುದಿಲ್ಲ.

## ಸಂಶೋಧನಾ ವಿಧಾನ

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ವಿವರಣಾತ್ಮಕ–ವಿಶ್ಲೇಷಣಾತ್ಮಕ ವಿಧಾನದಲ್ಲಿ ಕಾರಣ–ಹೋಲಿಕಾ ಅಧ್ಯಯನದ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

## ಜನಸಮೂಹ ಮತ್ತು ಪ್ರತಿದರ್ಶಿ

ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕದಲ್ಲಿ ಮೈಸೂರು, ಬೆಂಗಳೂರು, ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗಗಳಿಂದ ಒಟ್ಟು 71 ಕಸ್ತೂರಬಾ ಗಾಂಧಿ ವಸತಿ ವಿದ್ಯಾಲಯಗಳಿದ್ದು, ಸಂಶೋಧನಾ ಅಧ್ಯಯನಕ್ಕೆ ಯಾದೃಚ್ಛಿಕವಾಗಿ ಈ ಕೆಳಕಂಡ 14 ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳನ್ನು ಆಯ್ಕೆ ಮಾಡಿಕೊಂಡಿದ್ದು, ಈ ವಿದ್ಯಾಲಯಗಳ 512 ವಿದ್ಯಾರ್ಥಿನಿಯರನ್ನು ಸಂಶೋಧನಾ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

| ಕ್ರ. ಸಂ. | ಕರ್ನಾಟಕದ ಕೆ.ಜಿ.ಬಿ.ವಿ ಶಾಲೆಗಳು (ಜನ ಸಮೂಹ) | ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರತಿದರ್ಶಿ ಶಾಲೆಗಳು | ವಿದ್ಯಾರ್ಥಿ–ನಿಯರ ಸಂಖ್ಯೆ |
|---|---|---|---|
| 1. | ಮೈಸೂರು ವಿಭಾಗ (ಒಟ್ಟು 9 ಶಾಲೆಗಳು) | 1. ಹೊಳೆನರಸಿಪುರ,<br>2. ಕೆ.ಆರ್.ನಗರ | 58 |
| 2. | ಬೆಂಗಳೂರು ವಿಭಾಗ (ಒಟ್ಟು 12 ಶಾಲೆಗಳು) | 1. ಚಳ್ಳಕೆರೆ<br>2. ಮೊಳಕಲ್ಮೂರು | 75 |
| 3. | ಬೆಳಗಾಂ ವಿಭಾಗ (ಒಟ್ಟು19 ಶಾಲೆಗಳು | 1. ಬಾದಾಮಿ<br>2. ಬಾಗಲಕೋಟೆ<br>3. ಬೀಳಗಿ<br>4. ವಿಜಯಪುರ | 169 |
| 4. | ಗುಲ್ಬರ್ಗ ವಿಭಾಗ (ಒಟ್ಟು 31 ಶಾಲೆಗಳು) | 1. ಗಂಗಾವತಿ<br>2. ಕಾರಟಗಿ/ಗಂಗಾವತಿ<br>3. ಕೊಪ್ಪಳ<br>4. ಹೊಸಪೇಟೆ<br>5. ಸಂಡೂರು<br>6. ಸಿಂಧನೂರು | 210 |
| | ಒಟ್ಟು ಶಾಲೆಗಳು – 71 | ಒಟ್ಟು ಶಾಲೆಗಳು – 14 | 512 |

## ಅಧ್ಯಯನದ ಚರಾಂಶಗಳು

1) ಸಾಧನಾ ಅಭಿಪ್ರೇರಣೆ,

2) ಶೈಕ್ಷಣಿಕ ಸಾಧನೆ

## ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು:

**1. ಸಾಧನಾ ಅಭಿಪ್ರೇರಣಾ ಪರೀಕ್ಷಣ :** ಪ್ರೊ. ಪ್ರತಿಭಾಡಿಯೋ ಮತ್ತು ಡಾ. ಆಶಾಮೋಹನ್‌ರವರು ಈ ಸಾಧನ (2011) ವನ್ನು ರೂಪಿಸಿದ್ದು, ಈ ಸಾಧನದಲ್ಲಿ. (1) ಶೈಕ್ಷಣಿಕ ಅಭಿಪ್ರೇರಣೆ (2) ಸಾಧನೆಯ ಅಗತ್ಯತೆ (3) ಶೈಕ್ಷಣಿಕ ಸವಾಲು, (4) ಸಾಧನಾ ಆತಂಕ, (5) ಅಂಕಗಳ ಪ್ರಾಮುಖ್ಯತೆ, (6) ಕಾರ್ಯಪ್ರಾಮುಖ್ಯತೆ, (7) ಭವಿಷ್ಯತ್ತಿನ ಗುರಿಗೆ ಶಾಲೆಯ ಅವಶ್ಯಕತೆ, (8) ಶಿಕ್ಷಣದ ಕುರಿತು ಮನೋಭಾವ, (9) ಕಾರ್ಯವಿಧಾನ, (10) ಶಿಕ್ಷಕರ ಕುರಿತು ಮನೋಭಾವ, (11) ಆಂತರಿಕ ಸಂಬಂಧಗಳು, (12) ವೈಯಕ್ತಿಕ ಒಲವು, (13) ಸಾಮಾನ್ಯಾಸಕ್ತಿ, (14) ನಾಟಕಾಭಿನಯ, (15) ಕ್ರೀಡೆ, ಹೀಗೆ 15 ವಿವಿಧ ಪರಿಕಲ್ಪನೆಗಳ ಆಧಾರದ ಮೇಲೆ 37 ಧನಾತ್ಮಕ ಪರೀಕ್ಷಾಂಶಗಳು, 13 ಋಣಾತ್ಮಕ ಪರೀಕ್ಷಾಂಶಗಳು, ಒಟ್ಟು 50 ಪರೀಕ್ಷಾಂಶಗಳನ್ನೊಳಗೊಂಡಂತೆ ಸಾಧನಾ ಅಭಿಪ್ರೇರಣಾ ಪರೀಕ್ಷಣವನ್ನು ರಚಿಸಲಾಗಿದೆ. ಈ ಪರೀಕ್ಷಾಂಶಗಳ ಮುಂದೆ ಯಾವಾಗಲೂ, ಪದೇಪದೇ, ಕೆಲವೊಮ್ಮೆ, ಯಾವಾಗಲಾದರೂ, ಸಾಧ್ಯವಿಲ್ಲ ಎಂಬ ಪದಗಳಿದ್ದು, ಈ ಪದಗಳಲ್ಲಿ ಸೂಕ್ತವಾದ ಯಾವುದಾದರೊಂದು ಪದದ ಮುಂದೆ (✓) ಗುರುತಿಸಬೇಕು. ಧನಾತ್ಮಕ ಪರೀಕ್ಷಾಂಶಗಳಿಗೆ 4,3,2,1,0, ಋಣಾತ್ಮಕ ಪರೀಕ್ಷಾಂಶಗಳಿಗೆ 0,1,2,3,4 ಅಂಕಗಳನ್ನು ನೀಡಲಾಗಿದೆ, ಈ ಎಲ್ಲಾ ಪರೀಕ್ಷಾಂಶಗಳ ಒಟ್ಟು ಅಂಕಗಳು 0 ಯಿಂದ 200ರವರೆಗೆ ಇರುವುದು.

**2. ಶೈಕ್ಷಣಿಕ ಸಾಧನಾ ಪರೀಕ್ಷಣ :** ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದಂತೆ ದತ್ತಾಂಶವನ್ನು ಸಂಗ್ರಹಿಸಲು ಸಂಶೋಧಕರು ಶೈಕ್ಷಣಿಕ ಸಾಧನಾ ಪರೀಕ್ಷಣವನ್ನು ರೂಪಿಸಿದ್ದು, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳನ್ನು ಆಯ್ಕೆ ಮಾಡಿಕೊಂಡು, ದ್ವಿತೀಯ ಸೆಮಿಸ್ಟರ್‌ಗೆ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಂಬಂಧಿಸಿದ ಘಟಕಗಳಿಂದ ವಸ್ತುನಿಷ್ಠ ಬಹು ಆಯ್ಕೆಯ ಪರೀಕ್ಷಣಗಳನ್ನು ವೈಜ್ಞಾನಿಕವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಗಣಿತ 8 ಘಟಕಗಳಿಂದ– 60 ಪರೀಕ್ಷಾಂಶಗಳು, ವಿಜ್ಞಾನ 11 ಘಟಕಗಳಿಂದ– 62 ಪರೀಕ್ಷಾಂಶಗಳು, ಸಮಾಜ ವಿಜ್ಞಾನ 15 ಘಟಕಗಳಿಂದ– 58 ಪರೀಕ್ಷಾಂಶಗಳನ್ನು ಆಯ್ಕೆ ಮಾಡಿಕೊಂಡು, ವಿಷಯ ಶಿಕ್ಷಕರಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಶಿಕ್ಷಣ ತಜ್ಞರಿಗೆ ಈ ಪರೀಕ್ಷಣಗಳನ್ನು ನೀಡಿ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆದು ವಿವಿಧ ಉದ್ದೇಶಗಳು, ವಿವಿಧ ಘಟಕಗಳು ಮತ್ತು ಪ್ರಶ್ನೆಗಳ ಕಠಿಣತೆಯ ಮಟ್ಟಕ್ಕೆ ಪ್ರಾಧಾನ್ಯತೆಯನ್ನು ನೀಡಿ ನೀಲ ನಕಾಶೆಯನ್ನು ರಚಿಸಿಕೊಂಡು, ಪ್ರಶ್ನೆ ಪತ್ರಿಕೆಯನ್ನು ತಯಾರಿಸಲಾಯಿತು. ಗಣಿತದಲ್ಲಿ 50 ಪರೀಕ್ಷಣಗಳು, ವಿಜ್ಞಾನದಲ್ಲಿ 50 ಪರೀಕ್ಷಣಗಳು ಹಾಗೂ ಸಮಾಜ ವಿಜ್ಞಾನದಲ್ಲಿ 50 ಪರೀಕ್ಷಣಗಳನ್ನು ಆಯ್ಕೆ ಮಾಡಿಕೊಂಡು, 3 ವಿಷಯಗಳಲ್ಲಿ ಪ್ರತ್ಯೇಕ ಪ್ರಶ್ನೆ ಪತ್ರಿಕೆಗಳನ್ನು ರಚಿಸಿಕೊಂಡು ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿಯ 100 ವಿದ್ಯಾರ್ಥಿನಿಯರಿಗೆ ಪರೀಕ್ಷಾರ್ಥ ಪ್ರಯೋಗ (Pilot Study) ವನ್ನು ನಡೆಸಲಾಯಿತು. ನಂತರ ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಿ, ಇಳಿಕೆ ಕ್ರಮದಲ್ಲಿ ಜೋಡಿಸಿಕೊಂಡು, ಪ್ರಶ್ನಾವಾರು ವಿಶ್ಲೇಷಣೆ ಮಾಡಿ, ಕ್ಲಿಷ್ಟತಾ ಸೂಚ್ಯಂಕ ಹಾಗೂ ವಿಬೇಧಕ ಸೂಚ್ಯಂಕಗಳನ್ನು ಕಂಡುಹಿಡಿಯಲಾಯಿತು. ಗಣಿತದಲ್ಲಿ 33 ಪರೀಕ್ಷಣ, ವಿಜ್ಞಾನದಲ್ಲಿ 33 ಪರೀಕ್ಷಣ, ಮತ್ತು ಸಮಾಜವಿಜ್ಞಾನದಲ್ಲಿ 34 ಪರೀಕ್ಷಣ, ಹೀಗೆ ಒಟ್ಟು 100 ಬಹು ಆಯ್ಕೆಯ ಪರೀಕ್ಷಣಗಳಿಗೆ 100 ಅಂಕಗಳಿಗೆ ಶೈಕ್ಷಣಿಕ ಸಾಧನಾ ಪರೀಕ್ಷಣವನ್ನು ರೂಪಿಸಿಕೊಂಡು, ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದಂತೆ ದತ್ತಾಂಶವನ್ನು ಸಂಗ್ರಹಿಸಲಾಗಿದೆ.

## ದತ್ತಾಂಶಗಳ ವಿಶ್ಲೇಷಣೆಗೆ ಬಳಸಿದ ಸಂಖ್ಯಾಶಾಸ್ತ್ರೀಯ ತಂತ್ರಗಳು

ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ ಸಾಧನಾ ಅಭಿಪ್ರೇರಣೆ ಹಾಗೂ ಶೈಕ್ಷಣಿಕ ಸಾಧನೆಯ ದತ್ತಾಂಶಗಳ ವಿಶ್ಲೇಷಣೆಗೆ (1) t ಪರೀಕ್ಷೆ (2) ಒಂದು ಮಾರ್ಗದ ಪ್ರಸರಣೆಯ ವಿಚಲನೆಯ ವಿಶ್ಲೇಷಣೆ (One way ANOVA) (3) ಕಾರ್ಲ್ ಪಿಯರ್ಸನ್‌ರವರ ಸಹಸಂಬಂಧ ಗುಣಾಂಕ ತಂತ್ರ (4) Tukeys Multiple posthoc procedures ವಿಧಾನಗಳನ್ನು ಬಳಸಿಕೊಂಡು ದತ್ತಾಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆ.

**ಪ್ರಾಕಲ್ಪನೆ 1 :** ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ಕೋಷ್ಟಕ – 1 : ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯ ಸರಾಸರಿ, ಮಾನಕ ವಿಚಲನೆ, ಪ್ರಮಾಣಿತ ದೋಷ, t ಮೌಲ್ಯವನ್ನು ಸೂಚಿಸುವ ಕೋಷ್ಟಕ.**

| ಪ್ರದೇಶ | N | ಸರಾಸರಿ | ಮಾನಕ ವಿಚಲನೆ | ಪ್ರಮಾಣಿತ ದೋಷ | t-ಮೌಲ್ಯ | p-ಮೌಲ್ಯ | ಮಹತ್ವಪೂರ್ಣತೆ |
|---|---|---|---|---|---|---|---|
| ಗ್ರಾಮೀಣ | 405 | 147.43 | 21.79 | 1.08 | 3.3327 | < 0.05 | S |
| ನಗರ | 107 | 155.48 | 23.76 | 2.30 | | | |

S = ಮಹತ್ವಪೂರ್ಣತೆ ಹೊಂದಿದೆ.

ಈ ಮೇಲ್ಕಂಡ ಕೋಷ್ಟಕದ ಪ್ರಕಾರ ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯ ಸರಾಸರಿ, ಮಾನಕವಿಚಲನೆ ಮತ್ತು ಪ್ರಮಾಣಿತ ದೋಷ, ಕ್ರಮವಾಗಿ 147.43, 21.79, 1.08 ಇದ್ದರೆ ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆ ಸರಾಸರಿ, ಮಾನಕವಿಚಲನೆ ಮತ್ತು ಪ್ರಮಾಣಿತ ದೋಷ, ಕ್ರಮವಾಗಿ 155.48, 23.76, 2.30 ಬಂದಿರುತ್ತದೆ. ಇವುಗಳಿಂದ ದೊರೆತ t ಮೌಲ್ಯ 3.3327 ಆಗಿದ್ದು ಇದು $p < 0.05$ ಮಹತ್ವಪೂರ್ಣತೆಯ ಮಟ್ಟಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿಯ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆ (147.43) ಗಿಂತ ನಗರ ಪ್ರದೇಶದ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆ (155.48) ಯು ಉತ್ತಮವಾಗಿದೆ.

- ತಿರುಮಲರಾವ್ (2005), ಮಂಜುಳ. ಡಿ (2013) ಇವರುಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಈ ಫಲಿತಾಂಶವನ್ನು ಧೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 2 :** ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ಕೋಷ್ಟಕ – 2 : ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯ ಸರಾಸರಿ, ಮಾನಕ ವಿಚಲನೆ, ಪ್ರಮಾಣಿತ ದೋಷ, t ಮೌಲ್ಯವನ್ನು ಸೂಚಿಸುವ ಕೋಷ್ಟಕ.**

| ಪ್ರದೇಶ | N | ಸರಾಸರಿ | ಮಾನಕ ವಿಚಲನೆ | ಪ್ರಮಾಣಿತ ದೋಷ | t-ಮೌಲ್ಯ | p-ಮೌಲ್ಯ | ಮಹತ್ವಪೂರ್ಣತೆ |
|---|---|---|---|---|---|---|---|
| ಗ್ರಾಮೀಣ | 405 | 66.66 | 14.99 | 0.74 | 4.9898 | < 0.05 | S |
| ನಗರ | 107 | 74.76 | 14.73 | 1.42 | | | |

S = ಮಹತ್ವಪೂರ್ಣತೆ ಹೊಂದಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಈ ಮೇಲ್ಕಂಡ ಕೋಷ್ಟಕದ ಪ್ರಕಾರ ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯ ಸರಾಸರಿ, ಮಾನಕವಿಚಲನೆ ಮತ್ತು ಪ್ರಮಾಣಿತ ದೋಷ, ಕ್ರಮವಾಗಿ 66.66, 14.99, 0.74 ಇದ್ದರೆ ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯ ಸರಾಸರಿ, ಮಾನಕವಿಚಲನೆ ಮತ್ತು ಪ್ರಮಾಣಿತ ದೋಷ, ಕ್ರಮವಾಗಿ 74.76, 14.73, 1.42 ಬಂದಿರುತ್ತದೆ. ಇವುಗಳಿಂದ ದೊರೆತ t ಮೌಲ್ಯ 4.9898 ಆಗಿದ್ದು ಇದು $P<0.05$ ಮಹತ್ವಪೂರ್ಣತೆಯ ಮಟ್ಟಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ (66.66) ಗಿಂತ ನಗರ ಪ್ರದೇಶದ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ(74.76) ಉತ್ತಮವಾಗಿದೆ.

- ತಿರುಮಲರಾವ್ (2005), ಮಂಜುಳ.ಡಿ (2013), ಇವರುಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಈ ಫಲಿತಾಂಶವನ್ನು ಧೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 3 :** ಕಡಿಮೆ, ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ಯಾವುದೇ ಗಣನೀಯ ವ್ಯತ್ಯಾಸ ಕಂಡುಬರುವುದಿಲ್ಲ .

**ಕೋಷ್ಟಕ – 3 : ಕಡಿಮೆ ಸಾಧಾರಣಾ ಹಾಗೂ ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತಗತಿ ವಿದ್ಯಾರ್ಥಿನಿಯರ ಶೈಕ್ಷಣೀಕ ಸಾಧನೆಯನ್ನು ಸೂಚಿಸುವ ಕೋಷ್ಟಕ.**

| ಪ್ರಸರಣದ ಮೂಲ (SV) | ಸ್ವತಂತ್ರದ ಪ್ರಮಾಣ (DF) | ವರ್ಗಗಳ ಮೊತ್ತ (SS) | ವರ್ಗಗಳ ಸರಾಸರಿ (MS) | F-ಮೌಲ್ಯ | P-ಮೌಲ್ಯ | ಮಹತ್ವಪೂರ್ಣತೆ |
|---|---|---|---|---|---|---|
| ಗುಂಪುಗಳ ಮಧ್ಯ | 2 | 49929.08 | 24964.54 | 183.1518 | <0.05 | S |
| ಗುಂಪುಗಳ ಒಳಗೆ | 509 | 69379.34 | 136.31 | | | |
| ಒಟ್ಟು | 511 | 119308.42 | | | | |

S = ಮಹತ್ವಪೂರ್ಣತೆ ಹೊಂದಿದೆ.

ಈ ಮೇಲ್ಕಂಡ ಕೋಷ್ಟಕದಲ್ಲಿ ಕಡಿಮೆ, ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವವರ ಶೈಕ್ಷಣಿಕ ಸಾಧನಾ ಮಟ್ಟ F= 183.1518 ಆಗಿದ್ದು, ಇದು P= < 0.05 ಮಹತ್ವಪೂರ್ಣತೆಯ ಮಟ್ಟಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ, ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಕಡಿಮೆ, ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಕಡಿಮೆ, ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವವರು ಕ್ರಮವಾಗಿ ಕಡಿಮೆ, ಸಾಧಾರಣ ಹಾಗೂ ಉನ್ನತ ಮಟ್ಟದ ಶೈಕ್ಷಣಿಕ ಸಾಧನೆ ಮಾಡಿರುವುದು ಕಂಡುಬಂದಿದೆ.

**ಕಡಿಮೆ ಸಾಧಾರಣಾ ಹಾಗೂ ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣೀಕ ಸಾಧನೆಯ ಹೋಲಿಕೆಯನ್ನು ಸೂಚಿಸುವ ಕೋಷ್ಟಕ.**

| ವಿವಿಧ ಮಟ್ಟಗಳು | ಕಡಿಮೆ ಮಟ್ಟದ ಸಾಧನಾ ಅಭಿಪ್ರೇರಣೆ | ಸಾಧಾರಣಾ ಮಟ್ಟದ ಸಾಧನಾ ಅಭಿಪ್ರೇರಣೆ | ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆ |
|---|---|---|---|
| N | 66 | 377 | 69 |
| ಸರಾಸರಿ | 50.48 | 67.74 | 88.75 |
| ಮಾನಕ ವಿಚಲನೆ | 15.22 | 11.92 | 3.60 |
| ಕಡಿಮೆ ಮಟ್ಟದ ಸಾಧನಾ ಅಭಿಪ್ರೇರಣೆ | – | | |
| ಸಾಧಾರಣಾ ಮಟ್ಟದ ಸಾಧನಾ ಅಭಿಪ್ರೇರಣೆ | P=0.0001* | – | |
| ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆ | P=0.0001* | P=0.0001* | – |

**$*P<0.05$**

- ಕಡಿಮೆ ಮತ್ತು ಸಾಧಾರಣ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯ ಅಂಕಗಳಲ್ಲಿ $p<0.05$ (5%) ಮಟ್ಟದಲ್ಲಿ ಮಹತ್ವಪೂರ್ಣ ವ್ಯತ್ಯಾಸವಿರುವುದು ಕಂಡುಬರುತ್ತದೆ.

ಅಂದರೆ ಕಡಿಮೆ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ(50.48)ಗಿಂತ ಸಾಧಾರಣ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ

ISSN : 2249-2429 ಸಂಶೋಧನೆ RNI REG.NO.KARKAN/2011/38712

ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ(67.74) ಉತ್ತಮವಾಗಿರುವುದು ಕಂಡುಬಂದಿದೆ.

- ಕಡಿಮೆ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯ ಅಂಕಗಳಲ್ಲಿ $p<0.05$ (5%) ಮಟ್ಟದಲ್ಲಿ ಮಹತ್ವಪೂರ್ಣ ವ್ಯತ್ಯಾಸವಿರುವುದು ಕಂಡುಬರುತ್ತದೆ.

  ಅಂದರೆ ಕಡಿಮೆ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ(50.48) ಗಿಂತ ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ(88.75) ಉತ್ತಮವಾಗಿರುವುದು ಕಂಡುಬಂದಿದೆ.

- ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯ ಅಂಕಗಳಲ್ಲಿ $p<0.05$ (5%) ಮಟ್ಟದಲ್ಲಿ ಮಹತ್ವಪೂರ್ಣ ವ್ಯತ್ಯಾಸವಿರುವುದು ಕಂಡುಬರುತ್ತದೆ.

  ಅಂದರೆ ಸಾಧಾರಣ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ(67.74)ಗಿಂತ ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ(88.75) ಉತ್ತಮವಾಗಿರುವುದು ಕಂಡುಬಂದಿದೆ.

- ತಿರುಮಲರಾವ್ (2005), ಮಂಜುಳ.ಡಿ (2013), ಇವರುಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಈ ಫಲಿತಾಂಶವನ್ನು ಧೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 4 :** ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವೆ ಯಾವುದೇ ಮಹತ್ವಪೂರ್ಣ ಸಹಸಂಬಂಧ ಕಂಡುಬರುವುದಿಲ್ಲ.

**ಕೋಷ್ಟಕ – 4 : ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ಸಹಸಂಬಂಧವನ್ನು ಸೂಚಿಸುವ ಕೋಷ್ಟಕ.**

| ಪ್ರತಿದರ್ಶಿ | ಶೈಕ್ಷಣಿಕ ಸಾಧನೆಯ ಅಂಕಗಳೊಂದಿಗೆ ಸಾಧನಾ ಅಭಿಪ್ರೇರಣೆಯ ಪರಸ್ಪರ ಸಹಸಂಬಂಧದ ಗುಣಾಂಕ | | |
|---|---|---|---|
| | r - ಮೌಲ್ಯ | t - ಮೌಲ್ಯ | P - ಮೌಲ್ಯ |
| ಸಾಧನಾ ಅಭಿಪ್ರೇರಣೆ | 0.7014 | 22.2258 | <0.05, S |

S = ಮಹತ್ವಪೂರ್ಣತೆ ಹೊಂದಿದೆ.

ಈ ಮೇಲಿನ ಕೋಷ್ಟಕದಲ್ಲಿ r ಮೌಲ್ಯವು ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ಸಹಸಂಬಂಧವನ್ನು ಪ್ರತಿನಿಧಿಸುತ್ತದೆ. r ಮೌಲ್ಯ 0.7014 ಆಗಿದ್ದು, ಇದರಿಂದ ದೊರೆತ t ಮೌಲ್ಯ 22.2258 ಆಗಿದೆ ಇದು $p< 0.05$ ಮಹತ್ವಪೂರ್ಣತೆಯ ಮಟ್ಟಕ್ಕಿಂತ ಕಡಿಮೆ ಇರುವುದರಿಂದ, ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ, ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಗೂ ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧ ಕಂಡುಬಂದಿದೆ.

ಸಾಧನಾ ಅಭಿಪ್ರೇರಣ ಮಟ್ಟವು ಹೆಚ್ಚಾದಂತೆ ಶೈಕ್ಷಣಿಕ ಸಾಧನಾ ಮಟ್ಟವು ಹೆಚ್ಚಾಗುತ್ತದೆ, ಸಾಧನಾ ಅಭಿಪ್ರೇರಣಾ ಮಟ್ಟವು ಕಡಿಮೆಯಾದಂತೆ, ಶೈಕ್ಷಣಿಕ ಸಾಧನಾ ಮಟ್ಟವು ಕಡಿಮೆಯಾಗುತ್ತದೆ.

- ಮೈಕೆಲ್ ಬೆನೋ (1994), ಶಿಖಾದಲ್ಲಾ (2014), ಇವರುಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಈ ಫಲಿತಾಂಶವನ್ನು ಧೃಢೀಕರಿಸಲಾಗಿದೆ.

**ಪ್ರಾಕಲ್ಪನೆ–5 :** ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಗೂ ಯಾವುದೇ ಮಹತ್ವಪೂರ್ಣ ಸಹಸಂಬಂಧ ಕಂಡುಬರುವುದಿಲ್ಲ.

**ಕೋಷ್ಟಕ – 5 : ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ಸಂಬಂಧವನ್ನು ಸೂಚಿಸುವ ಕೋಷ್ಟಕ.**

| ಪ್ರತಿದರ್ಶಿ | ಗ್ರಾಮೀಣ ಪ್ರದೇಶದ ಶಾಲೆಗಳ ಶೈಕ್ಷಣಿಕ ಸಾಧನೆಯ ಅಂಕಗಳೊಂದಿಗೆ ಸಾಧನಾ ಅಭಿಪ್ರೇರಣೆಯ ಪರಸ್ಪರ ಸಹಸಂಬಂಧದ ಗುಣಾಂಕ | | |
|---|---|---|---|
| | r - ಮೌಲ್ಯ | t - ಮೌಲ್ಯ | P - ಮೌಲ್ಯ |
| ಸಾಧನಾ ಅಭಿಪ್ರೇರಣೆ | 0.6831 | 18.7777 | <0.05, S |

S = ಮಹತ್ವಪೂರ್ಣತೆ ಹೊಂದಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಈ ಮೇಲಿನ ಕೋಷ್ಟಕದಲ್ಲಿ r ಮೌಲ್ಯವು ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ಸಹ ಸಂಬಂಧವನ್ನು ಪ್ರತಿನಿಧಿಸುತ್ತದೆ. r ಮೌಲ್ಯ 0.6831 ಆಗಿದ್ದು ಇದರಿಂದ ದೊರೆತ t ಮೌಲ್ಯ 18.7777 ಆಗಿದೆ ಇದು $p< 0.05$ ಮಹತ್ವಪೂರ್ಣತೆಯ ಮಟ್ಟಕ್ಕಿಂತ ಕಡಿಮೆ ಇರುವುದರಿಂದ, ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ, ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಗೂ ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧ ಕಂಡುಬರುತ್ತದೆ.

ಗ್ರಾಮೀಣ ಪ್ರದೇಶದ ಶಾಲೆಗಳ ಸಾಧನಾ ಅಭಿಪ್ರೇರಣೆಯ ಮಟ್ಟವು ಹೆಚ್ಚಾದಂತೆ ಶೈಕ್ಷಣಿಕ ಸಾಧನಾ ಮಟ್ಟವು ಹೆಚ್ಚಾಗುತ್ತದೆ, ಸಾಧನಾ ಅಭಿಪ್ರೇರಣೆಯ ಮಟ್ಟವು ಕಡಿಮೆಯಾದಂತೆ, ಶೈಕ್ಷಣಿಕ ಸಾಧನಾ ಮಟ್ಟವು ಕಡಿಮೆಯಾಗುತ್ತದೆ.

- ತಿರುಮಲರಾವ್ (2005), ಶಿಖಾದಲ್ಲಾ (2014) ಇವರುಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಈ ಫಲಿತಾಂಶವನ್ನು ಧೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 6 :** ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಗೂ ಯಾವುದೇ ಮಹತ್ವಪೂರ್ಣ ಸಹಸಂಬಂಧ ಕಂಡುಬರುವುದಿಲ್ಲ.

**ಕೋಷ್ಟಕ – 6 : ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ಸಂಬಂಧವನ್ನು ಸೂಚಿಸುವ ಕೋಷ್ಟಕ.**

| ಪ್ರತಿದರ್ಶಿ | ನಗರ ಪ್ರದೇಶದ ಶಾಲೆಗಳ ಶೈಕ್ಷಣಿಕ ಸಾಧನೆಯ ಅಂಕಗಳೊಂದಿಗೆ ಸಾಧನಾ ಅಭಿಪ್ರೇರಣೆಯ ಪರಸ್ಪರ ಸಹಸಂಬಂಧದ ಗುಣಾಂಕ | | |
|---|---|---|---|
| | **r - ಮೌಲ್ಯ** | **t - ಮೌಲ್ಯ** | **P - ಮೌಲ್ಯ** |
| **ಸಾಧನಾ ಅಭಿಪ್ರೇರಣೆ** | **0.7335** | **11.0578** | **<0.05,** S |

S = ಮಹತ್ವಪೂರ್ಣತೆ ಹೊಂದಿದೆ.

ಈ ಮೇಲಿನ ಕೋಷ್ಟಕದಲ್ಲಿ r ಮೌಲ್ಯವು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ಸಹಸಂಬಂಧವನ್ನು ಪ್ರತಿನಿಧಿಸುತ್ತದೆ. r ಮೌಲ್ಯ 0.7335 ಆಗಿದ್ದು ಇದರಿಂದ ದೊರೆತ t ಮೌಲ್ಯ 11.0578 ಆಗಿದೆ ಇದು $p< 0.05$ ಮಹತ್ವಪೂರ್ಣತೆಯ ಮಟ್ಟಕ್ಕಿಂತ ಕಡಿಮೆ ಇರುವುದರಿಂದ, ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ, ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಗೂ ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧ ಕಂಡುಬರುತ್ತದೆ.

ನಗರ ಪ್ರದೇಶದ ಶಾಲೆಗಳ ಸಾಧನಾ ಅಭಿಪ್ರೇರಣೆಯ ಮಟ್ಟವು ಹೆಚ್ಚಾದಂತೆ ಶೈಕ್ಷಣಿಕ ಸಾಧನಾ ಮಟ್ಟವು ಹೆಚ್ಚಾಗುತ್ತದೆ, ಸಾಧನಾ ಅಭಿಪ್ರೇರಣೆಯ ಮಟ್ಟವು ಕಡಿಮೆಯಾದಂತೆ, ಶೈಕ್ಷಣಿಕ ಸಾಧನಾ ಮಟ್ಟವು ಕಡಿಮೆಯಾಗುತ್ತದೆ.

- ಮೈಕೆಲ್ ಬೆನೋ (1994), ಶಿಖಾದಲ್ಲಾ (2014) ಇವರುಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಈ ಫಲಿತಾಂಶವನ್ನು ಧೃಢೀಕರಿಸಲಾಗಿದೆ.

## ಅಧ್ಯಯನದ ಫಲಿತಾಂಶಗಳು

1. ಪ್ರಸ್ತುತ ಸಂಶೋಧನೆಯಿಂದ ಗ್ರಾಮೀಣ ಹಾಗೂ ನಗರ ಪ್ರದೇಶದ ಕಸ್ತೂರಬಾ ಗಾಂಧಿ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣೆಯಲ್ಲಿ ವ್ಯತ್ಯಾಸ ಕಂಡುಬಂದಿದೆ. ಗ್ರಾಮೀಣ ಪ್ರದೇಶದ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣಾ ಮಟ್ಟಕ್ಕಿಂತ ನಗರ ಪ್ರದೇಶದ 8ನೇ ತರಗತಿ ವಿದ್ಯಾರ್ಥಿನಿಯರ ಸಾಧನಾ ಅಭಿಪ್ರೇರಣಾ ಮಟ್ಟವು ಉತ್ತಮವಾಗಿದೆ.

2. ಗ್ರಾಮೀಣ ಮತ್ತು ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ವ್ಯತ್ಯಾಸ ಕಂಡುಬಂದಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಗಿಂತ ನಗರ ಪ್ರದೇಶದ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯು ಉತ್ತಮವಾಗಿದೆ.

3. ಕಡಿಮೆ, ಸಾಧಾರಣ ಮತ್ತು ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆಯನ್ನು ಹೊಂದಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯಲ್ಲಿ ವ್ಯತ್ಯಾಸವಿರುವುದು ತಿಳಿದುಬಂದಿದೆ. ಅಂದರೆ ಕಡಿಮೆ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಗಿಂತ, ಸಾಧಾರಣ ಹಾಗೂ ಉನ್ನತ ಸಾಧನಾ ಅಭಿಪ್ರೇರಣೆ ಹೊಂದಿರುವ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯು ಉತ್ತಮವಾಗಿದೆ. ಸಾಧಾರಣ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಗಿಂತ, ಉನ್ನತ ಮಟ್ಟದ ಸಾಧನಾ ಅಭಿಪ್ರೇರಣೆ ಹೊಂದಿರುವ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆಯು ಉತ್ತಮವಾಗಿರುವುದು ಕಂಡುಬಂದಿದೆ.

4. ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆಯ ನಡುವೆ ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧ ಕಂಡುಬಂದಿದೆ.

5. ಗ್ರಾಮೀಣ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ

– 50 ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಪ್ರೌಢಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಪ್ರಶಿಕ್ಷಣಾರ್ಥಿಗಳಲ್ಲಿ ಪರಿಸರದ ಅರಿವಿನ ಮೇಲೆ ಸ್ವಯಂ ಕಲಿಕಾ ಸಾಮಗ್ರಿಗಳ ಪರಿಣಾಮಕಾರಿತ್ವದ ಕುರಿತು ಅಧ್ಯಯನ

✍ **ಶ್ರೀ ಜಿ. ಬಿ. ರಾಜಪ್ಪ,** ಸಹಾಯಕ ಪ್ರಾಧ್ಯಾಪಕರು, ಶ್ರೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ.

✍ **ಡಾ. ಎಂ. ಎಂ. ಪಟ್ಟಣಶೆಟ್ಟಿ,** ವಿಶ್ರಾಂತ ಪ್ರಾಧ್ಯಾಪಕರು ಹಾಗೂ ಸಂಶೋಧನಾ ಮಾರ್ಗದರ್ಶಕರು, ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.

## ಅಧ್ಯಯನದ ಸಾರಾಂಶ

ಪ್ರಸ್ತುತ ಅಧ್ಯಯನವು ಪ್ರೌಢಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಪ್ರಶಿಕ್ಷಣಾರ್ಥಿಗಳಲ್ಲಿ ಪರಿಸರದ ಅರಿವಿನ ಮೇಲೆ ಸ್ವಯಂ ಕಲಿಕಾ ಸಾಮಗ್ರಿಗಳ ಪರಿಣಾಮಕಾರಿತ್ವದ ಒಂದು ಅಧ್ಯಯನವಾಗಿದೆ. ಈ ಅಧ್ಯಯನಕ್ಕೆ 100 ಜನ ಪ್ರಶಿಕ್ಷಣಾರ್ಥಿಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಡಾ. ಕೆ. ಯಶೋಧರರವರು ರಚಿಸಿರುವ ಪರಿಸರದ ಅರಿವಿನ ಪರೀಕ್ಷೆ (EAWT) ಯನ್ನು ಬಳಸಿಕೊಂಡು ಪ್ರಶಿಕ್ಷಣಾರ್ಥಿಗಳಿಂದ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಸಂಶೋಧಕರು ಪರಿಸರ ಶಿಕ್ಷಣ ವಿಷಯದಲ್ಲಿ ಸ್ವಯಂ ಕಲಿಕಾ ಸಾಮಗ್ರಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಪ್ರಾಯೋಗಿಕ ವಿನ್ಯಾಸವನ್ನು ಅಳವಡಿಸಿಕೊಳ್ಳಲಾಗಿದೆ. ಎರಡು ಗುಂಪಿನ ವಿನ್ಯಾಸದ ವಿಧಾನದಲ್ಲಿ ಪ್ರಾಯೋಗಿಕ ಗುಂಪು ಮತ್ತು ನಿಯಂತ್ರಿತ ಗುಂಪುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಪ್ರಾಯೋಗಿಕ ಗುಂಪಿಗೆ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಬಳಸಿ ಬೋಧಿಸಿದರೆ ನಿಯಂತ್ರಿತ ಗುಂಪಿಗೆ ಸಂಪ್ರದಾಯಿಕ ವಿಧಾನದಲ್ಲಿ ಪರಿಸರ ಶಿಕ್ಷಣ ವಿಷಯವನ್ನು ಬೋಧಿಸಲಾಗಿದೆ. ಸಹಸಂಬಂಧದ ವಿನ್ಯಾಸದಿಂದ ಚಲಕಗಳ ನಡುವಿನ ಮಹತ್ವವನ್ನು ವಿಶ್ಲೇಷಿಸಲಾಗಿದೆ. ವಿವಿಧ ಗುಂಪುಗಳ ಮಧ್ಯದ ವ್ಯತ್ಯಾಸ ಕಂಡುಹಿಡಿಯಲು ಒಂದು ಮಾರ್ಗದ ಪ್ರಸರಣೆಯ ವಿಚಲನೆಯ ವಿಶ್ಲೇಷಣೆಯನ್ನು ಅಳವಡಿಸಿ 't' ಅಂಕವನ್ನು ಕಂಡುಕೊಳ್ಳಲಾಗಿದೆ. ಪ್ರಾಕಲ್ಪನೆಗಳನ್ನು ಉದ್ದೇಶಗಳಿಗನು ಗುಣವಾಗಿ ಪರೀಕ್ಷಿಸಲಾಗಿದೆ. ಸಂಶೋಧನೆಯಿಂದ ಕಂಡುಕೊಂಡ ಅಂಶಗಳನ್ನು ಪ್ರಶಿಕ್ಷಣಾರ್ಥಿಗಳಿಗೆ ಪರಿಸರ ಶಿಕ್ಷಣ ನೀಡುವಲ್ಲಿ ಬಳಸಿಕೊಳ್ಳಬಹುದಾಗಿದೆ. ಸ್ವಯಂ ಕಲಿಕಾ ಸಾಮಗ್ರಿಗಳ ಬಳಕೆಯಿಂದ ಪ್ರಶಿಕ್ಷಣಾರ್ಥಿಗಳಲ್ಲಿ ಪರಿಸರದ ಅರಿವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ ಎಂದು ಕಂಡುಬಂದಿದೆ. ಆದ್ದರಿಂದ ಸಂಪ್ರದಾಯಿಕ ವಿಧಾನಕ್ಕಿಂತ ಪ್ರಾಯೋಗಿಕ ವಿಧಾನದಲ್ಲಿ ಬಳಸಿದ ಸ್ವಯಂ ಕಲಿಕಾ ಸಾಮಗ್ರಿಗಳು ಪರಿಣಾಮಕಾರಿಯಾಗಿವೆ ಎಂದು ತಿಳಿದು ಬರುತ್ತದೆ.

## ಪೀಠಿಕೆ

ಮಾನವ ಸ್ವಾಭಾವಿಕ ಪರಿಸರದ ಒಂದು ಭಾಗವಾಗಿದ್ದು, ಕಳೆದ ಎರಡು ದಶಕಗಳಿಂದ ಪರಿಸರ ಮತ್ತು ಮಾನವನ ನಡುವಿನ ಸಂಬಂಧವು ತೀವ್ರತರವಾಗಿ ಬದಲಾವಣೆಯಾಗಿದೆ. ಪರಿಸರವನ್ನು ಮಾನವ ಇಂದು ಕಸದ ಬುಟ್ಟಿಯನ್ನಾಗಿ ಬಳಸಿಕೊಳ್ಳುತ್ತಿದ್ದಾನೆ. ಉತ್ಪತ್ತಿಯಾಗುವ ಎಲ್ಲ ಅನುಪಯುಕ್ತ ವಸ್ತುಗಳನ್ನು ಪರಿಸರಕ್ಕೆ ಸೇರ್ಪಡೆ ಮಾಡುವ ಚಟುವಟಿಕೆಗಳು ಮಾನವನಿಂದ ನಿರಂತರವಾಗಿ ನಡೆಯುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮಾನವ ನೈಸರ್ಗಿಕ ಸಂಪನ್ಮೂಲಗಳನ್ನು ನಿರ್ದಯವಾಗಿ ಬಳಸಿಕೊಳ್ಳುವುದರೊಂದಿಗೆ ಪರಿಸರದ ಮಾಲಿನ್ಯಕ್ಕೆ ಕಾರಣನಾಗಿದ್ದಾನೆ.

ಪರಿಸರ ಶಿಕ್ಷಣದ ತತ್ವಗಳು ಜನ ಸಾಮಾನ್ಯರಲ್ಲಿ, ಪರಿಸರ ಸಂಬಂಧಿತ ಸಮಸ್ಯೆಗಳು ಮತ್ತು ಪರಿಸರದ ಅಪಾಯಗಳಿಂದ ಉಂಟಾಗುವ ಮಾಲಿನ್ಯ ಕುರಿತು ತಿಳಿವಳಿಕೆಯನ್ನು ಹೊಂದುವಂತೆ ಮಾಡುತ್ತಿವೆ. ಶೈಕ್ಷಣಿಕ ಪ್ರಕ್ರಿಯೆಗಳು ಮಾನವನಿಗೆ ಅವನ ಸ್ವಂತ ಪರಿಸರವನ್ನು ರಕ್ಷಣೆ ಮತ್ತು ಸಂರಕ್ಷಣೆ ಮಾಡುವಲ್ಲಿ ಪರಿಣಾಮಕಾರಿಯಾದ ಒಪ್ಪಂದವನ್ನುಂಟು ಮಾಡುತ್ತಿದೆ ಹಾಗೂ ಪರಿಸರದ ಸಮಸ್ಯೆಗಳ ಸೂಕ್ಷ್ಮತೆಗಳನ್ನು ಅರ್ಥೈಸಿಕೊಳ್ಳುವಂತೆ ಮಾಡುತ್ತಿವೆ. ಇಂದು ಭೂಮಿಯನ್ನು ಭವಿಷ್ಯದ ಪೀಳಿಗೆಗಾಗಿ ರಕ್ಷಿಸಬೇಕಾಗಿದೆ. ಆದ್ದರಿಂದ ಮಾನವ ವೈಯಕ್ತಿಕವಾಗಿ ಹಾಗೂ ಸಾಮಾಜಿಕ ಜವಾಬ್ದಾರಿಯಿಂದ, ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವುದು ಅತಿ ಅಗತ್ಯವಿರುವುದು ಕಂಡುಬರುತ್ತದೆ.

ಪರಿಸರ ಶಿಕ್ಷಣದಲ್ಲಿ ನೀಡುವ ಮುಂಜಾಗ್ರತ ಕ್ರಮಗಳನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಶಕ್ತಿ ಶಿಕ್ಷಣಕ್ಕೆ ಇದೆ. ಶಿಕ್ಷಣದ ಮೂಲಕ ಪರಿಸರದ ಉಳಿವಿಗೆ, ಅನೇಕ ಚಟುವಟಿಕೆಗಳನ್ನು ರೂಪಿಸಬೇಕಾಗಿದೆ ಮತ್ತು ಪರಿಸರದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ಪ್ರಯತ್ನ ಮಾಡಬೇಕಾಗಿದೆ. ಪರಿಸರದ ಸಮಸ್ಯೆಯು ವಿಶ್ವ ಸಮಸ್ಯೆಯಾಗಿರುವುದರಿಂದ, ಶಿಕ್ಷಣದ ಮೂಲಕ ಇದಕ್ಕೆ ಪರಿಹಾರ ಕಂಡುಕೊಳ್ಳಲು ಹಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ವಿದ್ಯಾರ್ಥಿಗಳು ಪರಿಸರ ಶಿಕ್ಷಣದ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಅಭ್ಯಸಿಸುವುದರಿಂದ ಉತ್ತಮ ಪರಿಸರದ ಅರಿವನ್ನು ಹೊಂದಲು ಸಾಧ್ಯವಾಗುತ್ತದೆ.

## ಅಧ್ಯಯನದ ಉದ್ದೇಶಗಳು

1. ಪ್ರಶಿಕ್ಷಣಾರ್ಥಿಗಳಲ್ಲಿ ಪರಿಸರದ ಅರಿವನ್ನು ತಿಳಿಯುವುದು.
2. ಪ್ರಶಿಕ್ಷಣಾರ್ಥಿಗಳಲ್ಲಿ ಸ್ವಯಂ ಕಲಿಕಾ ಸಾಮಗ್ರಿಗಳ ಪ್ರಭಾವದಿಂದ ಪರಿಸರದ ಅರಿವಿನಲ್ಲಾಗುವ ಬದಲಾವಣೆ ತಿಳಿಯುವುದು.

## ಅಧ್ಯಯನದ ಚಲಕಗಳು

1. ಸ್ವತಂತ್ರ ಚರಾಂಶ : ಸ್ವಯಂ ಕಲಿಕಾ ಸಾಮಗ್ರಿ (ಪರಿಸರ ಶಿಕ್ಷಣ)
2. ಪರತಂತ್ರ ಚರಾಂಶ : ಪರಿಸರದ ಅರಿವು

## ಅಧ್ಯಯನದ ಪ್ರಾಕಲ್ಪನೆಗಳು

ಅಧ್ಯಯನದ ಉದ್ದೇಶಗಳನ್ನಾಧರಿಸಿ ಪ್ರಾಕಲ್ಪನೆಗಳನ್ನು ರಚಿಸಲಾಗಿದೆ.

1. ಪರಿಸರ ಅರಿವಿನ ಪೂರ್ವಭಾವಿ ಪರೀಕ್ಷೆಯ ಅಂಕಗಳಲ್ಲಿ ಪ್ರಾಯೋಗಿಕ ಗುಂಪು ಹಾಗೂ ನಿಯಂತ್ರಿತ ಗುಂಪುಗಳ ಮಧ್ಯೆ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ISSN : 2249-2429 ಸಂಶೋಧನೆ RNI REG.NO.KARKAN/2011/38712

2. ಪರಿಸರ ಅರಿವಿನ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಪ್ರಾಯೋಗಿಕ ಗುಂಪು ಹಾಗೂ ನಿಯಂತ್ರಿತ ಗುಂಪುಗಳ ಮಧ್ಯೆ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.
3. ಪರಿಸರ ಅರಿವಿನ ನಿಯಂತ್ರಿತ ಗುಂಪಿನ ತರಬೇತಿ ಪೂರ್ವ ಹಾಗೂ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.
4. ಪರಿಸರ ಅರಿವಿನ ಪ್ರಾಯೋಗಿಕ ಗುಂಪಿನ ತರಬೇತಿ ಪೂರ್ವ ಹಾಗೂ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.
5. ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳ ಜೊತೆ ಬದಲಾವಣೆಯಾದ ಸಂಬಂಧದ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.
6. ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳಲ್ಲಿ ನಿಯಂತ್ರಿತ ಗುಂಪು ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

## ಸಂಶೋಧನೆಯ ವಿನ್ಯಾಸ

ಪ್ರಸ್ತುತ ಅಧ್ಯಯನಕ್ಕೆ ಪ್ರಾಯೋಗಿಕ ವಿಧಾನವನ್ನು ಅಳವಡಿಸಿ ಕೊಳ್ಳಲಾಗಿದೆ. ಪ್ರಾಯೋಗಿಕ ವಿಧಾನದಲ್ಲಿ ಎರಡು ಗುಂಪಿನ ವಿನ್ಯಾಸವನ್ನು ಬಳಸಿಕೊಳ್ಳಲಾಗಿದೆ. ಪ್ರಾಯೋಗಿಕ ಗುಂಪು, ನಿಯಂತ್ರಿತ ಗುಂಪುಗಳನ್ನು ಸರಳ ಯಾದೃಚ್ಛಿಕ ವಿಧಾನದಲ್ಲಿ ಆಯ್ಕೆಮಾಡಿಕೊಳ್ಳಲಾಗಿದೆ.

**ಸಂಶೋಧನೆಯ ವಿನ್ಯಾಸ**

| **ನಿಯಂತ್ರಿತ ಗುಂಪು** | **ಪ್ರಾಯೋಗಿಕ ಗುಂಪು** |
|---|---|
| 1. ಪೂರ್ವ ಪರೀಕ್ಷೆ (ಪರಿಸರದ ಅರಿವು–EAWT) | 1. ಪೂರ್ವ ಪರೀಕ್ಷೆ (ಪರಿಸರದ ಅರಿವು–EAWT) |
| 2. ಸಂಪ್ರದಾಯಿಕ ವಿಧಾನದ ಮೂಲಕ ಬೋಧನೆ | 2. ಸ್ವಯಂ ಕಲಿಕಾ ಸಾಮಗ್ರಿಗಳ ಮೂಲಕ ಬೋಧನೆ |
| 3. ಅಂತಿಮ ಪರೀಕ್ಷೆ (ಪರಿಸರದ ಅರಿವು–EAWT) | 3. ಅಂತಿಮ ಪರೀಕ್ಷೆ (ಪರಿಸರದ ಅರಿವು–EAWT) |

## ಪ್ರತಿದರ್ಶದ ಆಯ್ಕೆ

ಚಿತ್ರದುರ್ಗ ನಗರದಲ್ಲಿ ಒಟ್ಟು 10 ಶಿಕ್ಷಣ ಮಹಾವಿದ್ಯಾಲಯಗಳಿದ್ದು, ಅದರಲ್ಲಿ ಒಂದು ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ. ಒಂದು ಅನುದಾನಿತ ಶಿಕ್ಷಣ ಮಹಾವಿದ್ಯಾಲಯ ಹಾಗೂ 8 ಅನುಧಾನರಹಿತ ಶಿಕ್ಷಣ ಮಹಾವಿದ್ಯಾಲಯುಗಳಿವೆ. ಇದರಲ್ಲಿ ಆಯ್ದ 2 ಶಿಕ್ಷಣ ಮಹಾವಿದ್ಯಾಲಯಗಳ ಪ್ರಶಿಕ್ಷಣಾರ್ಥಿಗಳನ್ನು ಯಾದೃಚ್ಛಿಕವಾಗಿ ದತ್ತಾಂಶಗಳ ಸಂಗ್ರಹಣೆಗಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಅದರಲ್ಲಿ ಒಂದು ಗುಂಪನ್ನು ಪ್ರಾಯೋಗಿಕ ಗುಂಪೆಂದು. ಇನ್ನೊಂದನ್ನು ನಿಯಂತ್ರಿತ ಗುಂಪೆಂದು ಪರಿಗಣಿಸಲಾಗಿದೆ. ಪ್ರತಿ ಗುಂಪಿನಲ್ಲಿ ತಲಾ 50 ಪ್ರಶಿಕ್ಷಣಾರ್ಥಿಗಳಿರುತ್ತಾರೆ.

## ಸಾಧನಗಳ ಬಳಕೆ

ದತ್ತಾಂಶ ಸಂಗ್ರಹಿಸಲು ಈ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಸಾಧನಗಳು ಈ ಕೆಳಗಿನಂತಿವೆ.

**1. ಪರಿಸರದ ಅರಿವಿನ ಪರೀಕ್ಷೆ (EAWT) :** ಡಾ. ಕೆ. ಯಶೋಧರ ಇವರು 2003ರಲ್ಲಿ ರಚಿಸಿರುವ ಪರಿಸರದ ಅರಿವಿನ ಪರೀಕ್ಷೆಯು 10 ಕ್ಷೇತ್ರಗಳನ್ನು ಒಳಗೊಂಡಿದ್ದು ಅವುಗಳೆಂದರೆ (1) ಪರಿಸರದ ಪರಿಕಲ್ಪನೆಗಳು, (2) ಪರಿಸರದ ಮಾಲಿನ್ಯ ಮತ್ತು ನಿಯಂತ್ರಣ, (3) ಜನಸಂಖ್ಯೆ (4) ಆರೋಗ್ಯ, (5) ಸ್ವಚ್ಛತೆ (6) ಪ್ರಾಣಿಗಳ ಪ್ರಪಂಚ, (7) ಜೀವಿವೈವಿದ್ಯತೆ, (8) ಶಕ್ತಿ, (9) ಪರಿಸರ ಸಂಬಂಧಿತ ಕಾಯಿದೆಗಳು, (10) ಸುಸ್ಥಿರ ಅಭಿವೃದ್ಧಿ ಇವುಗಳನ್ನಾಧರಿಸಿ 36 ಬಹು ಆಯ್ಕೆಯ ಪ್ರಶ್ನೆಗಳನ್ನು ರಚಿಸಿದ್ದಾರೆ. ಪ್ರತಿಯೊಂದು ಪ್ರಶ್ನೆಗೂ 4 ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಪ್ರತಿ ಪ್ರಶ್ನೆಯ ಸರಿ ಉತ್ತರಕ್ಕೆ ಒಂದು ಅಂಕವನ್ನು ನೀಡಲಾಗುವುದು.

**2. ಸ್ವಯಂ ಕಲಿಕಾ ಸಾಮಗ್ರಿಗಳು :** ಸಂಶೋಧಕರು ಪರಿಸರ ಶಿಕ್ಷಣ ವಿಷಯದಲ್ಲಿ ಸ್ವಯಂ ಕಲಿಕಾ ಸಾಮಗ್ರಿಗಳನ್ನು ರಚಿಸಲು ಬಿ.ಇಡಿ. ಹಂತದ ಪರಿಸರ ಶಿಕ್ಷಣ ವಿಷಯದ ಪಠ್ಯಕ್ರಮದಲ್ಲಿನ 4ನೇ ಘಟಕ ಪರಿಸರ ಶಿಕ್ಷಣ ಮತ್ತು 5ನೇ ಘಟಕ ಪರಿಸರ ಶಿಕ್ಷಣದಲ್ಲಿ ಮೌಲ್ಯಮಾಪನ ಈ ಎರಡು ಘಟಕಗಳನ್ನು ಅಭ್ಯಸಿಸಿದ ನಂತರ ಪರಿಸರ ಶಿಕ್ಷಣದ ಪಠ್ಯ ಪುಸ್ತಕಗಳು, ವಿಶ್ವಕೋಶ ಹಾಗೂ ನಿಯತಕಾಲಿಕೆಗಳನ್ನು ಪರಾಮರ್ಶಿಸಿದ ನಂತರ ಸ್ವಯಂ ಕಲಿಕಾ ಸಾಮಗ್ರಿಗಳನ್ನು ರಚಿಸುವಾಗ ಗಮನದಲ್ಲಿರಿಸಿಕೊಂಡ ಅಂಶಗಳು ಪ್ರತಿ ಮಾಡ್ಯೂಲ್‌ಗಳಿಗೆ ಒಂದು ಚಿಕ್ಕ ಶೀರ್ೋನಾಮೆ ನೀಡುವುದು. ಉದ್ದೇಶಗಳನ್ನು ರಚಿಸುವುದು. ಪರಿಕಲ್ಪನೆಗಳನ್ನು ನಿರ್ಧರಿಸುವುದು. ಸ್ವಯಂ ಮೌಲ್ಯಮಾಪನ ಪ್ರಶ್ನೆಗಳನ್ನು ರಚಿಸುವುದು ಮತ್ತು ಹೆಚ್ಚಿನ ಮಾಹಿತಿಗಾಗಿ ಪರಾಮರ್ಶನ ಗ್ರಂಥಗಳನ್ನು ಸೂಚಿಸುವುದು.

ಸಂಶೋಧಕರು ಈ ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಪರಿಸರ ಶಿಕ್ಷಣ ವಿಷಯದಲ್ಲಿ ರಚಿಸಿದ ನಂತರ ವಿಷಯ ತಜ್ಞರ ಅಭಿಪ್ರಾಯವನ್ನು ಪಡೆದುಕೊಂಡು ಸ್ವಯಂ ಕಲಿಕಾ ಸಾಮಗ್ರಿಗಳನ್ನು ಅಂತಿಮವಾಗಿ ಸಿದ್ದಪಡಿಸಿದ ನಂತರ ಸಂಶೋಧನೆಯಲ್ಲಿ ಬಳಸಿಕೊಂಡಿದ್ದಾರೆ.

## ದತ್ತಾಂಶಗಳ ಸಂಗ್ರಹಣೆ

ಪ್ರಾಯೋಗಿಕ ಹಾಗೂ ನಿಯಂತ್ರಿತ ಗುಂಪಿನ ಪ್ರಶಿಕ್ಷಣಾರ್ಥಿಗಳಿಗೆ ಆರಂಭದಲ್ಲಿ ಡಾ. ಕೆ. ಯಶೋಧರರವರು 2003ರಲ್ಲಿ ರಚಿಸಿರುವ ಪರಿಸರದ ಅರಿವಿನ ಪರೀಕ್ಷೆಯನ್ನು ನೀಡಿ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ನಂತರ ಪ್ರಾಯೋಗಿಕ ಗುಂಪಿನ ಪ್ರಶಿಕ್ಷಣಾರ್ಥಿಗಳಿಗೆ ಸಂಶೋಧಕರು ಪರಿಸರ ಶಿಕ್ಷಣ ವಿಷಯದಲ್ಲಿ ರಚಿಸಿರುವ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಬಳಸಿ ಬೋಧಿಸಲಾಗಿದೆ. ನಿಯಂತ್ರಿತ ಗುಂಪಿನ ಪ್ರಶಿಕ್ಷಣಾರ್ಥಿಗಳಿಗೆ ಸಂಪ್ರದಾಯಿಕ ವಿಧಾನದ ಮೂಲಕ ಪರಿಸರ ಶಿಕ್ಷಣ ವಿಷಯವನ್ನು ಬೋಧಿಸಲಾಗಿದೆ. ನಂತರ ಅಂತಿಮ ಪರೀಕ್ಷೆಯನ್ನು ಎರಡು ಗುಂಪಿನ ಪ್ರಶಿಕ್ಷಣಾರ್ಥಿಗಳಿಗೆ ಪರಿಸರದ ಅರಿವಿನ ಪರೀಕ್ಷೆಯನ್ನು ನೀಡಿ ದತ್ತಾಂಶಗಳನ್ನು ಪಡೆಯಲಾಗಿದೆ. ನಂತರ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

## ದತ್ತಾಂಶಗಳ ವಿಶ್ಲೇಷಣೆ

ಸಂಗ್ರಹಿಸಿದ ದತ್ತಾಂಶಗಳನ್ನು ವರ್ಗೀಕರಿಸಿ ಅಂಕಗಳನ್ನು ನಿರ್ಧರಿಸಿದ ನಂತರ ಸರಾಸರಿ, ಮಾನಕ ವಿಚಲನೆ, ಚಲಕಗಳ ನಡುವಿನ ಸಹಸಂಬಂಧ ಗುಣಾಂಕ (r) ಹಾಗೂ ಮಾನಕ ವಿಚಲನೆಯ ಮೌಲ್ಯ ಕಂಡುಹಿಡಿದು ನಂತರ 't' ಪರೀಕ್ಷೆಗೆ ಒಳಪಡಿಸಲಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಪ್ರಾಕಲ್ಪನೆ – 1 :** ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪೂರ್ವಭಾವಿ ಪರೀಕ್ಷೆಯ ಅಂಕಗಳಲ್ಲಿ ಪ್ರಾಯೋಗಿಕ ಗುಂಪು ಹಾಗೂ ನಿಯಂತ್ರಿತ ಗುಂಪುಗಳ ಮಧ್ಯೆ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ಈ ಪ್ರಾಕಲ್ಪನೆಯನ್ನು ಸಾಧಿಸಲು ಸ್ವತಂತ್ರ 't' ಪರೀಕ್ಷೆಯನ್ನು ಅನ್ವಯಿಸಿದಾಗ ಪ್ರಸ್ತುತ ಫಲಿತಾಂಶವನ್ನು ಕೆಳಗಿನ ಕೋಷ್ಟಕ 1 ರಲ್ಲಿ ಅವಲೋಕಿಸಬಹುದು.

**ಕೋಷ್ಟಕ – 1 : ಸ್ವತಂತ್ರ 't' ಪರೀಕ್ಷೆಯ ಫಲಿತಾಂಶಗಳ ನಡುವೆ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪಿನ ಪೂರ್ವ ಪರೀಕ್ಷೆಯ ಅಂಕಗಳ ನಡುವಿನ ವ್ಯತ್ಯಾಸ.**

| ಗುಂಪುಗಳು | N | ಸರಾಸರಿ | ಮಾನಕ ವಿಚಲನೆ | ಪ್ರಮಾಣಿತ ದೋಷ | t-ಮೌಲ್ಯ | p-ಮೌಲ್ಯ | ನಿರ್ಣಯ |
|---|---|---|---|---|---|---|---|
| ನಿಯಂತ್ರಿತ ಗುಂಪು | 50 | 20.16 | 3.84 | 0.54 | 1.5051 | 0.1355 | NS |
| ಪ್ರಾಯೋಗಿಕ ಗುಂಪು | 50 | 19.04 | 3.60 | 0.51 | | | |

N. S. : Non Significant

ಈ ಮೇಲಿನ ಕೋಷ್ಟಕದ ಫಲಿತಾಂಶವನ್ನು ಅವಲೋಕಿಸಿದಾಗ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪೂರ್ವ ಪರೀಕ್ಷೆಯ ಅಂಕಗಳಲ್ಲಿ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪುಗಳಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ. ಸರಾಸರಿ ಹಾಗೂ ಮಾನಕ ವಿಚಲನೆಗಳು ಕ್ರಮವಾಗಿ ನಿಯಂತ್ರಿತ ಗುಂಪಿನಲ್ಲಿ 20.16 ಹಾಗೂ 3.84 ಇದ್ದರೆ ಪ್ರಾಯೋಗಿಕ ಗುಂಪಿನಲ್ಲಿ 19.04 ಹಾಗೂ 3.60 ಆಗಿದೆ ಮತ್ತು ಕ್ರಮವಾಗಿ ಪ್ರಾಮಾಣಿತ ದೋಷ ನಿಯಂತ್ರಿತ ಗುಂಪಿನಲ್ಲಿ 0.54 ಹಾಗೂ ಪ್ರಾಯೋಗಿಕ ಗುಂಪಿನಲ್ಲಿ 0.51 ಆಗಿದ್ದು. ಇದು ಎರಡು ಗುಂಪಿನ ನಡುವೆ ಸಮವಾಗಿರುವುದು ಕಂಡು ಬಂದಿದೆ. ದೊರೆತ 't' ಮೌಲ್ಯ 1.5051 ಆಗಿದ್ದು, ಇದು 0.05 ಮಹತ್ವಪೂರ್ಣತೆಯ ಮಟ್ಟದಲ್ಲಿ ಇಲ್ಲದಿರುವುದರಿಂದ ಈ ಶೂನ್ಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ. ಪರ್ಯಾಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ.

ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪಿನ ಪೂರ್ವಪರೀಕ್ಷೆಯ ಅಂಕಗಳು ಸಮವಾಗಿರುವುದು ಕಂಡುಬಂದಿದೆ.

ದಯಾನಂದ ಡಿ. ಭಟ್ (2002), ನೀಲಮ್ ಧಾಮಾಜಿ (2010), ಬಿಜು ಕೆ. (2014) ಮತ್ತು ರೂಪಿಂದರ್ ಕೌಲ್ (2015) ಈ ಅಧ್ಯಯನಗಳಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ದೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 2 :** ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಪ್ರಾಯೋಗಿಕ ಮತ್ತು ನಿಯಂತ್ರಿತ ಗುಂಪುಗಳ ಮಧ್ಯೆ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ಈ ಪ್ರಾಕಲ್ಪನೆಯನ್ನು ಸಾಧಿಸಲು ಸ್ವತಂತ್ರ 't' ಪರೀಕ್ಷೆಯನ್ನು ಅನ್ವಯಿಸಿದಾಗ ಪ್ರಸ್ತುತ ಫಲಿತಾಂಶವನ್ನು ಕೆಳಗಿನ ಕೋಷ್ಟಕ–2ರಲ್ಲಿ ಅವಲೋಕಿಸಬಹುದು.

**ಕೋಷ್ಟಕ – 2 : ಸ್ವತಂತ್ರ 't' ಪರೀಕ್ಷೆಯ ಫಲಿತಾಂಶಗಳ ನಡುವೆ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪಿನ ಅಂತಿಮ ಪರೀಕ್ಷೆಯ ಅಂಕಗಳ ಜೊತೆ ಸಂಬಂಧ**

| ಗುಂಪುಗಳು | N | ಸರಾಸರಿ | ಮಾನಕ ವಿಚಲನೆ | ಪ್ರಮಾಣಿತ ದೋಷ | t-ಮೌಲ್ಯ | p-ಮೌಲ್ಯ | ನಿರ್ಣಯ |
|---|---|---|---|---|---|---|---|
| ನಿಯಂತ್ರಿತ ಗುಂಪು | 50 | 20.46 | 3.71 | 0.52 | 16.1521 | 0.0001* | S |
| ಪ್ರಾಯೋಗಿಕ ಗುಂಪು | 50 | 31.34 | 2.99 | 0.42 | | | |

S. : Significant

ಈ ಮೇಲಿನ ಕೋಷ್ಟಕದ ಫಲಿತಾಂಶವನ್ನು ಅವಲೋಕಿಸಿದಾಗ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಪ್ರಾಯೋಗಿಕ ಗುಂಪಿನ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಮಹತ್ವ ಪೂರ್ಣ ವ್ಯತ್ಯಾಸವಿರುವುದು ಕಂಡುಬರುತ್ತದೆ. ಸರಾಸರಿ ಹಾಗೂ ಮಾನಕ ವಿಚಲನೆಗಳು ಕ್ರಮವಾಗಿ ನಿಯಂತ್ರಿತ ಗುಂಪಿನಲ್ಲಿ 20.46 ಹಾಗೂ 3.71 ಇದ್ದರೆ. ಪ್ರಾಯೋಗಿಕ ಗುಂಪಿನಲ್ಲಿ 31.34 ಹಾಗೂ 2.99 ಆಗಿದೆ ಮತ್ತು ಕ್ರಮವಾಗಿ ಪ್ರಾಮಾಣಿತ ದೋಷ ನಿಯಂತ್ರಿತ ಗುಂಪಿನಲ್ಲಿ 0.52, ಪ್ರಾಯೋಗಿಕ ಗುಂಪಿನಲ್ಲಿ 0.42 ಇದೆ. ಇದು ಎರಡು ಗುಂಪುಗಳ ನಡುವೆ ವ್ಯತ್ಯಾಸವಾಗಿರುವುದು ಕಂಡುಬಂದಿದೆ. ದೊರೆತ 't' ಮೌಲ್ಯ 16.1521 ಆಗಿದ್ದು, ಇದು 0.05 ಮಹತ್ವಪೂರ್ಣತೆಯ ಮಟ್ಟದಲ್ಲಿ ಶೇಕಡ 5 ಕ್ಕಿಂತ ಹೆಚ್ಚಾಗಿದೆ. ಆದ್ದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ ಹಾಗೂ ಪರ್ಯಾಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪಿನ ಅಂತಿಮ ಪರೀಕ್ಷೆಯ ಅಂಕಗಳ ನಡುವೆ ವ್ಯತ್ಯಾಸವಿದೆ. ಇನ್ನೊಂದು ಅರ್ಥದಲ್ಲಿ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಅಂತಿಮ ಪರೀಕ್ಷೆಯಲ್ಲಿ ನಿಯಂತ್ರಿತ ಗುಂಪಿಗೆ ಹೋಲಿಸಿದರೆ ಪ್ರಾಯೋಗಿಕ ಗುಂಪು ಹೆಚ್ಚು ಮಹತ್ವಪೂರ್ಣ ಅಂಕಗಳನ್ನು ಹೊಂದಿರುವುದು ಕಂಡುಬಂದಿದೆ.

ದಯಾನಂದ ಡಿ. ಭಟ್ (2002), ನೀಲಮ್ ಧಾಮಾಜಿ (2010) ಮತ್ತು ಬಿಜುಕೆ. (2014) ಈ ಅಧ್ಯಯನಗಳಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ದೃಢೀಕರಿಸಲಾಗಿದೆ.

**ಪ್ರಾಕಲ್ಪನೆ –3 :** ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಗುಂಪಿನ ತರಬೇತಿ ಪೂರ್ವ ಹಾಗೂ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ಈ ಪ್ರಾಕಲ್ಪನೆಯನ್ನು ಸಾಧಿಸಲು ಸ್ವತಂತ್ರ 't' ಪರೀಕ್ಷೆಯನ್ನು ಅನ್ವಯಿಸಿದಾಗ ಪ್ರಸ್ತುತ ಫಲಿತಾಂಶವನ್ನು ಕೆಳಗಿನ ಕೋಷ್ಟಕ–3ರಲ್ಲಿ ಗಮನಿಸಬಹುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ – 3 : ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಗುಂಪಿನ ತರಬೇತಿ ಪೂರ್ವ ಹಾಗೂ ಅಂತಿಮ ಪರೀಕ್ಷೆಯ ಅಂಕಗಳ ನಡುವಿನ ಹೋಲಿಕೆ.**

| ಗುಂಪುಗಳು | N | ಸರಾಸರಿ | ಮಾನಕ ವಿಚಲನೆ | ಸರಾಸರಿ ವ್ಯತ್ಯಾಸ | ಮಾನಕ ವಿಚಲನೆ ವ್ಯತ್ಯಾಸ | t-ಮೌಲ್ಯ | p-ಮೌಲ್ಯ | ನಿರ್ಣಯ |
|---|---|---|---|---|---|---|---|---|
| ಪೂರ್ವ ಪರೀಕ್ಷೆ | 50 | 20.16 | 3.84 | 0.03 | 1.30 | 1.6348 | 0.1085 | NS |
| ಅಂತಿಮ ಪರೀಕ್ಷೆ | 50 | 20.46 | 3.71 | | | | | |

N.S. – Nonsignificant

ಈ ಮೇಲಿನ ಕೋಷ್ಟಕದ ಫಲಿತಾಂಶವನ್ನು ಅವಲೋಕಿಸಿದಾಗ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಗುಂಪಿನ ತರಬೇತಿ ಪೂರ್ವ ಹಾಗೂ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ. ಸರಾಸರಿ, ಮಾನಕ ವಿಚಲನೆ ಪೂರ್ವ ಪರೀಕ್ಷೆಯಲ್ಲಿ ಕ್ರಮವಾಗಿ 20.16 ಹಾಗೂ 3.84 ಇದ್ದರೆ. ಸರಾಸರಿ, ಮಾನಕ ವಿಚಲನೆ ಅಂತಿಮ ಪರೀಕ್ಷೆಯಲ್ಲಿ ಕ್ರಮವಾಗಿ 20.46 ಹಾಗೂ 3.71 ಇದೆ. ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯಲ್ಲಿ ಸರಾಸರಿ ವ್ಯತ್ಯಾಸ ಹಾಗೂ ಮಾನಕ ವಿಚಲನೆಯ ವ್ಯತ್ಯಾಸಗಳು ಕ್ರಮವಾಗಿ 0.30 ಹಾಗೂ 1.30 ಬಂದಿದೆ. ದೊರೆತ 't' ಮೌಲ್ಯ 1.6348 ಆಗಿದ್ದು, ಇದು 0.05 ಮಹತ್ವಪೂರ್ಣತೆಯ ಮಟ್ಟದಲ್ಲಿ ಶೇಕಡ 5ಕ್ಕಿಂತ ಹೆಚ್ಚಾಗಿರುವುದರಿಂದ ಈ ಶೂನ್ಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ ಮತ್ತು ಪರ್ಯಾಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ.

ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳು ನಿಯಂತ್ರಿತ ಗುಂಪಿನಲ್ಲಿ ಸಮನಾಗಿರುವುದು ಕಂಡುಬಂದಿದೆ.

ದಯಾನಂದ ಡಿ. ಭಟ್ (2002), ಬಿಜು ಕೆ. (2014) ಮತ್ತು ರೂಪಿಂದರ್ ಕೌಲ್ (2015), ಈ ಅಧ್ಯಯನಗಳಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ದೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 4 :** ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪ್ರಾಯೋಗಿಕ ಗುಂಪಿನ ತರಬೇತಿ ಪೂರ್ವ ಹಾಗೂ ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ಈ ಪ್ರಾಕಲ್ಪನೆಯನ್ನು ಸಾಧಿಸಲು ಸ್ವತಂತ್ರ 't' ಪರೀಕ್ಷೆಯನ್ನು ಅನ್ವಯಿಸಿದಾಗ ಪ್ರಸ್ತುತ ಫಲಿತಾಂಶವನ್ನು ಕೆಳಗಿನ ಕೋಷ್ಟಕ–4ರಲ್ಲಿ ಗಮನಿಸಬಹುದು.

**ಕೋಷ್ಟಕ – 4 : ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪ್ರಾಯೋಗಿಕ ಗುಂಪಿನ ತರಬೇತಿ ಪೂರ್ವ ಹಾಗೂ ಅಂತಿಮ ಪರೀಕ್ಷೆಯ ಅಂಕಗಳ ನಡುವಿನ ಹೋಲಿಕೆ.**

| ಗುಂಪುಗಳು | N | ಸರಾಸರಿ | ಮಾನಕ ವಿಚಲನೆ | ಸರಾಸರಿ ವ್ಯತ್ಯಾಸ | ಮಾನಕ ವಿಚಲನೆ ವ್ಯತ್ಯಾಸ | t-ಮೌಲ್ಯ | p-ಮೌಲ್ಯ | ನಿರ್ಣಯ |
|---|---|---|---|---|---|---|---|---|
| ಪೂರ್ವ ಪರೀಕ್ಷೆ | 50 | 19.04 | 3.60 | 12.30 | 4.60 | 18.8923 | 0.0001* | S |
| ಅಂತಿಮ ಪರೀಕ್ಷೆ | 50 | 31.34 | 2.99 | | | | | |

S. – Significant

ಈ ಮೇಲಿನ ಕೋಷ್ಟಕದ ಫಲಿತಾಂಶವನ್ನು ವೀಕ್ಷಿಸಿದಾಗ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪ್ರಾಯೋಗಿಕ ಗುಂಪಿನ ತರಬೇತಿ ಪೂರ್ವ ಮತ್ತು ಅಂತಿಮ ಪರೀಕ್ಷೆಯ ಅಂಕಗಳಲ್ಲಿ ಮಹತ್ವ ಪೂರ್ಣವಾದ ವ್ಯತ್ಯಾಸವಿರುವುದು ಕಂಡುಬಂದಿದೆ. ತರಬೇತಿ ಪೂರ್ವ ಪರೀಕ್ಷೆಯಲ್ಲಿ ಸರಾಸರಿ, ಮಾನಕ ವಿಚಲನೆ ಕ್ರಮವಾಗಿ 19.04 ಹಾಗೂ 3.60 ಇದ್ದರೆ, ಅಂತಿಮ ಪರೀಕ್ಷೆಯಲ್ಲಿ ಸರಾಸರಿ, ಮಾನಕ ವಿಚಲನೆ ಕ್ರಮವಾಗಿ 31.34 ಹಾಗೂ 2.99 ಇದೆ. ತರಬೇತಿ ಪೂರ್ವ ಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಯಲ್ಲಿ ಸರಾಸರಿ ವ್ಯತ್ಯಾಸ ಹಾಗೂ ಮಾನಕ ವಿಚಲನೆಯ ವ್ಯತ್ಯಾಸಗಳು ಕ್ರಮವಾಗಿ 12.30 ಹಾಗೂ 4.60 ಬಂದಿದೆ. ದೊರೆತ 't'–ಮೌಲ್ಯ 18.8923 ಆಗಿದ್ದು, ಇದ್ದು 0.05 ಮಹತ್ವಪೂರ್ಣತೆಯ ಮಟ್ಟದಲ್ಲಿ ಶೇಕಡ 5 ಕ್ಕಿಂತ ಕಡಿಮೆಯಾಗಿದೆ. ಈ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಪರ್ಯಾಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಮತ್ತು ಅಂತಿಮ ಪರೀಕ್ಷೆಯ ಅಂಕಗಳು ಪ್ರಾಯೋಗಿಕ ಗುಂಪಿನಲ್ಲಿ ವ್ಯತ್ಯಾಸವಿರುವುದು ಕಂಡುಬಂದಿದೆ. ಅಂದರೆ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪ್ರಾಯೋಗಿಕ ಗುಂಪಿನ ಅಂತಿಮ ಪರೀಕ್ಷೆಯ ಅಂಕಗಳು ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪ್ರಾಯೋಗಿಕ ಗುಂಪಿನ ತರಬೇತಿ ಪೂರ್ವ ಪರೀಕ್ಷೆಯ ಅಂಕಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಇದರಿಂದ ಪ್ರಾಯೋಗಿಕ ಗುಂಪಿನ ವಿದ್ಯಾರ್ಥಿಗಳ ಪರಿಸರದ ಅರಿವು ಹೆಚ್ಚಾಗಿರುವುದು ಕಂಡುಬರುತ್ತದೆ.

ದಯಾನಂದ ಡಿ. ಭಟ್ (2002), ಬಿಜು ಕೆ. (2014) ಮತ್ತು ರೂಪಿಂದರ್ ಕೌಲ್ (2015), ಈ ಅಧ್ಯಯನಗಳಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ದೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 5 :** ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳ ಜೊತೆ ಬದಲಾವಣೆಯಾದ ಸಂಬಂಧದ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ಯಾವುದೇ ಮಹತ್ವ ಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

ಈ ಪ್ರಾಕಲ್ಪನೆಯನ್ನು ಸಾಧಿಸಲು ಸ್ವತಂತ್ರ 't' – ಪರೀಕ್ಷೆಯನ್ನು ಅನ್ವಯಿಸಿದಾಗ ಪ್ರಸ್ತುತ ಫಲಿತಾಂಶವನ್ನು ಕೆಳಗಿನ ಕೋಷ್ಟಕ 5ರಲ್ಲಿ ಗಮನಿಸಬಹುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಕೋಷ್ಟಕ – 5 : ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳ ಜೊತೆ ಬದಲಾವಣೆಯಾದ ಸಂಬಂಧದ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ಸ್ವತಂತ್ರ 't' ಪರೀಕ್ಷೆಯ ಫಲಿತಾಂಶ.**

| ಗುಂಪುಗಳು | N | ಸರಾಸರಿ | ಮಾನಕ ವಿಚಲನೆ | ಪ್ರಮಾಣಿತ ದೋಷ | t-ಮೌಲ್ಯ | p-ಮೌಲ್ಯ | ನಿರ್ಣಯ |
|---|---|---|---|---|---|---|---|
| ನಿಯಂತ್ರಿತ ಗುಂಪು | 50 | 0.30 | 1.30 | 0.18 | 17.7403 | 0.0001* | S |
| ಪ್ರಾಯೋಗಿಕ ಗುಂಪು | 50 | 12.30 | 4.60 | 0.65 | | | |

S. – Significant

ಈ ಮೇಲಿನ ಕೋಷ್ಟಕದ ಫಲಿತಾಂಶವನ್ನು ಅವಲೋಕಿಸಿದಾಗ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳ ಜೊತೆ ಬದಲಾವಣೆಯಾದ ಸಂಬಂಧದ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ಮಹತ್ವ ಪೂರ್ಣವಾದ ವ್ಯತ್ಯಾಸವಿರುವುದು ಕಂಡುಬಂದಿದೆ. ನಿಯಂತ್ರಿತ ಗುಂಪಿನಲ್ಲಿ ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿತ ದೋಷಗಳು ಕ್ರಮವಾಗಿ 0.30, 1.30 ಹಾಗೂ 0.18 ಇದ್ದರೆ. ಪ್ರಾಯೋಗಿಕ ಗುಂಪಿನಲ್ಲಿ ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿತ ದೋಷಗಳು ಕ್ರಮವಾಗಿ 12.30, 4.60 ಹಾಗೂ 0.65 ಇದೆ. ದೊರೆತ 't' ಮೌಲ್ಯ 17.7403 ಆಗಿದ್ದು, ಇದು 0.05 ಮಹತ್ವಪೂರ್ಣತೆಯ ಮಟ್ಟದಲ್ಲಿ ಶೇಕಡ 5ಕ್ಕಿಂತ ಹೆಚ್ಚಾಗಿರುವುದರಿಂದ ಈ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಪರ್ಯಾಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳ ಜೊತೆ ಬದಲಾವಣೆಯಾದ ಸಂಬಂಧವು. ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪಿನಲ್ಲಿ ವ್ಯತ್ಯಾಸವಿದೆ. ಇನ್ನೊಂದು ಅರ್ಥದಲ್ಲಿ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆಗಿಂತ ಅಂತಿಮ ಪರೀಕ್ಷೆಯಲ್ಲಿ ಪ್ರಾಯೋಗಿಕ ಗುಂಪನ್ನು ನಿಯಂತ್ರಿತ ಗುಂಪಿಗೆ ಹೋಲಿಸಿದಾಗ ಹೆಚ್ಚಿನ ಮಹತ್ವಪೂರ್ಣವಾದ ಅಂಕಗಳಿಸಿರುವುದು ಕಂಡುಬಂದಿದೆ.

ಬಿಜು ಕೆ. (2014) ಮತ್ತು ರೂಪಿಂದರ್ ಕೌಲ್ (2015) ಈ ಅಧ್ಯಯನಗಳಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ದೃಢೀಕರಿಸಲಾಗಿದೆ.

**ಪ್ರಾಕಲ್ಪನೆ – 6** :ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳಲ್ಲಿ ನಿಯಂತ್ರಿತ ಗುಂಪು ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ಯಾವುದೇ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬರುವುದಿಲ್ಲ.

ಈ ಪ್ರಾಕಲ್ಪನೆಯನ್ನು ಸಾಧಿಸಲು ವಿಶ್ಲೇಷಣೆಯ ಗುರುತು (ಅನಕೋವ) (ಪೂರ್ವ ಪರೀಕ್ಷೆಯ ಅಂಕಗಳು) ತಂತ್ರವನ್ನು ಅನ್ವಯಿಸಿದಾಗ ಪ್ರಸ್ತುತ ಫಲಿತಾಂಶವನ್ನು ಕೆಳಗಿನ ಕೋಷ್ಟಕ 6ರಲ್ಲಿ ಗಮನಿಸಬಹುದು.

**ಕೋಷ್ಟಕ – 6 : ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳಲ್ಲಿ ನಿಯಂತ್ರಿತ ಗುಂಪು ಮತ್ತು ಪ್ರಾಯೋಗಿಕ ಗುಂಪುಗಳ ನಡುವೆ ವಿಶ್ಲೇಷಣೆಯ ಗುರುತಿನ (ಅನಕೋವ) ಹೋಲಿಕೆ.**

| ಗುಂಪುಗಳು | N | ಪೂರ್ವ ಪರೀಕ್ಷೆ | | ಅಂತಿಮ ಪರೀಕ್ಷೆ | | ಹೊಂದಾಣಿಕೆ ಸರಾಸರಿ |
|---|---|---|---|---|---|---|
| | | ಸರಾಸರಿ | ಮಾನಕ ವಿಚಲನೆ | ಸರಾಸರಿ | ಮಾನಕ ವಿಚಲನೆ | |
| ನಿಯಂತ್ರಿತ ಗುಂಪು | 50 | 20.16 | 3.84 | 20.46 | 3.71 | 20.18 |
| ಪ್ರಾಯೋಗಿಕ ಗುಂಪು | 50 | 19.04 | 3.60 | 31.34 | 2.99 | 31.62 |
| F-ಪರೀಕ್ಷೆ | – | 2.2654 @ | | 398.8817# | | |
| P-ಮೌಲ್ಯ | – | 0.1355 | | 0.0001* | | |

* P<0.05, @ – ಒಂದು ವಿಧದ ಅನೋವ, # – ಅನಕೋವದ ಅನ್ವಯ

ಮೇಲಿನ ಕೋಷ್ಟಕದ ಫಲಿತಾಂಶಗಳನ್ನು ಕೆಳಗೆ ಸ್ಪಷ್ಟವಾಗಿ ಗಮನಿಸಬಹುದು.

1. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಪರೀಕ್ಷೆಯ ಅಂಕಗಳು ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪುಗಳ ಮಧ್ಯೆ ಮಹತ್ವ ಪೂರ್ಣವಾದ ವ್ಯತ್ಯಾಸ ಕಂಡುಬಂದಿಲ್ಲ. ಪೂರ್ವ ಪರೀಕ್ಷೆಯ ನಿಯಂತ್ರಿತ ಗುಂಪಿನ ಸರಾಸರಿ ಮತ್ತು ಮಾನಕ ವಿಚಲನೆ ಕ್ರಮವಾಗಿ 20.16 ಮತ್ತು 3.84 ಇದ್ದರೆ. ಪ್ರಾಯೋಗಿಕ ಗುಂಪಿನಲ್ಲಿ ಸರಾಸರಿ, ಮಾನಕ ವಿಚಲನೆ ಕ್ರಮವಾಗಿ 19.04 ಮತ್ತು 3.60 ಬಂದಿದೆ. ನಿಯಂತ್ರಿತ ಗುಂಪಿನ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಗಳ ಸರಾಸರಿ ಹೊಂದಾಣಿಕೆ 20.18 ಬಂದಿದೆ ಹಾಗೂ F – ಪರೀಕ್ಷೆಯಲ್ಲಿ 2.2654 ಆಗಿದ್ದು, ಇದು 0.05 ಮಹತ್ವ ಪೂರ್ಣತೆಯ ಮಟ್ಟದಲ್ಲಿ ಶೇಕಡ 5 ಕ್ಕಿಂತ ಕಡಿಮೆ ಇದೆ.

ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪೂರ್ವ ಪರೀಕ್ಷೆಯ ಅಂಕಗಳು ನಿಯಂತ್ರಿತ ಗುಂಪು ಮತ್ತು ಪ್ರಾಯೋಗಿಕ ಗುಂಪಿನಲ್ಲಿ ಸಮವಾಗಿದೆ.

2. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಅಂತಿಮ ಪರೀಕ್ಷೆಯ ಅಂಕಗಳು ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪುಗಳ ಮಧ್ಯೆ ಮಹತ್ವಪೂರ್ಣವಾದ ವ್ಯತ್ಯಾಸವಿದೆ. ಅಂತಿಮ ಪರೀಕ್ಷೆಯ ನಿಯಂತ್ರಿತ ಗುಂಪಿನಲ್ಲಿ ಸರಾಸರಿ ಮತ್ತು ಮಾನಕ ವಿಚಲನೆ ಕ್ರಮವಾಗಿ 20.46 ಮತ್ತು 3.71 ಇದ್ದರೆ ಅಂತಿಮ ಪರೀಕ್ಷೆಯ ಪ್ರಾಯೋಗಿಕ ಗುಂಪಿನಲ್ಲಿ ಸರಾಸರಿ ಮತ್ತು ಮಾನಕ ವಿಚಲನೆ ಕ್ರಮವಾಗಿ 31.34 ಮತ್ತು 2.99 ಬಂದಿದೆ. ಪ್ರಾಯೋಗಿಕ ಗುಂಪಿನ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಗಳ ಹೊಂದಾಣಿಕೆಯ ಸರಾಸರಿ 31.62 ಬಂದಿದೆ ಹಾಗೂ F– ಪರೀಕ್ಷೆಯಲ್ಲಿ 398.8817 ಆಗಿದ್ದು, ಇದು 0.05 ಮಹತ್ವ ಪೂರ್ಣತೆಯ ಮಟ್ಟದಲ್ಲಿ ಶೇಕಡ 5 ಕ್ಕಿಂತ ಹೆಚ್ಚಾಗಿದೆ. ಆದ್ದರಿಂದ ಈ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ ಮತ್ತು ಪರ್ಯಾಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಅಂತಿಮ ಪರೀಕ್ಷೆಯಲ್ಲಿ ನಿಯಂತ್ರಿತ ಗುಂಪಿಗೆ ಹೋಲಿಸಿದರೆ ಪ್ರಾಯೋಗಿಕ ಗುಂಪು ಹೆಚ್ಚು ಮಹತ್ವ ಪೂರ್ಣವಾದ ಅಂಕಗಳನ್ನು ಹೊಂದಿರುವುದು ಕಂಡುಬಂದಿದೆ.

ಬಿಜು ಕೆ. (2014) ಮತ್ತು ರೂಪಿಂದರ್ ಕೌಲ್ (2015) ಈ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ದೃಢೀಕರಿಸಲಾಗಿದೆ.

## ಅಧ್ಯಯನದ ಫಲಿತಾಂಶ

1. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪಿನ ತರಬೇತಿ ಪೂರ್ವ ಪರೀಕ್ಷೆಯ ಅಂಕಗಳು ಸಮವಾಗಿರುವುದು ಕಂಡುಬಂದಿದೆ.
2. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಅಂತಿಮ ಪರೀಕ್ಷೆಯಲ್ಲಿ ನಿಯಂತ್ರಿತ ಗುಂಪಿಗೆ ಹೋಲಿಸಿದರೆ ಪ್ರಾಯೋಗಿಕ ಗುಂಪು ಹೆಚ್ಚು ಮಹತ್ವ ಪೂರ್ಣ ಅಂಕಗಳನ್ನು ಹೊಂದಿರುವುದು ಕಂಡುಬಂದಿದೆ.
3. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳು ನಿಯಂತ್ರಿತ ಗುಂಪಿನಲ್ಲಿ ಸಮವಾಗಿರುವುದು ಕಂಡುಬಂದಿದೆ.
4. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ತರಬೇತಿ ಪೂರ್ವ ಮತ್ತು ಅಂತಿಮ ಪರೀಕ್ಷೆಯ ಅಂಕಗಳು ಪ್ರಾಯೋಗಿಕ ಗುಂಪಿನಲ್ಲಿ ವ್ಯತ್ಯಾಸವಿರುವುದು ಕಂಡುಬಂದಿದೆ.
5. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪೂರ್ವ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಯ ಅಂಕಗಳ ಜೊತೆ ಬದಲಾವಣೆಯಾದ ಸಂಬಂಧವು ನಿಯಂತ್ರಿತ ಗುಂಪು ಮತ್ತು ಪ್ರಾಯೋಗಿಕ ಗುಂಪಿನಲ್ಲಿ ವ್ಯತ್ಯಾಸವಿರುವುದು ಕಂಡುಬಂದಿದೆ.
6. ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಪೂರ್ವ ಪರೀಕ್ಷೆಯ ಅಂಕಗಳು ನಿಯಂತ್ರಿತ ಗುಂಪು ಮತ್ತು ಪ್ರಾಯೋಗಿಕ ಗುಂಪಿನಲ್ಲಿ ಸಮವಾಗಿರುವುದು ಕಂಡುಬಂದಿದೆ ಹಾಗೂ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವಿನ ಅಂತಿಮ ಪರೀಕ್ಷೆಯ ಅಂಕಗಳು ನಿಯಂತ್ರಿತ ಮತ್ತು ಪ್ರಾಯೋಗಿಕ ಗುಂಪಿನಲ್ಲಿ ವ್ಯತ್ಯಾಸವಿರುವುದು ಕಂಡುಬಂದಿದೆ.

## ತೀರ್ಮಾನ

ಪ್ರಸ್ತುತ ಸಂಶೋಧನೆಯು ಪರಿಸರ ಅರಿವಿನ ಅಧ್ಯಯನದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಪರಿಸರ ಶಿಕ್ಷಣವನ್ನು ಸ್ವಯಂ ಕಲಿಕಾ ಸಾಮಗ್ರಿಗಳ ಮೂಲಕ ಬೋಧಿಸಿದಾಗ ಸಂಪ್ರದಾಯಿಕ ವಿಧಾನದ ಬೋಧನೆಗಿಂತ ಹೆಚ್ಚು ಪರಿಣಾಮಕಾರಿಯಾಗಿರುವುದು ಕಂಡುಬಂದಿದೆ. ಸ್ವಯಂ ಕಲಿಕಾ ಸಾಮಗ್ರಿಗಳನ್ನು ಬಳಸುವ ಮೂಲಕ ಪ್ರಶಿಕ್ಷಣಾರ್ಥಿಗಳ ಪರಿಸರ ಅರಿವನ್ನು ಹೆಚ್ಚಿಸಬಹುದು ಎಂದು ತೀರ್ಮಾನಿಸಬಹುದಾಗಿದೆ.

## ಆಕರ ಗ್ರಂಥಗಳು


- **Biju K. :** A Study on The Effectiveness of an Experience Based Approach to Environmental Education for Secondary Teacher Education, Ph.D Thesis, Mysore University, 2014.
- **Dayanand D. Bhat :** Construction and Education of Self Instructional Modules on Environmental Education for The B.Ed., Tranees of Karnataka University, Ph.D., Thesis, Kuvempu University, 2002.
- **ಇಗ್ನೋ ಸ್ವಯಂ ಕಲಿಕಾ ಸಾಮಗ್ರಿಗಳ ಅಭಿವೃದ್ಧಿ ಹಾಗೂ ಪರಿಷ್ಕರಣ,** ಪಠ್ಯಪುಸ್ತಕ ಮುದ್ರಣಾಲಯ, ನವದೆಹಲಿ, 2007.
- **Nayana A. Patel :** A Study of the Effectiveness of Environmental Awareness Programme on Student Teachers, Ph.D. Thesis 1997, Saradarpatel Univeristy, Vallabha Vidyanagar, Gujarat.
- **Neelam Dhamija :** Environmental Awareness Through Self Learning Modules : An Experimental Study, Vision Research Journal of Education, Vol. 1, No. 1, October, 2010. PP 107-113
- **ಲಕ್ಷ್ಮೀ ಎನ್. :** ಶೈಕ್ಷಣಿಕ ಸಂಖ್ಯಾಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ, 2005.
- **Rupinder Kaur :** Effectiveness of Environmental Education Programme utilizing ICT in Influence Environmental Sensitivity, Awareness, Ethics and Attitudes, Secondary School Students. PhD Thesis, Kurukshetra University, Kurukshetra, 2015.
- **Sharma R. A. :** Environmental Education, Surya Publication, Near Govt. Inter College, Meerut, 2001.
- **Shivakumar G.S. :** An Investigation into the Environmental Awareness, Attitude and Knowledge among the secondary school students of Davanagere District, Ph.D Thesis, Kuvempu University, 2008.
- **ವಾಮದೇವಪ್ಪ ಹೆಚ್.** ವಿ. : ಶಿಕ್ಷಣದಲ್ಲಿ ಮೌಲ್ಯಮಾಪನ ಮತ್ತು ಸಂಖ್ಯಾಶಾಸ್ತ್ರ, ಶ್ರೇಯಸ್ ಪಬ್ಲಿಕೇಷನ್ಸ್, ತರಳಬಾಳು ಬಡಾವಣೆ, ದಾವಣಗೆರೆ, 2010.
- **ವಿಜಯಲಕ್ಷ್ಮಿ ದೇಸಾಯಿ :** ಪರಿಸರ ಶಿಕ್ಷಣ, ಪ್ರದೀಪ ಪ್ರಕಾಶನ, ಗದಗ, 2007.
- **Vishwanath H.N. :** A Comparative Study of Effectiveness of Models of Teaching on the Achievement of X Standard Students in Environmental Studies, 2002, Ph.D. Thesis Mysore University, Mysore
- **Vishalakshi V. :** Effectiveness of an activity based strategy for Environmental Studies at the Lower Primary Level, Ph.D. Thesis 2000. Mysore University, Mysore
- **ಯಾದವಾಡ ಎಸ್.ಬಿ. :** ಪರಿಸರ ಶಿಕ್ಷಣ, ವಿದ್ಯಾನಿದಿ ಪ್ರಕಾಶನ, ಸ್ಟೇಶನ್ ರೋಡ್, ಗದಗ, 2007
- **ಯಶೋಧರ ಕೆ. :** ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ, ಶಿಬಾ ಪ್ರಕಾಶನ, ಮೈಸೂರು, 1995.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಪ್ರೌಢಶಾಲೆಯ ಬಾಲಕರು ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಯ ಕುರಿತು ಅಧ್ಯಯನ

✍ **ಶ್ರೀಮತಿ ಕೆ. ಕವಿತ,** ಉಪನ್ಯಾಸಕರು, ಎಸ್. ಜಿ. ಕಾಲೇಜು, ಬಳ್ಳಾರಿ.

**"ಅಜ್ಞಾನದ ಕತ್ತಲೆಯನ್ನು ಕಳೆದು,**
**ಜ್ಞಾನದ ಜ್ಯೋತಿಯನ್ನು ಬೆಳಗಿಸುವಲ್ಲಿ,**
**ಶಿಕ್ಷಣದ ಹಿರಿಮೆ ಗುರುತರವಾದುದು".**

ಧರಣಿಯ ಮೇಲೆ ವಾಸಿಸುವ ಕೋಟ್ಯಾನುಕೋಟಿ ಜೀವರಾಶಿಗಳಲ್ಲಿ ಮಾನವ ಜೀವಿಗೆ ಮಹತ್ತರವಾದ ಮಾನ್ಯತೆ ಇದೆ. ಆತನ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕೆ ಸಮಾಜದ ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣವೇ ಸಂಜೀವಿನಿ, ಕೇವಲ ಆಹಾರದಿಂದಲೇ ಮಾನವ ಜೀವಿಸಲಾರ.

ಜ್ಞಾನವೆಂಬ ಹಸಿವನ್ನು ನೀಗಿಸಲು ಶಿಕ್ಷಣ ಅತ್ಯವಶ್ಯಕ. ಮಕ್ಕಳು ಮಾನವರಾಗಿ, ನಾಗರೀಕರಾಗಿ ಇನ್ನೊಬ್ಬರೊಡನೆ ಮೈತ್ರಿ, ಗೌರವ, ಘನತೆಗಳಿಂದ ವರ್ತಿಸುವಂತೆ ಮಾಡಿ ಮಕ್ಕಳಲ್ಲಿ ಔದಾರ್ಯ, ಭ್ರಾತೃತ್ವ ಭಾವ, ಸಹಾನುಭೂತಿಗಳು, ಹೆಚ್ಚಾಗಿರುವಂತೆ ಮಾಡುವ ಪ್ರಬಲ ಸಾಧನ ಶಿಕ್ಷಣವಾಗಿದೆ.

ಮಗುವಿನ ಸರ್ವತೋಮುಖ ಬೆಳವಣಿಗೆಯೇ ಇಂದಿನ ಶಿಕ್ಷಣದ ಪ್ರಮುಖ ಗುರಿಯಾಗಿದ್ದು ಮತ್ತು ಶಿಕ್ಷಣದ ಮೂಲಕ ಮಗುವನ್ನು ಸ್ವಾವಲಂಬಿಯಾಗಿ ಹಾಗೂ ಸಮಾಜದ ಉಪಯುಕ್ತ ಸದಸ್ಯರನ್ನಾಗಿ ಮಾಡುವುದು ಶಿಕ್ಷಣದಿಂದ ಮಾತ್ರ ಸಾಧ್ಯ. ಮಕ್ಕಳ ಯೋಗ್ಯತೆ ಮತ್ತು ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಶಿಕ್ಷಣ ಪಡೆದು ಆ ಮೂಲಕ ಶಿಕ್ಷಣದ ಗುರಿ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಹಾಯಕವಾಗುತ್ತದೆ.

## 1. ತಾಂತ್ರಿಕ ಪದಗಳ ಅರ್ಥ

● **ಶೈಕ್ಷಣಿಕ ಸಾಧನೆ** (EDUCATIONAL ACHIEVEMENT) : ವಿಜ್ಞಾನ, ಗಣಿತ, ಕನ್ನಡ, ಇಂಗ್ಲೀಷ್ ಮತ್ತು ಇತಿಹಾಸ ಮುಂತಾದ ವಿಷಯದಲ್ಲಿ ವಿದ್ಯಾರ್ಥಿಯು ಗಳಿಸಿದ ಅಂಕಗಳ ಸಾಧನೆಗೆ ಶೈಕ್ಷಣಿಕ ಸಾಧನೆ ಎನ್ನುವರು.

**ಸ್ಮಿತ್, ಸ್ಪೆನ್ಸರ್ ಮತ್ತು ಹೆಲ್ಮೆಂಟ್‌ರವರ** – ಪ್ರಕಾರ "ಸಾಧನೆ ಎನ್ನುವುದು ಕಾರ್ಯಜನ್ಯವಾದ ವರ್ತನೆಯಾಗಿದ್ದು, ಇದು ವ್ಯಕ್ತಿಯೊಬ್ಬನ ಆಂತರಿಕ ಹಾಗೂ ಬಾಹ್ಯಾ ವರ್ತನೆಯನ್ನು ತಿಳಿಸುವ ಇತರ ಪ್ರಾಮಾಣೀಕೃತ ಅತ್ಯುತ್ಯಮವಾದ ಸಾಧನೆಯಾಗಿದೆ".

ಶೈಕ್ಷಣಿಕ ಸಾಧನೆಯೆಂಬುದು ಸಾಮಾನೀಕರಿಸುವ ತತ್ವಗಳ ಮತ್ತು ಯಾಂತ್ರಿಕವಾಗಿ ದಕ್ಷವಾಗಿ ವಿಷಯಗಳ ಸಂಜ್ಞೆಗಳ ಮತ್ತು ವಿಚಾರಣೆಗಳ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅಳೆಯುವುದಾಗಿದೆ.

● **ಯಶಸ್ವಿ ಅಧ್ಯಯನ** (ACADEMIC ACHIEVE MENT) : ಪರೀಕ್ಷೆಯಲ್ಲಿ ಪಡೆದ ಅಥವಾ ಶಿಕ್ಷಕರು ಕೊಟ್ಟಿರುವ ಪ್ರಾಪ್ತಾಂಕ ಅಥವಾ ಮೌಲ್ಯದ ಮೇಲೆ ನಿರ್ಧರಿಸಬಹುದಾದ ಶಾಲೆಯ ವಿದ್ಯಾರ್ಥಿಯೊಬ್ಬನ ಶಿಕ್ಷಣಾಭಿವೃದ್ಧಿ.

● **ಆಡಳಿತ ಯಂತ್ರ / ಸರ್ಕಾರ** (GOVERNMENT) : ಒಂದು ರಾಜ್ಯದ ಅಥವಾ ರಾಷ್ಟ್ರದ ಜನತೆ ತನ್ನ ಉದ್ದೇಶದಂತೆ ನೀತಿ ನಿಯಮಗಳನ್ನು ಗುರುತಿಸಿ ಏರ್ಪಡಿಸಿರುವ ಕಾರ್ಯನಿರ್ವಹಣೆಯ ವ್ಯವಸ್ಥೆ.

● **ಖಾಸಗಿ ಶಿಕ್ಷಣ** (PRIVATE EDUCATION ) : ಸರ್ಕಾರ ಸಾರ್ವಜನಿಕ ಶಿಕ್ಷಣಕ್ಕಾಗಿ ವ್ಯವಸ್ಥೆಗೊಳಿಸಿರುವ ಅಧಿಕೃತ ಶಿಕ್ಷಣ ಶಾಖೆ ನಡೆಸುವ ಸಂಸ್ಥೆಗಳಿಗೆ ಹೊರತಾದ ಸಂಸ್ಥೆಗಳಲ್ಲಿ ದೊರಕುವ ಶಿಕ್ಷಣ.

## ಅಧ್ಯಯನದ ಅಗತ್ಯ ಮತ್ತು ಪ್ರಾಮುಖ್ಯತೆ

**"MOTHER IS THE FIRST TEACHER, TEACHER IS THE SECOND MOTHER"**

"ನೂರು ಶಾಲಾ ಶಿಕ್ಷಕರಿಗಿಂತ ಒಬ್ಬ ಉತ್ತಮ ತಾಯಿ ಲೇಸು" ಎನ್ನುವ ವಿಚಾರವಂತರ ಮಾತು ಸತ್ಯ. ಇತಿಹಾಸದ ಪುಟಗಳನ್ನೊಮ್ಮೆ ತಿರುಗಿಸಿ ನೋಡಿದಾಗ ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ಮೆರೆದ ವ್ಯಕ್ತಿಗಳ ಶಿಕ್ಷಣ ಕುಟುಂಬದಿಂದಲೇ ಆಗಿರುವುದು ತಿಳಿದು ಬರುತ್ತದೆ. "ಮೂರು ವರ್ಷದ ಬುದ್ಧಿ ನೂರು ವರ್ಷದವರೆಗೆ" ಎನ್ನುವಂತೆ ಕುಟುಂಬದಲ್ಲಿ ಅದರಲ್ಲೂ ತಾಯಿಯಿಂದ ಮಗು ಆ ವಯಸ್ಸಿನಲ್ಲಿ ಪಡೆಯುವ ತಿಳುವಳಿಕೆ, ಅನುಭವ ಅವನ ಮುಂದಿನ ಭವಿಷ್ಯಕ್ಕೆ ಆಧಾರವಾಗಿರುತ್ತದೆ.

ಈ ನಿಟ್ಟಿನಲ್ಲಿ ದೇಶದ ಪ್ರತಿಯೊಬ್ಬ ಬಾಲಕ ಮತ್ತು ಬಾಲಕಿಯು ಕೂಡ ಶಿಕ್ಷಣವನ್ನು ಪಡೆಯಬೇಕೆಂದು 'ಬಾ ಬಾಲೆ ಶಾಲೆಗೆ', 'ಮರಳಿ ಬಾ ಶಾಲೆಗೆ', 'ಸಮುದಾಯದತ್ತ ಶಾಲೆ', 'ನಲಿ–ಕಲಿ', ಹೀಗೆ ಹತ್ತು ಹಲವಾರು ನೂತನ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಯ ಮೂಲಕ ನಮ್ಮ ದೇಶದಲ್ಲಿ ಬಾಲಕರ ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಗಳನ್ನು ಕುರಿತಾಗಿ ಅಧ್ಯಯನ ಮಾಡಲಾಗುತ್ತಿದೆ.

## ಸಂಬಂಧಿತ ಸಾಹಿತ್ಯದ ಪುನರಾವಲೋಕನ

ಹಿಂದಿನ ಜ್ಞಾನದ ತಳಹದಿಯ ಮೇಲೆ ಮಾನವನಿಗೆ ಹೊಸ ಜ್ಞಾನವನ್ನು ನಿರಂತರವಾಗಿ ಪಡೆಯುವುದರಿಂದ ಜ್ಞಾನದ ಎಲ್ಲ ಮಜಲುಗಳು ವಿಕಸನ ಹೊಂದುತ್ತವೆ. ಯಾವುದೇ ನಿರ್ದಿಷ್ಟ ಕ್ಷೇತ್ರದಲ್ಲಿ ಕಲಿತ ಜ್ಞಾನವು ಆ ಕ್ಷೇತ್ರಕ್ಕೆ ಸಂಬಂಧಿಸಿದ ಇತರೆ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಕಾರಿಯಾಗಿದೆ, ಆದ್ದರಿಂದ ಸಾಹಿತ್ಯಕ್ಕೆ ಸಂಬಂಧಪಟ್ಟ ಪುನರಾವಲೋಕನವು ಸಂಶೋಧಕನಿಗೆ ಜ್ಞಾನ ಭಂಡಾರವನ್ನು ತೆರೆಯುವ ಒಂದು ಬೀಗದ ಕೈ ಇದ್ದ ಹಾಗೆ.

**ಹರಿಕೃಷ್ಣನ್ ಎಂ. (1992)** : "ಶೈಕ್ಷಣಿಕ ಅಭಿಪ್ರೇರಣೆ ಮತ್ತು ಸಾಮಾಜಿಕ, ಆರ್ಥಿಕ ಸ್ಥಿತಿಗಳಿಗೆ ಸಂಬಂಧಿಸಿದಂತೆ ಪ್ರೌಢಶಾಲೆ ಮಕ್ಕಳ ಶೈಕ್ಷಣಿಕ ಸಾಧನೆಗಳ ಕುರಿತು ಒಂದು ಅಧ್ಯಯನ".

## ಫಲಿತಾಂಶ

ಹುಡುಗಿಯರು ಹುಡುಗರಿಗಿಂತ ಹೆಚ್ಚಿನ ಸಾಧನಾ ಅರ್ಹತೆಯನ್ನು ಹೊಂದಿದ್ದಾರೆ.

**ಚಲನ್ ಸಿ. ಡಿ. (1988)** : "9 ನೇ ತರಗತಿಯ ವಿದ್ಯಾರ್ಥಿಗಳಲ್ಲಿಯ ಸೃಜನಶೀಲತೆಯ ಮೇಲೆ ಕುಟುಂಬ ಹಾಗೂ ಶಾಲೆಯ ಪ್ರಭಾವ ಕುರಿತು ಒಂದು ಅಧ್ಯಯನ"

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಫಲಿತಾಂಶ

ಲಿಂಗ ಹಾಗೂ ಕುಟುಂಬದ ವಿಧವು ಒಂಬತ್ತನೇ ತರಗತಿಯ ವಿದ್ಯಾರ್ಥಿಗಳ ಶಾಬ್ದಿಕ ಹಾಗೂ ಅಶಾಬ್ದಿಕ ಸೃಜನಶೀಲತೆಯ ಮೇಲೆ ಪ್ರಭಾವ ಬೀರಲಾರದು.

## ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿವರಣಾತ್ಮಕ ಸಂಶೋಧನೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ವಿವರಣಾತ್ಮಕ ಸಂಶೋಧನೆಯ ಮೂರು ವಿಧಾನಗಳಲ್ಲಿ ಅಂತರ್ ಸಂಬಂಧ ವಿಧಾನವನ್ನು ಆಯ್ಕೆ ಮಾಡಲಾಗಿದೆ. ಹಾಗೆಯೇ ಅಂತರ್ ಸಂಬಂಧ ವಿಧಾನದಲ್ಲಿ ಸಹ ಸಂಬಂಧ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

## ಅಧ್ಯಯನದ ಉದ್ದೇಶಗಳು

"9 ನೇ ತರಗತಿ ಬಾಲಕರು ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಯಲ್ಲಿ ಮಹತ್ವಪೂರ್ಣ ವ್ಯತ್ಯಾಸವಿದೆಯೇ ಎಂದು ಕಂಡುಹಿಡಿಯುವುದು".

## ಅಧ್ಯಯನದ ಪ್ರಾಕಲ್ಪನೆ

"9 ನೇ ತರಗತಿ ಬಾಲಕರು ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಯಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ".

## ಪ್ರತಿಚಯನ

ಬಳ್ಳಾರಿ ಜಿಲ್ಲೆಯಲ್ಲಿರುವ ಕೊಟ್ಟೂರು ಪಟ್ಟಣದ ಪ್ರೌಢಶಾಲೆಗಳಲ್ಲಿ ಸಂಶೋಧನೆಯ ಅಗತ್ಯತೆಗೆ ಅನುಗುಣವಾಗಿ ಯಾದೃಚ್ಛಿಕ ಪ್ರತಿಚಯನದ ಮೂಲಕ ನಾಲ್ಕು ಪ್ರೌಢಶಾಲೆಗಳಲ್ಲಿನ ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಲ್ಲಿ ಎರಡು ಸರ್ಕಾರಿ ಪ್ರೌಢಶಾಲೆಗಳು ಮತ್ತು ಎರಡು ಖಾಸಗಿ ಪ್ರೌಢಶಾಲೆಗಳನ್ನು ಒಳಗೊಂಡಿದೆ.

ಒಟ್ಟಾರೆಯಾಗಿ ಸಂಶೋಧಕರು ಸಂಶೋಧನೆಗಾಗಿ ಯಾಧೃಚ್ಛಿಕ ಪ್ರತಿಚಯನದ ಮೂಲಕ 200 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

**ಕೋಷ್ಟಕ – 1 : ಪ್ರತಿಚಯನದಲ್ಲಿ ಆಯ್ಕೆ ಮಾಡಿಕೊಂಡ ಶಾಲೆಗಳು ಮತ್ತು ವಿದ್ಯಾರ್ಥಿಗಳು**

| ಕ್ರ. ಸಂ. | ಶಾಲೆಯ ಹೆಸರು | ಶಾಲೆಯ ವಿಧ | ಒಟ್ಟು ವಿದ್ಯಾರ್ಥಿಗಳು | ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|
| 1. | ಗುರು ದೇವ ಪ್ರೌಢಶಾಲೆ, ಕೊಟ್ಟೂರು. | ಖಾಸಗಿ | 78 | 50 |
| 2. | ಕೋಲಶಾಂತೇಶ್ವರ ಪ್ರೌಢಶಾಲೆ, ಕೊಟ್ಟೂರು. | ಖಾಸಗಿ | 50 | 50 |
| 3. | ಸರಕಾರಿ ಬಾಲಕರ ಪದವೀ ಪೂರ್ವ ಕಾಲೇಜು, ಕೊಟ್ಟೂರು. | ಸರ್ಕಾರಿ | 68 | 50 |
| 4. | ಸರಕಾರಿ ಬಾಲಕಿಯರ ಪ್ರೌಢಶಾಲೆ, ಕೊಟ್ಟೂರು | ಸರ್ಕಾರಿ | 80 | 50 |
| | | ಒಟ್ಟು | 276 | 200 |

## ದತ್ತಾಂಶ ವಿಶ್ಲೇಷಣೆಗೆ ಬಳಸಿದ ಸಾಂಖ್ಯಿಕ ವಿಧಾನ

- 't' ಪರೀಕ್ಷಣ

$$t = \frac{N_1 - N_2}{\sqrt{\frac{S\frac{2}{1}}{N_1} + \frac{S\frac{2}{2}}{N_2}}}$$

- ಸಹಸಂಬಂಧ ಗುಣಾಂಕದ 't' ಪರೀಕ್ಷಣ ಸೂತ್ರ

$$t = \frac{\sqrt{n - 2}}{\sqrt{1 - r^2}}$$

## ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

**ಪ್ರಾಕಲ್ಪನೆ :** 9 ನೇ ತರಗತಿಯ ಬಾಲಕರು ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಯಲ್ಲಿ

ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.

**ಕೋಷ್ಟಕ 1 : ಬಾಲಕ ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಯ ಸರಾಸರಿ, ಮಾನಕ ವಿಚಲನೆ, "t" ಮೌಲ್ಯವನ್ನು ತೋರಿಸುವ ಪಟ್ಟಿ.**

| ಕ್ರ.ಸಂ. | ಪ್ರಸರಣದ ಮೂಲ | N | ಸರಾಸರಿ | ಮಾನಕ ವಿಚಲನೆ | t-ಮೌಲ್ಯ | ಮಹತ್ವಪೂರ್ಣತೆಯ ಮಟ್ಟ |
|---|---|---|---|---|---|---|
| 1. | ಬಾಲಕರ ಶೈಕ್ಷಣಿಕ ಸಾಧನೆ | 100 | 50.25 | 7.462 | 3.316 | 0.05 ಮಟ್ಟದಲ್ಲಿ ಲಕ್ಷ್ಯಾರ್ಹವಾಗಿದೆ. |
| 2. | ಬಾಲಕಿಯರ ಶೈಕ್ಷಣಿಕ ಸಾಧನೆ | 100 | 51.25 | 8.033 | | |

## ಅರ್ಥೈಸುವಿಕೆ

ಮೇಲ್ಕಂಡ ಕೋಷ್ಟಕ 1 ರ ಪ್ರಕಾರ ದೊರೆತಿರುವ 't' ಮೌಲ್ಯ 3.316 ತಾತ್ವಿಕ ಮೌಲ್ಯ 1.96 ಕ್ಕಿಂತ ಹೆಚ್ಚಾಗಿರುವುದರಿಂದ 2 ಗುಂಪುಗಳ ನಡುವೆ ಮಹತ್ವಪೂರ್ಣ ವ್ಯತ್ಯಾಸವಿದೆಯೆಂದು ತಿಳಿದು ಬರುತ್ತದೆ.

ಬಾಲಕರು ಹಾಗೂ ಬಾಲಕಿಯರ ಶೈಕ್ಷಣಿಕ ಸಾಧನೆಗಳನ್ನು ಹೋಲಿಸಿ ನೋಡಿದಾಗ ಬಾಲಕರ ಶೈಕ್ಷಣಿಕ ಸಾಧನೆ (N = 50.25) ಬಾಲಕಿಯರ ಶೈಕ್ಷಣಿಕ ಸಾಧನೆ (N = 51.55) ಕ್ಕಿಂತ ಕಡಿಮೆಯಾಗಿದೆಯೆಂದು ತಿಳಿದು ಬರುತ್ತದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

## ಅಧ್ಯಯನದಿಂದ ಕಂಡು ಬಂದ ಫಲಿತಾಂಶ

9 ನೇ ತರಗತಿ ಬಾಲಕ ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಯಲ್ಲಿ ಮಹತ್ವಪೂರ್ಣ ವ್ಯತ್ಯಾಸ ಕಂಡು ಬರುತ್ತದೆ.

## ಶೈಕ್ಷಣಿಕ ನಿಹಿತಾರ್ಥಗಳು

- ಬಾಲಕ ಮತ್ತು ಬಾಲಕಿಯರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಸಾಧ್ಯವಾದಷ್ಟು ಉತ್ತಮ ಪರಿಸರವನ್ನು ಒದಗಿಸಬೇಕು.
- ಶಿಕ್ಷಕರು ಬಾಲಕ ಮತ್ತು ಬಾಲಕಿಯರಿಗೆ ಇಂದಿನ ಕಾಲದಲ್ಲಿ ಶೈಕ್ಷಣಿಕ ಸಾಧನೆಯ ಅವಶ್ಯಕತೆ ಎಷ್ಟು ಮುಖ್ಯ ಎಂಬುದನ್ನು ತಿಳಿಸಿಕೊಡಬೇಕು.

## ಮುಂದಿನ ಸಂಶೋಧನೆಗೆ ಸಲಹೆಗಳು

- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಬಾಲಕ ಮತ್ತು ಬಾಲಕಿಯರ ಶೈಕ್ಷಣಿಕ ಸಾಧನೆಗಳ ಕುರಿತು ಅಧ್ಯಯನ ಮಾಡುವುದು.
- ಶೈಕ್ಷಣಿಕ ಸಾಧನೆಗಾಗಿ ಬಾಲಕ ಮತ್ತು ಬಾಲಕಿಯರು ಎದುರಿಸುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡುವುದು.

## ಆಕರ ಗ್ರಂಥಗಳು


- **ಡಾ. ಯಶೋಧರ. ಕೆ :** 2005 "ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ" ಮೈಸೂರು ಶೀಬಾ ಪ್ರಕಾಶನ.
- **ಆರ್. ಇಂದಿರಾ :** 1995 "ಭಾರತೀಯ ಸಮಾಜ ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ
- **ಡಾ. ಪದ್ಮಪ್ರಸಾದ್ ಎಸ್. ಡಿ. :** 1992 "ಶೈಕ್ಷಣಿಕ ಸಂಶೋಧನೆ ಧಾರವಾಡ, ಡೆಪ್ಯೂಟಿ ಚನ್ನಬಸಪ್ಪ ಪ್ರಕಾಶನ.


■■

– 17 ನೇ ಪುಟದಿಂದ ಮುಂದುವರೆದುದು

ಹೊಸಪೇಟೆ
ಪುರಾತನಪೇಟೆ
ಬಾಗಲಕೋಟೆ

## 3. ಜನಾಂಗವಾಚಿ ಗ್ರಾಮನಾಮಗಳು

ಆದಿ ಮಾನವನು ತಮ್ಮ ವಾಸ್ತವ್ಯದ ನೆಲೆಗಳಿಗೆ ನಿಸರ್ಗದ ನಾಮಗಳನ್ನಿಟ್ಟು ಬರುಬರುತ್ತ ನಾಗರಿಕ ಬದುಕಿಗೆ ಹೊಂದಿಕೊಂಡಂತೆ ಸಮಾಜದ ಪ್ರಮುಖವಾದ ಅಂಶಗಳಾದ ಜಾತಿ, ಜನಾಂಗ, ವೃತ್ತಿ, ದೈವವಾಚಿ ಅಂಶಗಳನ್ನು ಗ್ರಾಮದ ಹೆಸರಿನಲ್ಲಿ ಸೇರಿಸಿರುವುದು ಕಂಡುಬರುತ್ತದೆ.

**ಉದಾಹರಣೆಗೆ :** ಚಿನಿವಾಲರಕೊಪ್ಪ
ಕುಂಬಾರಹಟ್ಟಿ
ಕುರುಬರಹಟ್ಟಿ
ರಡ್ಡೇರ ತಿಮ್ಮಾಪೂರ

## 4. ವ್ಯಕ್ತಿವಾಚಿ ಗ್ರಾಮನಾಮಗಳು

ಹಿಂದೆ ಯಾವುದೋ ಒಬ್ಬ ವ್ಯಕ್ತಿ, ನಾಯಕ, ಅರಸ, ಸಾಹಸಿ, ಧನವಂತ, ಇಲ್ಲವೇ ತಾವು ನಂಬಿದ ಧರ್ಮದ ಮುಖಂಡರು, ಸಾಧು ಸಂತರ ಹೆಸರಿನಿಂದ ಗ್ರಾಮಗಳನ್ನು ಗುರುತಿಸುವ ಪರಂಪರೆಯು ಬೆಳೆದುಬಂದಿದೆ. ಇದಕ್ಕೆ ಜನರಲ್ಲಿ ಪ್ರಚಲಿತವಿರುವ ವ್ಯಕ್ತಿಪೂಜೆ ಅಥವಾ ನಾಯಕ ಪೂಜೆಯ ಸ್ವಭಾವ ಅಥವಾ ಪರಂಪರೆಯು ಹಿನ್ನೆಲೆಯಾಗಿದ್ದದು ಕಂಡುಬರುತ್ತದೆ.

**ಉದಾಹರಣೆಗೆ :** ಮಹಾಲಿಂಗಪೂರ
ಸಿದ್ದನಕೊಳ್ಳ (ಸಿದ್ಧರು ನೆಲೆಸಿದ ಕೊಳ್ಳ)
ಭದ್ರಗಿರಿ (ಭದ್ರಬಾಹು ಯತಿಗಳು ನೆಲೆಸಿದ ಗಿರಿ)
ನಾಗನೂರು (ನಾಗನ ಊರು)
ಸಾಹುಕಾರಜಂಬಗಿ (ಶ್ರೀಮಂತನು ನೆಲೆಸಿದ ಊರು)
ಅಮೀನಗಡ (ಅಮೀನಸಾಬ್–ಸೈನ್ಯದ ಮುಖಂಡ ನೆಲೆಸಿದ ಕೋಟೆ)
ಗಲಗಲಿ (ಗಾವಲ ಮಹರ್ಷಿಗಳು ನೆಲೆಸಿದ ಊರು)

## 5. ಆದರ್ಶವಾಚಿ ಗ್ರಾಮನಾಮಗಳು

ಗ್ರಾಮದ ನಿವಾಸಿಗಳು ಇರಿಸಿಕೊಂಡ ಆದರ್ಶ ಮತ್ತು ಪಾಲಿಸಿಕೊಂಡು ಬಂದ ಪದ್ಧತಿಗಳು ಗ್ರಾಮದ ಹೆಸರಿನಲ್ಲಿ ಸೇರಿಕೊಂಡು ಪ್ರಚಲಿತದಲ್ಲಿರುವುದು ಕಂಡುಬರುತ್ತದೆ.

**ಉದಾಹರಣೆಗೆ :** ಹಲಗಲಿ (ಹಲವು ಕಲಿಗಳ ಊರು)
ಸಂತರ ಹಳ್ಳಿ
ಸಾಧನಕೇರಿ
ಸಂತೆ ಕೆಲ್ಲೂರು (ಸಂತರ ಕೆಲೂರು)
ಸುಳ್ಳರಹಟ್ಟಿ
ಬ್ಯಾಡರಹಟ್ಟಿ (ಬೇಟೆಯನ್ನು ಆದರ್ಶಮಯ ಕಸಬು ಎಂದು ನಂಬಿದವರ ಊರು)

ಗ್ರಾಮಗಳು ತಮ್ಮ ನಾಮಗಳನ್ನು ಪುರಾತನ ಕಾಲದಿಂದಲೂ ಬದಲಿಸದೇ ಉಳಿಸಿಕೊಂಡು ಬಂದಿರುತ್ತವೆ ಎಂದು ಹೇಳಲು ಬರುವುದಿಲ್ಲ. ಕಾಲಾನಂತರದಲ್ಲಿ ವರ್ಷಗಳು ಕಳೆದಂತೆ ಹಲವಾರು ಕಾರಣಗಳಿಂದ ಆ ನಾಮಗಳಲ್ಲಿ ಬದಲಾವಣೆ ಸಂಭವಿಸಿದುದನ್ನು ನಾವು ಗಮನಿಸಬಹುದು. ಪ್ರತಿಯೊಂದು ಸ್ಥಳಗಳಿಗೆ ಹೆಸರುಗಳನ್ನು ಗುರುತಿಸಿರುವುದು ಮನುಷ್ಯನ ಆರಂಭಿಕ ಕಲ್ಪನಾಶಕ್ತಿ ಹಾಗೂ ಅದ್ಭುತವಾದ ಜ್ಞಾನದ ಪ್ರತಿಫಲವಾಗಿ ಮೂಡಿಬಂದವು ಎಂದು ಹೇಳಬಹುದು ಹೊರತು ಸಹಜವಾಗಿ ಹುಟ್ಟಿಕೊಂಡವು ಅಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಸ್ಥಳನಾಮಗಳಿಗೆ ಅದ್ಭುತವಾದ ಅಪಾರವಾದ ಹಿನ್ನೆಲೆ ಇದ್ದೆ ಇರುತ್ತದೆ. ಪ್ರತಿಯೊಂದು ಗ್ರಾಮದ ಹೆಸರು, ಇಲ್ಲವೇ ಸ್ಥಳಗಳ ಹೆಸರಿನಲ್ಲಿ ಇಂಥಹ ಯಾವುದಾದರೂ ಹಿನ್ನೆಲೆಯು ಅಡಕವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹೀಗೆ ಅಜ್ಞಾತವಾಗಿ ಹಿರಿಯರ ಮನಸ್ಸಿನಿಂದ ಮರೆಯಾಗುವ ಮುನ್ನವೇ ಅಂತಹ ನಾಮಗಳ ಹಿನ್ನೆಲೆಯ ಕಥೆಗಳನ್ನು ಸಂಗ್ರಹಿಸುವ ಅಗತ್ಯವು ತುಂಬಾ ಇದೆ. ಇದು ನಮ್ಮ ಸಂಸ್ಕೃತಿಯನ್ನು ಪುನಃ ನೆನಪಿಸಿಕೊಡುವುದರಲ್ಲಿ ಸಂಶಯವಿಲ್ಲ.

## ಆಕರ ಗ್ರಂಥಗಳು


- **ಕಲಬುರ್ಗಿ ಎಂ. ಎಂ. :** ನಾಮ ವಿಜ್ಞಾನ, ಬೆಂಗಳೂರು ವಿಶ್ವವಿದ್ಯಾಲಯ–1989
- **ಚಿದಾನಂದ ಮೂರ್ತಿ :** ವಾಗಾರ್ಥ, ಬಾಪ್ಕೋ ಪ್ರಕಾಶನ ಬೆಂಗಳೂರು – 1981
- **ಪಾಟೀಲ ವಿ. ಎಲ್. :** ಅಡ್ಡಹೆಸರು, ಕೇ. ಚಿ. ಪ್ರಕಾಶನ, ಧಾರವಾಡ – 2005
- **ಡಾ. ಸಂಗಮೇಶ ಸವದತ್ತಿಮಠ :** ಭಾಷಾಸಂಗಮ, ರೂಪರಶ್ಮಿ ಪ್ರಕಾಶನ ಕಲಬುರ್ಗಿ – 1998


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# "ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ – ವಿಶ್ಲೇಷಣಾತ್ಮಕ ಅಧ್ಯಯನ"

✍ **ಚಂದ್ರಪ್ಪ ಬಿ.,** ಸಂಶೋಧನಾ ವಿದ್ಯಾರ್ಥಿ, ಹಾಗೂ ಸಹಾಯಕ ಪ್ರಾಧ್ಯಾಪಕರು, ಶ್ರೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ.

✍ **ಡಾ. ಎಂ. ಎಂ. ಪಟ್ಟಣಶೆಟ್ಟಿ,** ವಿಶ್ರಾಂತ ಪ್ರಾಧ್ಯಾಪಕರು ಹಾಗೂ ಸಂಶೋಧನಾ ಮಾರ್ಗದರ್ಶಕರು, ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.


## ಅಧ್ಯಯನದ ಸಾರಾಂಶ

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಕುರಿತು ಅಧ್ಯಯನ ಮಾಡಲು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ 24 ಪ್ರೌಢಶಾಲೆಗಳಿಂದ 600 ವಿದ್ಯಾರ್ಥಿಗಳನ್ನು ಸಂಶೋಧನ ಅಧ್ಯಯನಕ್ಕೆ ಬಳಸಿಕೊಂಡಿದ್ದು, ಮನೆಯ ವಾತಾವರಣ ಕುರಿತು ಮಾಹಿತಿಯನ್ನು ಸಂಗ್ರಹಿಸಲು ಡಾ. ಕರುಣಾಶಂಕರ್ ಮಿಶ್ರಾರವರು ರೂಪಿಸಿದ ಮನೆಯ ವಾತಾವರಣದ ಪರೀಕ್ಷಣವನ್ನು ಬಳಸಿ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ದತ್ತಾಂಶ ವಿಶ್ಲೇಷಣೆಗೆ 't' ಪರೀಕ್ಷೆ,ಒಂದು ಮಾರ್ಗದ ಪ್ರಸರಣೆಯ ವಿಚಲನೆಯ ವಿಶ್ಲೇಷಣೆ (One way ANOVA) ಹಾಗೂ Tukeys multiple posthoc procedure ತಂತ್ರಗಳನ್ನು ಬಳಸಿ ದತ್ತಾಂಶವನ್ನು ವಿಶ್ಲೇಷಣೆಯನ್ನು ಮಾಡಲಾಗಿದ್ದು, ಈ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಸಮಾನತೆ ಕಂಡು ಬಂದಿದ್ದು, ಈ ಎರಡು ಗುಂಪುಗಳಿಗಿಂತ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿದೆ. ಹಾಗೆಯೇ ಬಾಲಕರ ಮನೆಯ ವಾತಾವರಣಕ್ಕಿಂತ ಬಾಲಕಿಯುರ ಮನೆಯು ವಾತಾವರಣವು ಉತ್ತಮವಾಗಿರುತ್ತದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಿಂತ ನಗರ ಪ್ರದೇಶದ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿರುತ್ತದೆ. ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಿಂತ ಅನುದಾನಿತ ಪ್ರೌಢಶಾಲಾ ವಿದ್ಯಾರ್ಥಿಗಳು ಉತ್ತಮ ಮನೆಯ ವಾತಾವರಣವನ್ನು ಹೊಂದಿದ್ದರು ಸಹ ಈ ಎರಡು ಗುಂಪುಗಳಿಗಿಂತ ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿದೆ. ಚಿತ್ರದುರ್ಗ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳು ಮನೆಯ ವಾತಾವರಣಕ್ಕಿಂತ ದಾವಣಗೆರೆ ಜಿಲ್ಲೆಯ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮ ಮಟ್ಟದಲ್ಲಿ ಇದೆ ಎಂದು ಕಂಡು ಬಂದಿದೆ. ಈ ರೀತಿಯ ಫಲಿತಾಂಶಗಳು ಈ ಅಧ್ಯಯನದಿಂದ ತಿಳಿದು ಬಂದಿರುತ್ತದೆ.


## ಪೀಠಿಕೆ

ಭಾರತ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆ ಹೊಂದಿದ ನಾಡಾಗಿದ್ದು, ವಿವಿಧ ಧರ್ಮ ಮತ್ತು ಜಾತಿಗಳನ್ನು ಹೊಂದಿದೆ. ಸ್ವಾತಂತ್ರ ಪೂರ್ವದಲ್ಲಿ ಶಿಕ್ಷಣ ಸುಧಾರಣೆಗೆ ಪ್ರಾಧ್ಯಾನತೆ ನೀಡಲಾಗಿದ್ದರು ಸಹ, ಸ್ವಾತಂತ್ರ್ಯನಂತರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರವು ಅನೇಕ ಉತ್ತೇಜನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶೈಕ್ಷಣಿಕ ಪ್ರಗತಿಯನ್ನುಂಟು ಮಾಡಲು ಪ್ರಯತ್ನಿಸುತ್ತಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಪ್ರಗತಿ ಸಾಧಿಸಲು ಮನೆಯ ವಾತಾವರಣವು ತುಂಬ ಪ್ರಮುಖ್ಯತೆಯನ್ನು ಪಡೆಯುತ್ತದೆ.

## ಅಧ್ಯಯನದ ಅಗತ್ಯತೆ

ಈ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಮಟ್ಟವನ್ನು ಗುರುತಿಸಿ ಕಂಡು ಬಂದಂತಹ ಫಲಿತಾಂಶಗಳನ್ನು ಶಿಕ್ಷಕರು, ಮುಖ್ಯೋಪಾಧ್ಯಾಯರು, ಶಿಕ್ಷಣತಜ್ಞರುಗಳಿಗೆ ಸೂಕ್ತ ಮಾಹಿತಿಯನ್ನು ಒದಗಿಸಲು, ಈ ಅಧ್ಯಯನದ ಅವಶ್ಯಕತೆ ಇದೆ.

## ಅಧ್ಯಯನದ ಉದ್ದೇಶಗಳು

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಕುರಿತು ಅಧ್ಯಯನ ಮಾಡುವುದು.

2. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಕುರಿತು ಅಧ್ಯಯನ ಮಾಡುವುದು.

3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಬಾಲಕರ ಮತ್ತು ಬಾಲಕಿಯರ ಮನೆಯ ವಾತಾವರಣದಲ್ಲಿ ವ್ಯತ್ಯಾಸವನ್ನು ಕುರಿತು ಅಧ್ಯಯನ ಮಾಡುವುದು.

4. ಗ್ರಾಮೀಣ ಮತ್ತು ನಗರ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟವನ್ನು ಕುರಿತು ಅಧ್ಯಯನ ಮಾಡುವುದು.

5. ಸರ್ಕಾರಿ, ಅನುದಾನಿತ, ಅನುದಾನ ರಹಿತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟವನ್ನು ಕುರಿತು ಅಧ್ಯಯನ ತಿಳಿಯುವುದು.

## ಪ್ರಾಕಲ್ಪನೆಗಳು

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಇರುವುದಿಲ್ಲ.

2. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

ISSN : 2249-2429 ಸಂಶೋಧನೆ RNI REG.NO.KARKAN/2011/38712

3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಬಾಲಕರ ಮತ್ತು ಬಾಲಕಿಯರ ಮನೆಯ ವಾತಾವರಣದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.

4. ಗ್ರಾಮೀಣ ಮತ್ತು ನಗರ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಗಣನೀಯವಾದ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

5. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

## ಸಂಶೋಧನ ವಿಧಾನ

ಈ ಸಂಶೋಧನೆಯು ವಿವರಣಾತ್ಮಕ – ವಿಶ್ಲೇಷಣಾತ್ಮಕ ವಿಧಾನವನ್ನು ಒಳಗೊಂಡಿದ್ದು, ಪ್ರಸ್ತುತ ಈ ಅಧ್ಯಯನದಲ್ಲಿ ಸಮೀಕ್ಷಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

**ಜನಸಮೂಹ ಮತ್ತು ಪ್ರತಿದರ್ಶಿ :** ಪ್ರಸ್ತುತ ಅಧ್ಯಯನದಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಸರ್ಕಾರಿ, ಅನುದಾನಿತ, ಅನುದಾನರಹಿತ ಒಟ್ಟು 24 ಪ್ರೌಢಶಾಲೆಗಳಿಗೆ ಭೇಟಿ ನೀಡಿ 9ನೇ ತರಗತಿಯ 600 ವಿದ್ಯಾರ್ಥಿಗಳನ್ನು ಸಂಶೋಧನ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪ್ರೌಢಶಾಲೆಗಳ ವಿವರ (ಜನಸಮೂಹ)**

| ಕ್ರ. ಸಂ. | ಜಿಲ್ಲೆಗಳು | ಜಿಲ್ಲೆಗಳ ಒಟ್ಟು ಶಾಲೆಗಳ ಸಂಖ್ಯೆ | ಜಿಲ್ಲೆಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | 9ನೇ ತರಗತಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ (ಜನ ಸಮೂಹ) |
|---|---|---|---|---|
| 1. | ಚಿತ್ರದುರ್ಗ | 431 | 62,348 | 10,755 |
| 2. | ದಾವಣಗೆರೆ | 494 | 82,791 | 28,323 |
| | Total | 925 | 1,45,139 | 39,079 |

**ಸಂಶೋಧನಾ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಸ್ತರೀಕೃತ ಯಾದೃಚ್ಛಿಕ ಪ್ರತಿದರ್ಶಿ**

| ಜಿಲ್ಲೆಗಳು | ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರತಿದರ್ಶಿ ಶಾಲೆಗಳು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿ– ಶಿಷ್ಟೇತರ | ಸಂಶೋಧನೆಗೆ ಬಳಸಿಕೊಂಡ ಪ್ರತಿದರ್ಶಿ ಗಳು |
|---|---|---|---|---|---|
| ಚಿತ್ರದುರ್ಗ | 12 | 118 | 99 | 83 | 300 |
| ದಾವಣಗೆರೆ | 12 | 72 | 61 | 167 | 300 |
| Total | 24 | 190 | 160 | 250 | 600 |

## ಅಧ್ಯಯನದ ಚರಾಂಶಗಳು

ಸಂಶೋಧನ ಚರಾಂಶ– ಮನೆಯ ವಾತಾವರಣ

ಮಧ್ಯಸ್ಥ ಚರಾಂಶಗಳು – ಶಾಲೆಯ ವಿಧ, ಸ್ಥಳ ಮತ್ತು ಲಿಂಗ.

## ದತ್ತಾಂಶ ಸಂಗ್ರಹಣೆ ಬಳಸಿದ ಸಾಧನಗಳು

**ಮನೆಯ ವಾತಾವರಣ ಪರೀಕ್ಷಣ :** ಈ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟವನ್ನು ಅಧ್ಯಯನ ಮಾಡಲು ಡಾ॥ ಕರುಣಾಶಂಕರ್ ಮಿಶ್ರಾರವರು ರೂಪಿಸಿರುವ ಮನೆಯ ವಾತಾವರಣದ ಸಾಧನವನ್ನು ಬಳಸಿಕೊಳ್ಳಲಾಗಿದ್ದು, ಈ ಸಾಧನದಲ್ಲಿ ಕೌಟುಂಬಿಕ ಪರಿಸರ, ಮಗುವಿನ ಸಾಮಾಜಿಕ ವಾತಾವರಣವನ್ನು ವಿವರಿಸುವ ರೀತಿಯಲ್ಲಿ ಇದರ ವಿನ್ಯಾಸವನ್ನು ರೂಪಿಸಲಾಗಿದೆ. ಈ ಪರೀಕ್ಷಣದ ಸಹಾಯದಿಂದ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಭಾವಾನಾತ್ಮಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ, ಗುಣಾತ್ಮಕ ಮತ್ತು ಪರಿಮಾಣಾತ್ಮಕವಾಗಿರುವಂತಹ ಅಂಶಗಳು ದೊರೆಯುತ್ತವೆ. ಮನೆಯ ವಾತಾವರಣದ ಪರೀಕ್ಷಣಗಳಲ್ಲಿ 10 ಪ್ರಮುಖ ಆಯಾಮಗಳಿದ್ದು, (1) ನಿಯಂತ್ರಣ (2) ಶಿಕ್ಷಣ (3) ಶಿಕ್ಷೆ (4) ಒಪ್ಪಿಗೆ(5) ಸಾಮಾಜಿಕ ಬೇರ್ಪಡಿಸುವಿಕೆ (6)ಬಹುಮಾನ (7) ಹಕ್ಕುಗಳ ನಷ್ಟ (8) ಪಾಲನೆ/ಪೋಷಣೆ (9) ತಿರಸ್ಕಾರ (10) ಅವಕಾಶಗಳನ್ನು ನೀಡುವುದು. ಈ ಪರಿಕಲ್ಪನೆಗಳ ಆಧಾರದ ಮೇಲೆ 100 ಪರೀಕ್ಷಾಂಶಗಳನ್ನು ಒಳಗೊಂಡಂತೆ ಮನೆಯ ವಾತಾವರಣ ಪರೀಕ್ಷಣವನ್ನು ರಚಿಸಲಾಗಿದೆ. ಈ ಪರೀಕ್ಷಾಂಶಗಳ ಮುಂದೆ ಬಹುತೇಕವಾಗಿ, ಸಾಮಾನ್ಯವಾಗಿ, ವಿರಳವಾಗಿ, ಬಹಳ ಕಡಿಮೆ, ಎಂದಿಗೂ ಇಲ್ಲ, ಎಂಬ ಪದಗಳಿದ್ದು, ಈ ಪದಗಳಲ್ಲಿ ಸೂಕ್ತವಾದ ಯಾವುದಾದರೂ ಪದದ ಮುಂದೆ (✓) ಗುರುತಿಸಬೇಕು. ಈ ಪರೀಕ್ಷಾಂಶಗಳಿಗೆ ಕ್ರಮವಾಗಿ ಅಂಕಗಳನ್ನು 5,4,3,2,1 ನೀಡಲಾಗಿದೆ. ಈ ಪರೀಕ್ಷಾಂಶಗಳ ಒಟ್ಟು ಅಂಕಗಳು 100 ರಿಂದ 500 ರವರೆಗೆ ಇರುವುದು. ಈ ಸಾಧನವನ್ನು ಬಳಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕೆ ಸಂಬಂಧಿಸಿದಂತೆ ದತ್ತಾಂಶವನ್ನು ಸಂಗ್ರಹಿಸಲಾಗಿದೆ.

## ದತ್ತಾಂಶ ವಿಶ್ಲೇಷಣೆಗೆ ಬಳಸಿದ ಸಂಖ್ಯಾಶಾಸ್ತ್ರೀಯ ತಂತ್ರಗಳು

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಬಗ್ಗೆ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆಗೆ (1) 't' ಪರೀಕ್ಷೆ (2) ಒಂದು ಮಾರ್ಗದ ಪ್ರಸರಣೆಯ ವಿಚಲನೆಯ ವಿಶ್ಲೇಷಣೆ (One way ANOVA) (3)Tukeys multiple posthoc procedure ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸಿಕೊಂಡು ದತ್ತಾಂಶ ವಿಶ್ಲೇಷಣೆ ಮಾಡಲಾಗಿದೆ.

**ಪ್ರಾಕಲ್ಪನೆ–1 :** ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ಗಣನೀಯ ವ್ಯತ್ಯಾಸ ಕಂಡು ಬರುವುದಿಲ್ಲ.

**ಕೋಷ್ಟಕ–1:– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಸರಾಸರಿ 'F' ಮೌಲ್ಯ ಮತ್ತು 'P' ಮೌಲ್ಯವನ್ನು ಸೂಚಿಸುವ ಕೋಷ್ಟಕ.**

| ಪ್ರಸರಣದ ಮೂಲ (SV) | ಸ್ವತಂತ್ರದ ಪ್ರಮಾಣ (Df) | ವರ್ಗಗಳ ಮೊತ್ತ (SS) | ವರ್ಗಗಳ ಸರಾಸರಿ (MS) | 'F' ಮೌಲ್ಯ | 'P' ಮೌಲ್ಯ |
|---|---|---|---|---|---|
| ಜಾತಿಗಳ ಮಧ್ಯ (Between Castes) | 2 | 31305,53 | 15652.76 | | |
| ಜಾತಿಗಳ ಒಳಗಿನ (Within Castes) | 597 | 1483328.87 | 2484.64 | 6.2998 | 0.0020* |
| ಒಟ್ಟು (Total) | 599 | 1514634.39 | | | |

$* P < 0.05$

ಈ ಮೇಲ್ಕಂಡ ಕೋಷ್ಟಕದಲ್ಲಿ 'F' ಮೌಲ್ಯವು 6.2998 ಆಗಿದ್ದು, ಇದು 0.05 ಮಟ್ಟದಲ್ಲಿ ಮಹತ್ವಪೂರ್ಣವಾಗಿರುವುದರಿಂದ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಹೋಲಿಕೆಯನ್ನು ಸೂಚಿಸುವ ಕೋಷ್ಟಕ**

| ಜಾತಿ (Caste) | ಪರಿಶಿಷ್ಟ ಜಾತಿ (SC) | ಪರಿಶಿಷ್ಟ ಪಂಗಡ (ST) | ಪರಿಶಿಷ್ಟೇತರ (Others) |
|---|---|---|---|
| ಒಟ್ಟು (N) | 190 | 160 | 250 |
| ಸರಾಸರಿ (Mean) | 179.57 | 170.42 | 188.22 |
| ಮಾನಕ ವಿಚಲನೆ (SD) | 49.91 | 41.52 | 54.46 |
| ಪರಿಶಿಷ್ಟಜಾತಿ (SC) | | | |
| ಪರಿಶಿಷ್ಟ ಪಂಗಡ (ST) | P=0.2008 | | |
| ಪರಿಶಿಷ್ಟೇತರರು (Others) | P=0.1685 | ಕ=0.0012* | – |

* $P < 0.05$

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ 5% ಮಹತ್ವಪೂರ್ಣ ಮಟ್ಟದಲ್ಲಿ ವ್ಯತ್ಯಾಸ ಕಂಡುಬರುವುದಿಲ್ಲ. ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಮಟ್ಟದಲ್ಲಿ ಸಮಾನತೆ ಕಂಡು ಬಂದಿದೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ 5% ಮಹತ್ವಪೂರ್ಣ ಮಟ್ಟದಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಅಂದರೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕಿಂತ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿರುವುದು ಕಂಡು ಬಂದಿದೆ.
- ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ 5% ಮಹತ್ವಪೂರ್ಣ ಮಟ್ಟದಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಅಂದರೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕಿಂತ ಪರಿಶಿಷ್ಟೇತರಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿರುವುದು ಕಂಡು ಬಂದಿದೆ.
- ವೆಂಕಟರಾಮು ಎಂ. ವಿ. (2011) ಮತ್ತು ಮಂಜುಳ. ಡಿ. (2013) ವಿವರಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ಧೃಡೀಕರಿಸಲಾಗಿದೆ.

**ಪ್ರಾಕಲ್ಪನೆ–2 :** ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಗಣನೀಯವಾದ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

ಈ ಮುಂದಿನ ಕೋಷ್ಟಕದ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣ ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿಕ

**ಕೋಷ್ಟಕ–2 :– ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟವನ್ನು ಸೂಚಿಸುವ ಕೋಷ್ಟಕ.**

| ಜಿಲ್ಲೆಗಳು (Districts) | ಒಟ್ಟು (N) | ಸರಾಸರಿ (Mean) | ಮಾನಕ ವಿಚಲನೆ (SS) | ಪ್ರಮಾಣಿಕ ದೋಷ (SE) | 'F' ಮೌಲ್ಯ | 'P' ಮೌಲ್ಯ |
|---|---|---|---|---|---|---|
| ಚಿತ್ರದುರ್ಗ (Chitradurga) | 300 | 170.19 | 36.85 | 2.13 | –5.2502 | 0.0001* |
| ದಾವಣಗೆರೆ (Davanagere) | 300 | 191.28 | 59.03 | 3.41 | | |

* $P < 0.05$

ದೋಷ ಕ್ರಮವಾಗಿ 170.19, 36.85, 2.13 ಇದ್ದರೆ, ದಾವಣಗೆರೆ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿಕ ದೋಷ ಕ್ರಮವಾಗಿ 191.28, 59.03, 3.41 ಬಂದಿರುತ್ತದೆ. ಇವುಗಳಿಂದ ದೊರೆತ 't' ಮೌಲ್ಯವು–5.2502 ಆಗಿದ್ದು, ಇದು 0.05ಮಟ್ಟದಲ್ಲಿ ಮಹತ್ವಪೂರ್ಣವಾಗಿರುವುದರಿಂದ ಶೂನ್ಯ ಪ್ರಾಕಲ್ಪನೆ ತಿರಿಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ. ಅಂದರೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳ (170.19) ಗಿಂತ ಮನೆಯ ವಾತಾವರಣದಲ್ಲಿ ದಾವಣಗೆರೆ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳ (191.28) ಮನೆಯ ವಾತಾವರಣದ ಮಟ್ಟವು ಉತ್ತಮವಾಗಿದೆ.

**ಪ್ರಾಕಲ್ಪನೆ 3 :** ಬಾಲಕರ ಮತ್ತು ಬಾಲಕಿಯರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡು ಬರುವುದಿಲ್ಲ.

**ಕೋಷ್ಟಕ–3 : ಬಾಲಕರ ಮತ್ತು ಬಾಲಕಿಯರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟವನ್ನು ಸೂಚಿಸುವ ಕೋಷ್ಟಕ.**

| ಲಿಂಗ (Gender) | ಒಟ್ಟು (N) | ಸರಾಸರಿ (Mean) | ಮಾನಕ ವಿಚಲನೆ (SD) | ಪ್ರಮಾಣಿಕ ದೋಷ (SE) | 't' ಮೌಲ್ಯ | 'P' ಮೌಲ್ಯ |
|---|---|---|---|---|---|---|
| ಬಾಲಕರು (Boys) | 300 | 175.41 | 47.66 | 2.75 | –2.6072 | 0.0094* |
| ಬಾಲಕಿಯರು (Girls) | 300 | 186.06 | 52.32 | 3.02 | | |

* $P < 0.05$

ಈ ಮೇಲ್ಕಂಡ ಕೋಷ್ಟಕದ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಬಾಲಕರ ಮತ್ತು ಬಾಲಕಿಯರ ಮನೆಯ ವಾತಾವರಣವು ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿಕ ದೋಷ ಕ್ರಮವಾಗಿ 175.41, 47.66, 2.75 ಬಂದಿರುತ್ತದೆ. ಇದ್ದರೆ ಬಾಲಕಿಯರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿಕ ದೋಷ ಕ್ರಮವಾಗಿ 186.06, 52.32, 3.02 ಬಂದಿರುತ್ತದೆ.ಇವುಗಳಿಂದ ದೊರೆತ 't' ಮೌಲ್ಯವು–2.6072 ಆಗಿದ್ದು,

ISSN : 2249-2429 ಸಂಶೋಧನೆ RNI REG.NO.KARKAN/2011/38712

ಇದು 0.05 ಮಟ್ಟದಲ್ಲಿ ಮಹತ್ವಪೂರ್ಣವಾಗಿ ಇರುವುದರಿಂದ ಶೂನ್ಯ ಪ್ರಾಕಲ್ಪನೆ ತಿರಿಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ. ಅಂದರೆ ಬಾಲಕರ ಮತ್ತು ಬಾಲಕಿಯರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

- ಪ್ರೌಢಶಾಲಾ ಬಾಲಕರ ಮನೆಯ ವಾತಾವರಣದ (175.41) ಮಟ್ಟಕ್ಕಿಂತ ಪ್ರೌಢಶಾಲಾ ಬಾಲಕಿಯರ ಮನೆಯ ವಾತಾವರಣದ (186.06) ಮಟ್ಟವು ಹೆಚ್ಚಾಗಿರುತ್ತದೆ.
- ಲಕ್ಷ್ಮೀ.ಎನ್. (2001) ಮತ್ತು ಮೈಕಲ್ ಬೆನ್ನೋ.ಎ. (1994) ವಿವರಗಳ ಅಧ್ಯಯನದಿಂದ ದೊರೆತ ಫಲಿತಾಂಶ ಮತ್ತು ಪ್ರಸ್ತುತ ಅಧ್ಯಯನದಿಂದ ದೊರೆತ ಫಲಿತಾಂಶ ಒಂದೇ ಆಗಿರುವುದರಿಂದ ಪ್ರಸ್ತುತ ಫಲಿತಾಂಶವನ್ನು ಧೃಡೀಕರಿಸಲಾಗಿದೆ.

**ಪ್ರಾಕಲ್ಪನೆ 4 :** ಗ್ರಾಮೀಣ ಮತ್ತು ನಗರ ಪ್ರದೇಶದ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಗಣನೀಯವಾದ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

**ಕೋಷ್ಟಕ-4 : ಗ್ರಾಮೀಣ ಮತ್ತು ನಗರ ಪ್ರದೇಶದ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವನ್ನು ಕುರಿತು t-ಮೌಲ್ಯ ಸೂಚಿಸುವ ಕೋಷ್ಟಕ.**

| ಕ್ಷೇತ್ರ (Location) | ಒಟ್ಟು (N) | ಸರಾಸರಿ (Mean) | ಮಾನಕ ವಿಚಲನೆ (SD) | ಪ್ರಮಾಣಿಕ ದೋಷ (SE) | 't' ಮೌಲ್ಯ | 'P' ಮೌಲ್ಯ |
|---|---|---|---|---|---|---|
| ಗ್ರಾಮೀಣ (Rural) | 300 | 166.97 | 41.18 | 2.38 | –6.9670 | 0.0001* |
| ನಗರ (Urban) | 300 | 194.50 | 54.68 | 3.16 | | |

* $P < 0.05$

ಈ ಮೇಲ್ಕಂಡ ಕೋಷ್ಟಕದ ಪ್ರಕಾರ ಗ್ರಾಮೀಣ ಪ್ರದೇಶದ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿಕ ದೋಷ ಕ್ರಮವಾಗಿ 166.97, 41.18, 2.38 ಬಂದಿರುತ್ತದೆ. ಇದ್ದರೆ ನಗರ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಸರಾಸರಿ, ಮಾನಕ ವಿಚಲನೆ ಮತ್ತು ಪ್ರಮಾಣಿಕ ದೋಷ ಕ್ರಮವಾಗಿ 194.50, 54.68, 3.16 ಬಂದಿರುತ್ತದೆ. ಇವುಗಳಿಂದ ದೊರೆತ 't' ಮೌಲ್ಯವು –6.9670 ಆಗಿದ್ದು, ಇದು 0.05ಮಟ್ಟದಲ್ಲಿ ಮಹತ್ವಪೂರ್ಣ ವಾಗಿರುವುದರಿಂದ ಶೂನ್ಯ ಪ್ರಾಕಲ್ಪನೆ ತಿರಿಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಗ್ರಾಮೀಣ ಮತ್ತು ನಗರ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

- ಗ್ರಾಮೀಣ ಪ್ರದೇಶದ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ (166.97) ಮಟ್ಟಕ್ಕಿಂತ ನಗರ ಪ್ರದೇಶದ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು (194.50) ಮಟ್ಟವು ಉತ್ತಮವಾಗಿದೆ.

**ಪ್ರಾಕಲ್ಪನೆ 5 :** ಸರ್ಕಾರಿ, ಅನುದಾನಿತ, ಅನುದಾನ ರಹಿತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

**ಕೋಷ್ಟಕ-5 : ಸರ್ಕಾರಿ, ಅನುದಾನಿತ, ಅನುದಾನ ರಹಿತಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಮನೆಯ ವಾತಾವರಣದ ಸರಾಸರಿ ಮೌಲ್ಯವು 'F' ಮೌಲ್ಯವನ್ನು ಸೂಚಿಸುವ ಕೋಷ್ಟಕ.**

| ಪ್ರಕರಣದ ಮೂಲ (SV) | ಸ್ವತಂತ್ರದ ಪ್ರಮಾಣ (Df) | ವರ್ಗಗಳ ಮೊತ್ತ (SS) | ವರ್ಗಗಳ ಸರಾಸರಿ (MS) | 'F' ಮೌಲ್ಯ | 'P' ಮೌಲ್ಯ |
|---|---|---|---|---|---|
| ಸಂಸ್ಥೆಗಳ ಮಧ್ಯ (Between Management | 2 | 19316.76 | 9658.40 | –3.8561 | 0.0217* |
| ಸಂಸ್ಥೆಗಳ ಒಳಗೆ (within Management | 597 | 1495317.60 | 2504.72 | | |
| ಒಟ್ಟು | 599 | 1514634.39 | | | |

* $P < 0.05$

ಈ ಮೇಲ್ಕಂಡ ಕೋಷ್ಟಕದಲ್ಲಿ 'F' ಮೌಲ್ಯವು 3.8561 ಆಗಿದ್ದು, ಇದು 0.05ಮಟ್ಟದಲ್ಲಿ ಮಹತ್ವಪೂರ್ಣವಾಗಿರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಲಾಗಿದೆ. ಬದಲಿ ಪ್ರಾಕಲ್ಪನೆಯನ್ನು ರಚಿಸಲಾಗಿದೆ.

ಅಂದರೆ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳಮನೆಯ ವಾತಾವರಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ಸರ್ಕಾರಿ, ಅನುದಾನಿತ ಪ್ರೌಢಶಾಲೆಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಅನುದಾನ ರಹಿತಪ್ರೌಢಶಾಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮ ವಾಗಿರುವುದು ಕಂಡು ಬಂದಿದೆ.

**ಸರ್ಕಾರಿ ಅನುದಾನಿತ, ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವನ್ನು ಸೂಚಿಸುವ ಕೋಷ್ಟಕ**

| ಸಂಸ್ಥೆಗಳು (Managements) | ಸರಕಾರಿ (Govt) | ಅನುದಾನಿತ (Aided) | ಅನುದಾನ ರಹಿತ (Unaided) |
|---|---|---|---|
| ಒಟ್ಟು (N) | 167 | 209 | 224 |
| ಸರಾಸರಿ (Mean) | 173.04 | 179.99 | 187.18 |
| ಮಾನಕ ವಿಚಲನೆ (SD) | 53.51 | 45.93 | 51.05 |
| ಸರಕಾರಿ (Govt) | | | |
| ಪರಿಶಿಷ್ಟ ಪಂಗಡ (Aided) | P=0.3741 | | |
| ಅನುದಾನ ರಹಿತ (UnAided) | P=0.158* | P=0.2936 | |

* $P < 0.05$

- ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ 5% ಮಹತ್ವಪೂರ್ಣ ಮಟ್ಟದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಅಂದರೆ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕಿಂತ ಅನುದಾನಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿರುವುದು ಕಂಡು ಬಂದಿದೆ.
- ಸರ್ಕಾರಿ ಮತ್ತು ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ 5% ಮಹತ್ವಪೂರ್ಣ ಮಟ್ಟದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಅಂದರೆ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣಕ್ಕಿಂತ ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿದೆ.

• ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ 5% ಮಹತ್ವಪೂರ್ಣಮಟ್ಟದಲ್ಲಿ ವ್ಯತ್ಯಾಸ ಕಂಡುಬರುವುದಿಲ್ಲ. ಅಂದರೆ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ಸಮಾನತೆ ಕಂಡು ಬರುತ್ತದೆ.

## ಅಧ್ಯಯನದ ಫಲಿತಾಂಶಗಳು

1. ಈ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗಿಂತ ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣವು ಉತ್ತಮವಾಗಿದೆ.
2. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಚಿತ್ರದುರ್ಗ ಜಿಲ್ಲೆಗಿಂತ ದಾವಣಗೆರೆ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದ ಮಟ್ಟವು ಉತ್ತಮ ವಾಗಿರುತ್ತದೆ.
3. ಬಾಲಕರ ಮತ್ತು ಬಾಲಕಿಯರ ಮನೆಯ ವಾತಾವರಣದ ಮಟ್ಟದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಬಾಲಕರಿಗಿಂತ ಬಾಲಕಿಯರು ಉತ್ತಮ ಮನೆಯ ವಾತಾವರಣವನ್ನು ಹೊಂದಿರುವರು.
4. ಗ್ರಾಮೀಣ ಮತ್ತು ನಗರ ಪ್ರದೇಶದ ಮನೆಯ ವಾತಾವರಣದ ಮಟ್ಟದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಗ್ರಾಮೀಣದ ಪ್ರದೇಶದ ವಿದ್ಯಾರ್ಥಿಗಳಿಗಿಂತ ನಗರ ಪ್ರದೇಶದ ವಿದ್ಯಾರ್ಥಿಗಳು ಉತ್ತಮ ಮನೆಯ ವಾತಾವರಣದ ಮಟ್ಟವನ್ನು ಹೊಂದಿರುವರು.
5. ಸರ್ಕಾರಿ, ಅನುದಾನಿತ, ಅನುದಾನ ರಹಿತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರರ ಪ್ರೌಢಶಾಲಾ ವಿದ್ಯಾರ್ಥಿಗಳ ಮನೆಯ ವಾತಾವರಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಸರ್ಕಾರಿ ಪ್ರೌಢ ಶಾಲೆಗಳಿಗಿಂತ ಅನುದಾನಿತ ಪ್ರೌಢಶಾಲಾ ವಿದ್ಯಾರ್ಥಿಗಳು ಉತ್ತಮ ಮನೆಯ ವಾತಾವರಣವನ್ನು ಹೊಂದಿರುವರು. ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳು ಎರಡು ಗುಂಪುಗಳಿಗಿಂತ ಉತ್ತಮ ಮನೆಯ ವಾತಾವರಣದ ಮಟ್ಟವನ್ನು ಹೊಂದಿರುವುದು ಕಂಡು ಬಂದಿದೆ.

## ಉಪಸಂಹಾರ

ಈ ಅಧ್ಯಯನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಬಾಲಕರ ಮತ್ತು ಬಾಲಕಿಯರ ಮನೆಯ ವಾತಾವರಣವು ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಪ್ರೌಢಶಾಲೆಗಳಲ್ಲಿ ಮನೆಯ ವಾತಾವರಣದ ಅರಿವು ಅವಶ್ಯಕವಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಮನೆಯ ವಾತಾವರಣವನ್ನು ಉತ್ತಮಗೊಳಿಸುವ ಮೂಲಕ ಅವರ ಸಾಧನೆಯನ್ನು ಹೆಚ್ಚಿಸಬಹುದಾಗಿದೆ.

## ಆಕರ ಗ್ರಂಥಗಳು


- **ಲಕ್ಷ್ಮೀ ಎನ್. :** "ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟೇತರ ಬಾಲಕಿಯರ ಸಮಸ್ಯೆಯ – ಒಂದು ವಿಶ್ಲೇಷಣಾತ್ಮಕ ಅಧ್ಯಯನ". ಮೈಸೂರು ವಿಶ್ವವಿದ್ಯಾನಿಲಯ, ಪಿಹೆಚ್.ಡಿ.ಸಂಶೋಧನಾ ಮಹಾಪ್ರಬಂಧ (2001).
- **ಮಂಜುಳ ಡಿ. :** "ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಹೊಂದಿರುವ ಪ್ರೌಢಶಾಲಾ ವಿದ್ಯಾರ್ಥಿಗಳ ಸಾಧನೆ, ಅಭಿಪ್ರೇರಣೆ, ಮನೆಯ ವಾತಾವರಣ, ಪೋಷಕ ಮಗುವಿನ ಸಂಬಂಧದ" – ಒಂದು ತೌಲನಿಕ ಅಧ್ಯಯನ. ಕುವೆಂಪು ವಿಶ್ವವಿದ್ಯಾನಿಲಯ, ಪಿಹೆಚ್.ಡಿ. ಸಂಶೋಧನಾ ಮಹಾಪ್ರಬಂಧ (2013)
- **Michal Benno A. :** " A study of certain correlates of Academic achievement among Scheduled caste students in the Union territory of Pondicherry" Ph.D. Thesis, Mysore University, (1994)
- **ಪಾಲನೇತ್ರ ಎಲ್. :** "ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಸಮಸ್ಯೆ ಹಾಗೂ ಶಾಲೆಯ ಮತ್ತು ಮನೆಯ ಹೊಂದಾಣಿಕೆಯ ಸಂಬಂಧಗಳ ಒಂದು ಅಧ್ಯಯನ". ಮೈಸೂರು ವಿಶ್ವವಿದ್ಯಾನಿಲಯ, ಪಿಹೆಚ್.ಡಿ. ಸಂಶೋಧನಾ ಮಹಾಪ್ರಬಂಧ (2000)
- **Shikha Dhall :** "A Study of Academic Achievement among Adolescents in relation to Achievement motivation and Home environment". Journal of AIAER. Vol 26. No 1, June 2014, ISSN 0970-9827, Page No 41 to 44
- **ವೆಂಕಟರಾಮು ಎಂ.ವಿ. :** "ರಾಜ್ಯಮಟ್ಟದ ಪ್ರೌಢಶಾಲಾ ಹಂತದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಂದ ಕರ್ನಾಟಕ ರಾಜ್ಯ ಸರ್ಕಾರ ಒದಗಿಸುತ್ತಿರುವ ಶೈಕ್ಷಣಿಕ ಸೌಲಭ್ಯಗಳ ಬಳಕೆ ಮತ್ತು ಈ ಸೌಲಭ್ಯಗಳ ಬಳಕೆಯಲ್ಲಿ ಮೈಸೂರು ಜಿಲ್ಲೆಯ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳು – ಒಂದು ವಿಮರ್ಶಾತ್ಮಕ ಅಧ್ಯಯನ" ವನ್ನು ನಡೆಸಿರುತ್ತಾರೆ.ಮೈಸೂರು ವಿಶ್ವವಿದ್ಯಾನಿಲಯ, ಪಿಹೆಚ್.ಡಿ. ಸಂಶೋಧನಾ ಮಹಾಪ್ರಬಂಧ (2011)
- **ವಾಮದೇವಪ್ಪ ಹೆಚ್. ವಿ. :** ಶಿಕ್ಷಣದಲ್ಲಿ ಮೌಲ್ಯಮಾಪನ ಮತ್ತು ಸಂಖ್ಯಾಶಾಸ್ತ್ರ. ಶ್ರೇಯಸ್ ಪಬ್ಲಿಕೇಶನ್ ದಾವಣಗೆರೆ (2010).
- **ಯಶೋಧರ.ಕೆ. :** ಶಿಕ್ಷಣದಲ್ಲಿ ಮೌಲ್ಯಮಾಪನ ಮತ್ತು ಸಂಖ್ಯಾಶಾಸ್ತ್ರ. ಶಿಬಾ ಪ್ರಕಾಶನ, ಮೈಸೂರು (2010)
- www.shodhaganga.com


■■

~~~~~~~~~~~~~~~~~~~~~~~~~~~~~~~~~~~~~~~~

– 6ನೇ ಪುಟದಿಂದ ಮುಂದುವರೆದುದು

## ಆಕರ ಗ್ರಂಥಗಳು


- **ಎಸ್. ವ್ಹಿ. ಪಾಟೀಲ :** ನಂದೇ ನಾ ಬರೆದೆ, (ಆತ್ಮಕತೆ)
- **ಎಸ್.ವ್ಹಿ. ಪಾಟೀಲ, ಲಿಂಗಾರಡ್ಡಿ ವಿ. :** ಶತನಾಟಕ ವೀರ,
- **ಪ್ರೊ. ವಾಣಿಶ್ರೀ ಪಾಟೀಲ :** ನಮ್ಮವರ ಕಥೆ ವ್ಯಥೆ,
- **ಎಸ್.ವ್ಹಿ. ಪಾಟೀಲ :** ತ್ಯಾಗಜೀವಿ,
- **ಎಸ್. ವ್ಹಿ. ಪಾಟೀಲ :** ಕಂಬನಿ ಧಾರೆ,



■■
~~~~~~~~~~~~~~~~~~~~~~~~~~~~~~~~~~~~~~~~

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ಬರ್ಟ್ರಾಂಡ ರಸ್ಸೆಲ್

## (BATRAND RUSSEL)

✍ **ಆರ್. ಎಸ್. ಪಾಟೀಲ,** ಎಚ್. ಸಿ. ಇ. ಎಸ್. ಕಾಲೇಜ್, ಗದಗ.



### ಜೀವನ

20ನೇ ಶತಮಾನದ ಶ್ರೇಷ್ಠ ತತ್ವ ಜ್ಞಾನಿಗಳಲ್ಲೊಬ್ಬರಾದ ಬರ್ಟ್ರಾಂಡ ರಸ್ಸೆಲ್‌ರು 1872 ಮೇ 18ರಂದು ವೇಲ್ಸ್‌ದಲ್ಲಿಯ ಟ್ರೆಲೆಕ್‌ದಲ್ಲಿ ಜನಿಸಿದರು. ಅವರು ಮೂರು ವರ್ಷದ ಮಗುವಿರುವಾಗಲೇ ತಂದೆ–ತಾಯಿಯರನ್ನು ಕಳೆದುಕೊಂಡರು. ಆದ್ದರಿಂದ ಅಜ್ಜ–ಅಜ್ಜಿಯರೇ ಅವರನ್ನು ಬಹಳ ಕಾಳಜಿಯಿಂದ ಬೆಳೆಸಿದರು. ಅವರು ಆ ಮಗುವಿಗೆ ಎಲ್ಲ ಉತ್ತಮ ಅವಕಾಶಗಳನ್ನು ಒದಗಿಸಿದರು. ಪ್ರಾರಂಭದ ಶಿಕ್ಷಣವನ್ನು ಮನೆಯಲ್ಲಿಯೇ ಒದಗಿಸಲಾಯಿತು. ನಂತರ ಸಾಂಪ್ರಾದಾಯಿಕ ಶಾಲೆಯಲ್ಲಿ ಕಲಿತರು. ಜರ್ಮನಿ ಮತ್ತು ಫ್ರೆಂಚ್ ಭಾಷೆಗಳನ್ನು ಚೆನ್ನಾಗಿ ಕಲಿತು ಟ್ರಿನಿಟಿ ಕಾಲೇಜ ಸೇರಿ ತತ್ವಶಾಸ್ತ್ರದಲ್ಲಿ ಪದವಿ ಪಡೆದರು. ಅವರ ಪಾಂಡಿತ್ಯವನ್ನು ಗುರುತಿಸಿ 'ರ್‍ಯಾಂಗ್ಲರ' ಪದವಿಯನ್ನು ನೀಡುವುದರ ಜೊತೆಗೆ 1895 ರಲ್ಲಿ ಕಾಲೇಜಿನ ಫೆಲೊ ಎಂದು ಗೌರವಿಸಲಾಯಿತು. ತತ್ವಶಾಸ್ತ್ರಜ್ಞರಾದರೂ ಅವರು ಬ್ರಿಟಿಷ್ ರಾಯಭಾರ ಕಛೇರಿಯಲ್ಲಿ ರಾಯಭಾರ ಕಾರ್ಯದೊಂದಿಗೆ ತಮ್ಮ ಉದ್ಯೋಗವನ್ನು ಪ್ರಾರಂಭಿಸಿದರು. ಈ ಕಾರ್ಯಭಾರದ ಕಾರಣದಿಂದಾಗಿಯೇ ಅವರು ಟ್ರಿನಿಟಿ ಕಾಲೇಜದ ಫೆಲೊ ಗೌರವವನ್ನು ಒಪ್ಪಿಕೊಳ್ಳಲಿಲ್ಲ.

ಗಣಿತ ಮತ್ತು ತತ್ವಶಾಸ್ತ್ರದಲ್ಲಿ ಅವರಿಗೆ ಅಪಾರ ಆಸಕ್ತಿ 1903 ರಲ್ಲಿ ಗಣಿತ ವಿಷಯದ ಬಗ್ಗೆ ಒಂದು ಪುಸ್ತಕವನ್ನು ಬರೆದರು. 1910 ರಲ್ಲಿ ಟ್ರಿನಿಟಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನೇಮಕಗೊಂಡರು. ಅವರ ಅಮೂಲ್ಯ ಕೊಡುಗೆಯನ್ನು ಗಮನಿಸಿ ಜಗತ್ತಿನ ಅತ್ಯುನ್ನತ ಪ್ರಶಸ್ತಿಯಾದ ನೊಬೆಲ್ ಪ್ರಶಸ್ತಿಯನ್ನು 1950 ರಲ್ಲಿ ಅವರಿಗೆ ಕೊಟ್ಟು ಗೌರವಿಸಲಾಯಿತು.

### ಅವರ ಮಹತ್ವದ ಕೃತಿಗಳು

ಬರ್ಟ್ರಾಂಡ ರಸ್ಸೆಲ್‌ರು ವಿವಿಧ ವಿಷಯಗಳಿಗೆ ಸಂಬಂಧಿಸಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅದರಲ್ಲಿ ಕೆಲವು ಪ್ರಮುಖ ಗ್ರಂಥಗಳನ್ನು ಇಲ್ಲಿ ಹೆಸರಿಸಲಾಗಿದೆ.

1. On Educaiton (1926).
2. The Outline of Philosophy (1928)
3. The Conquest of Happiness (1930)
4. Education and the Social Order (1932)
5. The New Hopes for Changing World (1951)

### ರೆಸ್ಸೆಲ್‌ರ ಶೈಕ್ಷಣಿಕ ವಿಚಾರಗಳು

ಮಕ್ಕಳು ಉಪಯುಕ್ತ ವ್ಯಕ್ತಿಗಳಾಗಿ ಬೆಳೆಯಬೇಕೆಂಬುದೇ ಅವರ ವಿಚಾರವಾಗಿತ್ತು, ಆದ್ದರಿಂದ ಶಿಕ್ಷಣವು ಮಕ್ಕಳಲ್ಲಿ ಚೈತನ್ಯ, ಧೈರ್ಯ, ಜಾಣತನ ಮತ್ತು ಅನುಭವ ಗ್ರಹಿಕೆ ಗುಣಗಳನ್ನು ತುಂಬುವ ಉದ್ದೇಶಗಳನ್ನು ಹೊಂದಿರಬೇಕೆಂಬುದೇ ಅವರ ವಿಚಾರ. ಇವು ಅವರ ಪ್ರಕಾರ ಶಿಕ್ಷಣ ಉದ್ದೇಶಗಳು ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

**a. ಚೈತನ್ಯ :** ಜೀವನವನ್ನು ಯೋಗ್ಯ ರೀತಿಯಲ್ಲಿ ಬದುಕುವ ಶಕ್ತಿಗೆ ಚೈತನ್ಯವೆಂದು ರಸ್ಸೆಲ್‌ರು ಕರೆದಿದ್ದಾರೆ. ಈ ಚೈತನ್ಯವೇ ಜನರನ್ನು ಕಾರ್ಯ ಮಾಡಲು ತೊಡಗಿಸುತ್ತದೆ. ಈ ಗುಣದಿಂದಾಗಿಯೇ ಜನರು ಸುಖಪಡುತ್ತಾರೆ. ಚೈತನ್ಯವಿಲ್ಲದವರು ಕಾರ್ಯ ಮಾಡಲಾರರು. ಇದಕ್ಕೆ ವಿರುದ್ಧವಾಗಿ ಚೈತನ್ಯವುಳ್ಳವರು ತಮ್ಮ ಯೋಜನೆಯಂತೆ ಕಾರ್ಯ ಪೂರ್ತಿ ಮಾಡಬಲ್ಲರು. ಈ ಚೈತನ್ಯವು ದೈಹಿಕ ಮತ್ತು ಮಾನಸಿಕವಾಗಿದೆ. ಈ ಗುಣವನ್ನು ಮಕ್ಕಳಲ್ಲಿ ತುಂಬುವುದು ಶಿಕ್ಷಣದ ಗುರಿಯಾಗಬೇಕು.

**b. ಧೈರ್ಯ :** ಇದೊಂದು ಮಾನಸಿಕ ಗುಣ. ಈ ಗುಣವು ಮನುಷ್ಯನಲ್ಲಿ ಗಂಡಾಂತರ ಎದುರಿಸುವ ಸ್ವಭಾವ ಬೆಳೆಸುತ್ತದೆ. ಧೈರ್ಯವಿದ್ದರೆ ಎಂಥವುಗಳ ವಿರುದ್ಧವಾದರೂ ಹೋರಾಡಬಹುದು. ಧೈರ್ಯದಿಂದಲೇ ಯುದ್ಧಗಳನ್ನು ಗೆಲ್ಲುತ್ತಾರೆ. ಸಾಮಾಜಿಕ ಉಪಯುಕ್ತತೆ ಹೊಂದಿರುವ ವರ್ತನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳುವ ಧೈರ್ಯವನ್ನು ಅವರಲ್ಲಿ ತುಂಬುವ ಗುರಿಯನ್ನು ಶಿಕ್ಷಣವು ಹೊಂದಿರಬೇಕು.

**c. ಜಾಣತನ :** ಮಕ್ಕಳಲ್ಲಿ ಜಾಣತನವನ್ನು ಬೆಳೆಸುವುದು ಶಿಕ್ಷಣದ ಪ್ರಮುಖ ಗುರಿಗಳಲ್ಲಿ ಒಂದಾಗಿರಬೇಕೆಂಬುದು ಬರ್ಟ್ರಾಂಡ ರಸ್ಸೆಲ್‌ರ ಅಭಿಪ್ರಾಯ. ವಸ್ತುಗಳನ್ನು ಮತ್ತು ಸಂದರ್ಭಗಳನ್ನು ತಿಳಿದುಕೊಳ್ಳುವ ಮತ್ತು ವಿಶ್ಲೇಷಣೆ ಮಾಡುವ ಗುಣಕ್ಕೆ ಜಾಣತನವೆನ್ನಬಹುದು. ಈ ಜಾಣತನದಿಂದಲೇ ಸಮಸ್ಯೆಗಳಿಗೆ ನಾವು ಪರಿಹಾರ ಹುಡುಕುಬಲ್ಲೆವು. ಇಂಥ ಜಾಣತನವನ್ನು ಶಿಕ್ಷಣವು ವಿದ್ಯಾರ್ಥಿಗಳಲ್ಲಿ ತುಂಬಬೇಕು.

**d. ಗ್ರಹಿಕೆ :** ಇದೊಂದು ಮಾನಸಿಕ ಗುಣ ಭಾವನೆಗಳಿಗೆ ಇದು ಸಂಬಂಧಿಸಿದೆ. ಈ ಗುಣಗ್ರಹಿಕೆಯಿಂದಲೇ ನಾವು ಸುಖ ಅಥವಾ ದುಃಖದ ಅನುಭವ ಪಡೆಯುತ್ತೇವೆ. ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಶ್ರೇಷ್ಠ ವ್ಯಕ್ತಿಗಳೆಲ್ಲ ಈ ಗುಣವನ್ನು ಹೊಂದಿರುತ್ತಾರೆ. ಶಿಕ್ಷಣವು ಮಕ್ಕಳಲ್ಲಿ ಇಂಥ ಗ್ರಹಿಕೆ ಗುಣವನ್ನು ಬೆಳೆಸುವ ಉದ್ದೇಶ ಹೊಂದಿರಬೇಕು.

### ಶಿಕ್ಷಣದ ವಿವಿಧ ಹಂತಗಳು

ಬರ್ಟ್ರಾಂಡ ರಸ್ಸೆಲ್‌ರು ಶಿಕ್ಷಣವನ್ನು ವಿವಿಧ ಹಂತಗಳಲ್ಲಿ ವಿಂಗಡಿಸಿದ್ದಾರೆ. ದೈಹಿಕ ಮತ್ತು ಮಾನಸಿಕ ಸಂಗತಿಗಳನ್ನು ಅವಲಂಬಿಸಿ ಆ ಹಂತಗಳನ್ನು ಹೇಳಿದ್ದಾರೆ. ಪ್ರತಿಹಂತದಲ್ಲಿಯ ಶಿಕ್ಷಣದ ಅವಶ್ಯಕತೆಗಳನ್ನು ಅವರು ವಿವರವಾಗಿ ಕೊಟ್ಟಿದ್ದಾರೆ. ಆ ಹಂತಗಳನ್ನು ಇಲ್ಲಿ ವಿವರಿಸಲಾಗಿದೆ.

**I. ಬಾಲವಾಡಿ ಶಿಕ್ಷಣ :** ರಸ್ಸೆಲ್‌ರ ಪ್ರಕಾರ ಬಾಲವಾಡಿ ಶಿಕ್ಷಣದ ಹಂತವು ನಾಲ್ಕು ವರ್ಷ ವಯಸ್ಸಿನವರೆಗಿನ ಮಕ್ಕಳಿಗೆ ಕೊಡುವ ಶಿಕ್ಷಣವಾಗಿದೆ. ಶಿಕ್ಷಣದ ಈ ಹಂತವು ಬಹು ಮಹತ್ವದ್ದು. ಆದರೆ ಪಾಲಕರು ಈ ಹಂತದ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುವುದಿಲ್ಲ. ಆಗಿನ ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳೇ ಇದಕ್ಕೆ ಕಾರಣವೆಂಬುದು ಅವರಿಗೆ ತಿಳಿದಿತ್ತು. ಆದ್ದರಿಂದ ನರ್ಸರಿ ಶಾಲೆಗಳನ್ನು ವ್ಯಾಪಕವಾಗಿ ಪ್ರಾರಂಭಿಸಬೇಕೆಂದು ಸೂಚಿಸಿದರು. ಆ ಶಾಲೆಗಳಲ್ಲಿ ಅವಶ್ಯಕವಾದ ಸೌಲಭ್ಯಗಳನ್ನು ಪೂರೈಸಬೇಕು. ಜೀವನದಲ್ಲಿ ಉಪಯಕ್ತವಾದ ಹವ್ಯಾಸಗಳನ್ನು ಇಲ್ಲಿ ಮಕ್ಕಳು ಕಲಿಯುವಂತಾಗಬೇಕು. ಅಲ್ಲಿಯ ಶಿಕ್ಷಣವು ಓದು

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಬರಹಕ್ಕೆ ಸೀಮಿತವಾಗಬಾರದು. ಈ ಹಂತದ ಶಿಕ್ಷಣದ ಪಠ್ಯಕ್ರಮವು ಸರಳ ಮತ್ತು ಮಕ್ಕಳ ಆಸಕ್ತಿಗೆ ತಕ್ಕ ವಿಷಯಗಳನ್ನು ಒಳಗೊಂಡಿರಬೇಕು. ಅದರಲ್ಲಿ ಹವ್ಯಾಸ ರೂಢಿಸಿಕೊಳ್ಳುವಿಕೆ, ಓದು ಬರಹ, ತಿಳುವಳಿಕೆಯ ತರಬೇತಿ, ಸಂಗೀತ ಮತ್ತು ನೃತ್ಯದ ಪ್ರಾಥಮಿಕ ಜ್ಞಾನ. ಚಿತ್ರಕಲೆ ಮುಂತಾದ ವಿಷಯಗಳಿರಬೇಕೆಂಬುದು ಅವರ ಅಭಿಪ್ರಾಯ.

**II. ಪ್ರೌಢ ಶಿಕ್ಷಣ :** ಈ ಹಂತದ ಶಿಕ್ಷಣವು ರಸ್ಸೆಲ್‌ರ ಪ್ರಕಾರ ನಾಲ್ಕು ವರ್ಷದಿಂದ ಪ್ರಾರಂಭವಾಗಿ ಹದಿನೆಂಟು ವರ್ಷಗಳವರೆಗೆ ಮುಂದುವರಿಯುತ್ತದೆ. ಈ ಹಂತದ ಶಿಕ್ಷಣವನ್ನು ಅವರು ಎರಡು ಉಪ ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ. 5 ರಿಂದ 14 ವರ್ಷದವರೆಗಿನ ಶಿಕ್ಷಣ ಮತ್ತು 14 ರಿಂದ 18 ವರ್ಷದವರೆಗಿನ ಶಿಕ್ಷಣವೆಂದು ಎರಡು ಉಪ ಗುಂಪುಗಳನ್ನಾಗಿ ಮಾಡಿ ಅವುಗಳ ಬಗ್ಗೆ ವಿಂಗಡಿಸಿದ್ದಾರೆ.

**A. 5 ರಿಂದ 14 ವರ್ಷದವರೆಗಿನ ಶಿಕ್ಷಣ :** ಈ ಅವಧಿಯಲ್ಲಿ ಮಕ್ಕಳನ್ನು ಚೆನ್ನಾಗಿ ತರಬೇತಿಗೊಳಿಸಬೇಕು. ಅಂದರೆ ಮಾತ್ರ ಅವರು ಮುಂದಿನ ನಾಗರಿಕ ಜೀವನಕ್ಕೆ ಬೇಕಾದ ಸದ್ಗುಣಗಳನ್ನು ಪಡೆಯಬಲ್ಲರು. ಅವನ ದೈಹಿಕ ಮತ್ತು ಮಾನಸಿಕ ಅವಶ್ಯಕತೆಗಳಿಗೆ ತಕ್ಕಂತೆ ವಿಷಯಗಳನ್ನು ಈ ಹಂತದಲ್ಲಿ ಕಲಿಸುವುದು ಅವಶ್ಯ. ಭಾಷೆ, ಭೂಗೋಲ, ಇತಿಹಾಸ, ಗಣಿತ, ಅರ್ಥಶಾಸ್ತ್ರ, ಕೃಷಿಶಾಸ್ತ್ರ, ಸಂಗೀತ ಮತ್ತು ನೃತ್ಯ, ವಿಜ್ಞಾನ ಮುಂತಾದ ವಿಷಯಗಳನ್ನು ಈ ಹಂತದ ಶಿಕ್ಷಣದ ಪಠ್ಯಕ್ರಮದಲ್ಲಿ ಕೂಡಿಸಬೇಕೆಂಬುದು ಅವರ ಅಭಿಲಾಷೆಯಾಗಿತ್ತು

**B. 14 ರಿಂದ 18 ವರ್ಷದವರೆಗಿನ ಶಿಕ್ಷಣ :** ಈ ಹಂತದಲ್ಲಿ ವಿದ್ಯಾರ್ಥಿಗಳು ನಿರ್ದಿಷ್ಟ ವಿಷಯದಲ್ಲಿ ಪರಿಣತಿ ಪಡೆಯುವಂಥ ಶಿಕ್ಷಣ ಕೊಡಬೇಕಾಗುತ್ತದೆ. ವೈಶಿಷ್ಟ್ಯತೆಯನ್ನು ಸಾಧಿಸುವ ಮೊದಲು ವಿದ್ಯಾರ್ಥಿಯ ಬುದ್ಧಿಮತ್ತೆಯನ್ನು ಪರೀಕ್ಷಿಸಬೇಕಾಗುತ್ತದೆ, ಅವಶ್ಯಕ ಬುದ್ಧಿಮಟ್ಟವನ್ನು ಹೊಂದಿರದ ವಿದ್ಯಾರ್ಥಿಯನ್ನು ವಿಶಿಷ್ಟ ಶಿಕ್ಷಣ ಪಡೆಯಲು ಅವಕಾಶ ಕೊಡಬಾರದೆಂಬುದು ಅವರ ವಿಚಾರ.

## ಈ ಹಂತದ ಶಿಕ್ಷಣದ ಪ್ರಮುಖ ತತ್ವಗಳು

ವಿದ್ಯಾರ್ಥಿಗಳ ದೃಷ್ಟಿಕೋನವನ್ನು ಬದಲಾಯಿಸುವಂಥ ಶಿಕ್ಷಣವು ಈ ಹಂತದಲ್ಲಿರಬೇಕು. ಇದನ್ನು ಸಾಧಿಸಲು ಈ ತತ್ವಗಳನ್ನು ಅವರು ಕೊಟ್ಟಿದ್ದಾರೆ.

**1. ವೈಶಿಷ್ಟ್ಯತೆಯ ಸೌಲಭ್ಯ :** ಈ ಹಂತದಲ್ಲಿ ವೈಶಿಷ್ಟ್ಯತೆಯು ಪ್ರಾರಂಭವಾಗುತ್ತದೆ. ವಿದ್ಯಾರ್ಥಿಯ ಬುದ್ಧಿಮಟ್ಟ ವನ್ನಲಂಬಿಸಿ ಈ ವೈಶಿಷ್ಟ್ಯತೆಯು ಕಾರ್ಯರೂಪಕ್ಕೆ ಬರಬೇಕು. ಸಾಹಿತ್ಯ ಇತಿಹಾಸ ಮುಂತಾದ ವಿಷಯಗಳಲ್ಲಿ ಅವರು ವೈಶಿಷ್ಟ್ಯತೆ ಪಡೆಯಲು ಪ್ರಯತ್ನಿಸಬಹುದು. ಈ ವೈಶಿಷ್ಟ್ಯತೆಯು ವಿದ್ಯಾರ್ಥಿಯ ಆಸಕ್ತಿಗನುಗುಣವಾಗಿರಬೇಕೆಂಬುದು ಇಲ್ಲಿ ಗಮನಿಸಬೇಕಾದ ಸಂಗತಿ.

**2. ಕ್ರಿಯಾಶೀಲರಾಗಿ ಪಾಲ್ಗೊಳ್ಳುವಿಕೆ :** ವಿದ್ಯಾರ್ಥಿಗಳು ಕಲಿಯುವ ಕ್ರಮದಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳಬೇಕು. ಅವರು ಸುಪ್ತ ಕೇಳುಗರಾಗಬಾರದು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರೆ ಮಾತ್ರ ಕಲಿಸುವ ಕ್ರಿಯೆಯು ಯಶಸ್ವಿಯಾಗಬಲ್ಲದು. ಈ ಹಂತದಲ್ಲಿ ರಸ್ಸೆಲ್‌ರು ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಬಯಸಲಿಲ್ಲ. ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಗುಣಗಳು ಬೆಳೆಯುವಂಥ ಪರಿಸರ ನಿರ್ಮಾಣವಾಗಬೇಕೆಂಬುದು ಅವರ ವಿಚಾರ.

**3. ಶಾಲೆಯು ಒಂದು ಸಮಾಜ :** ವಿದ್ಯಾರ್ಥಿಗಳು ಸಾಮಾಜಿಕ ಗುಣಗಳನ್ನು ಬೆಳೆಸಿಕೊಳ್ಳುವುದು ಅವಶ್ಯ. ಇದನ್ನು ಸಾಧಿಸಲು ಶಾಲೆಯು ಒಂದು ಸಮಾಜದಂತಿರಬೇಕೆಂಬುದು ರಸ್ಸೆಲ್‌ರ ಅಭಿಪ್ರಾಯ. ಸಮಾಜವು ವಿಶಾಲವಾದುದು ಆದರೆ ಶಾಲೆಯು ಚಿಕ್ಕದು. ವಿದ್ಯಾರ್ಥಿಗಳು ತಮ್ಮ ಭಾವಿ ಜೀವನದಲ್ಲಿ ಎದುರಿಸುವ ಸಮಸ್ಯೆಗಳನ್ನು ಈಗ ಈ ಚಿಕ್ಕ ಸಮಾಜದಲ್ಲಿ ಎದುರಿಸಬೇಕು. ಅಂದರೆ ಅವರು ಮುಂದಿನ ದಿನಗಳಲ್ಲಿ ಬರುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಬಲ್ಲರು. ಈ ವಿಚಾರದಲ್ಲಿ ರಸ್ಸೆಲ್‌ರು ಜಾನ ಡ್ಯೂಯಿಗೆ ಸಮೀಪವೆನಿಸುತ್ತಾರೆ.

**4. ಸ್ವಂತ ವಿಚಾರ :** ಅವರು ವ್ಯಕ್ತಿತ್ವದ ಬೆಳವಣಿಗೆಗೆ ಮಹತ್ವ ಕೊಟ್ಟರು. ಆದ್ದರಿಂದ ಶಾಲೆಗಳು ಮಕ್ಕಳಲ್ಲಿ ಸ್ವತಂತ್ರ ವಿಚಾರಗಳನ್ನು ಬೆಳೆಸಬೇಕೆಂಬುದು ಅವರ ವಿಚಾರ. ಮುಕ್ತ ವಿಚಾರ ವಿನಿಮಯಕ್ಕೆ ಸ್ವಾತಂತ್ರ್ಯವಿರಬೇಕು. ಇದರಿಂದಾಗಿ ಅವರು ಯೋಗ್ಯ ವಿಚಾರಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಇದರ ಪರಿಣಾಮವಾಗಿ ವೈಯಕ್ತಿಕತೆಯನ್ನು ಕಾಯ್ದುಕೊಳ್ಳಲು ಅನುಕೂಲವಾಗುತ್ತದೆ.

**5. ಸತ್ಯಾನ್ವೇಷಣೆ :** ಬರ್ಟ್ರಾಂಡ ರಸ್ಸೆಲ್ ಒಬ್ಬ ತತ್ವಜ್ಞಾನಿ. ಅತ್ಯುನ್ನತ ಮೌಲ್ಯಗಳನ್ನು ಹೊಂದುವುದೇ ಅವರ ಗುರಿ. ಸತ್ಯವು ಅತ್ಯಂತ ಉನ್ನತ ಮೌಲ್ಯ. ಇಂಥ ಸತ್ಯವನ್ನು ಅರಸುವುದು ಮತ್ತು ಪಾಲಿಸುವುದಕ್ಕೆ ಅವರು ಹೆಚ್ಚಿನ ಮಹತ್ವ ಕೊಟ್ಟರು. ಸ್ವತಂತ್ರ ವಿಚಾರದಿಂದ ಈ ಸತ್ಯಾನ್ವೇಷಣೆ ಸಾಧ್ಯವೆಂಬುದು ಅವರ ಅಭಿಪ್ರಾಯ. ಆದ್ದರಿಂದ ವಿದ್ಯಾರ್ಥಿಗಳಿಗೆ ಸ್ವತಂತ್ರ ವಿಚಾರಕ್ಕೆ ಅವಕಾಶ ಕೊಡಬೇಕು.

## ಪಠ್ಯಕ್ರಮ

ಈ ಹಂತದ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಏನನ್ನು ಕಲಿಯಬೇಕೆಂಬುದರ ಬಗ್ಗೆ ರಸ್ಸೆಲ್‌ರು ವಿವರವಾಗಿ ಹೇಳಿದ್ದಾರೆ. ಗಣಿತ,ವಿಜ್ಞಾನ, ಭಾಷೆ, ಸಾಹಿತ್ಯ, ಇತಿಹಾಸ, ಶರೀರ ಶಾಸ್ತ್ರ ಮುಂತಾದ ವಿಷಯಗಳನ್ನು ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ತಕ್ಕಂತೆ ಆಯ್ಕೆ ಮಾಡಿಕೊಂಡು ಕಲಿಯಬಹುದು.

**III. ಉಚ್ಚ ಶಿಕ್ಷಣ :** ಉಚ್ಚ ಶಿಕ್ಷಣದ ಬಗೆಗೂ ರಸ್ಸೆಲ್‌ರು ಅನೇಕ ಮಹತ್ವದ ವಿಚಾರಗಳನ್ನು ಕೊಟ್ಟಿದ್ದಾರೆ. ಅರ್ಹರಾದವರಿಗೆಲ್ಲ ಉಚ್ಚ ಶಿಕ್ಷಣ ದೊರೆಯಬೇಕೆಂಬುದು ಅವರ ವಿಚಾರ. ಉಚ್ಚಶಿಕ್ಷಣಕ್ಕೆ ವಿದ್ಯಾರ್ಥಿಗಳ ಆಯ್ಕೆಯಾಗಬೇಕು. ಈ ಹಂತದ ಶಿಕ್ಷಣಕ್ಕೆ ಸಂಬಂಧಿಸಿದ ಅವರ ವಿಚಾರಗಳು ಹೀಗಿವೆ –

**1. ಉಚ್ಚ ಶಿಕ್ಷಣದ ಉದ್ದೇಶಗಳು :** ವಿದ್ಯಾರ್ಥಿಗಳನ್ನು ವಿವಿಧ ಉದ್ಯೋಗಗಳಿಗೆ ಸಿದ್ಧಗೊಳಿಸುವ ಕಾರ್ಯ ಈ ಹಂತದಲ್ಲಿ ನಡೆಯುತ್ತದೆ. ಇದರ ಜೊತೆಗೆ ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡುವ ಗುಣ ರೂಢಿಸಿಕೊಳ್ಳಬೇಕು. ವಿವಿಧ ವಿಷಯಗಳಲ್ಲಿ ವೈಶಿಷ್ಟ್ಯತೆ ಪಡೆಯುವುದು ಮಹತ್ವದ್ದು, ಕಲಿಕೆ ಮತ್ತು ಸಂಶೋಧನೆಗಳಿಗೆ ಇಲ್ಲಿ ಹೆಚ್ಚಿನ ಸ್ಥಾನ. ಇಂಥ ಈ ಉಚ್ಚ ಶಿಕ್ಷಣವು ಪ್ರಮುಖವಾಗಿ ಎರಡು ಗುರಿಗಳನ್ನು ಹೊಂದಿರಬೇಕು. (a) ವಿದ್ಯಾರ್ಥಿಗಳನ್ನು ವೈಶಿಷ್ಟ್ಯತೆ ಪಡೆದ ವೃತ್ತಿ ಮತ್ತು ಉದ್ಯೋಗಗಳಿಗೆ ಸಿದ್ಧಗೊಳಿಸುವುದು. (b) ಕಲಿಕೆ ಮತ್ತು ಸಂಶೋಧನಾ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.

**2. ಆಯ್ಕೆಯ ಮೂಲಕ ಉಚ್ಚ ಶಿಕ್ಷಣ :** ಈ ಹಂತದ ಶಿಕ್ಷಣದಲ್ಲಿ ವಿಷಯ ವೈಶಿಷ್ಟ್ಯತೆ ಪ್ರಾರಂಭವಾಗುವುದರಿಂದ ಉಚ್ಚ ಶಿಕ್ಷಣವನ್ನು ಎಲ್ಲರಿಗೂ ಕೊಡುವುದು ಯೋಗ್ಯವಲ್ಲ ಪ್ರೌಢ ಶಿಕ್ಷಣ ಮುಗಿಸಿದ ಪ್ರತಿಭಾವಂತರನ್ನು ಮಾತ್ರ ಈ ಹಂತಕ್ಕೆ ಆಯ್ಕೆ ಮಾಡಬೇಕು. ಪ್ರತಿಭೆಯುಳ್ಳವರನ್ನು ಮಾತ್ರ ಆಯ್ಕೆ ಮಾಡಬೇಕು. ಹಣ ಕೊಡಲು ಶಕ್ಯವಿದ್ದರೂ ಪ್ರತಿಭೆಯಿರದಿದ್ದರೆ ಅಂಥವರು ಉಚ್ಚ ಶಿಕ್ಷಣಕ್ಕೆ ಯೋಗ್ಯರಲ್ಲ. ಅಂಥವರನ್ನು ಈ ಹಂತದ ಶಿಕ್ಷಣಕ್ಕೆ ಸೇರಿಸಬಾರದೆಂಬುದು ಅವರ ವಿಚಾರ.

■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

– 33 ನೇ ಪುಟದಿಂದ ಮುಂದುವರೆದುದು

ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಸಾಧನಾ ಅಭಿಪ್ರೇರಣೆ ನಡುವೆ ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧವಿರುವುದು ಕಂಡುಬಂದಿದೆ.

6. ನಗರ ಪ್ರದೇಶದ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಹಾಗೂ ಶೈಕ್ಷಣಿಕ ಸಾಧನಾ ಅಭಿಪ್ರೇರಣೆ ನಡುವೆ ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧವಿರುವುದು ಕಂಡುಬಂದಿದೆ.

## ಉಪಸಂಹಾರ

ಪ್ರಸ್ತುತ ಸಂಶೋಧನೆಯಲ್ಲಿ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ವಿದ್ಯಾಲಯಗಳ 8ನೇ ತರಗತಿ ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಧನೆ ಮತ್ತು ಸಾಧನಾ ಅಭಿಪ್ರೇರಣೆಯ ನಡುವೆ ಧನಾತ್ಮಕ ಮತ್ತು ಮಹತ್ವಪೂರ್ಣ ಸಹಸಂಬಂಧವಿರುವುದು ಕಂಡುಬಂದಿದೆ. ಶಾಲೆಯಲ್ಲಿ ಶಿಕ್ಷಕರು ಸಾಧನಾ ಅಭಿಪ್ರೇರಣೆಗೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮುಖಾಂತರ ಉತ್ತಮವಾದ ಸಾಧನಾ ಅಭಿಪ್ರೇರಣೆಯನ್ನು ಒದಗಿಸಿದರೆ, ವಿದ್ಯಾರ್ಥಿನಿಯರಲ್ಲಿ ಉತ್ತಮವಾದ ಶೈಕ್ಷಣಿಕ ಸಾಧನೆಯನ್ನುಂಟುಮಾಡಲು ಸಾಧ್ಯವಾಗುತ್ತದೆ ಎಂದು ತೀರ್ಮಾನಿಸಬಹುದು.

## ಆಕರ ಗ್ರಂಥಗಳು


- **ಲಕ್ಷ್ಮೀ ಎನ್. :** ಶೈಕ್ಷಣಿಕ ಸಂಖ್ಯಾ ಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ, 2005
- **ಮಂಜುಳಾ ಡಿ. :** ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಹೊಂದಿರುವ ಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ, ಅಭಿಪ್ರೇರಣೆ, ಮನೆಯ ವಾತಾವರಣ, ಪೋಷಕ ಮಗುವಿನ ಸಂಬಂಧದ ಒಂದು ತೌಲನಿಕ ಅಧ್ಯಯನ, ಕುವೆಂಪು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ಸಂಶೋಧನಾ ಮಹಾ ಪ್ರಬಂಧ, 2013
- **Micheal Benno :** A a study of certain correlates of Academic Achievement among Schedule caste students in the Union Territory of Pondichery, Ph.D Thesis, Mysore University, 1994.
- **Shikha Dhall :** A study of Academic Achievement among Adolescents in relation to achievement motivation and Home Environment, 2014. (Journal, Vol 26, No 1, June 2014, ISSN 0970-9827, page No. 41 to 44)
- **Thirumala Rao :** Impact of Mental Health and achievement motivation on academic achievement of adolescents, Ph.D thesis, Venkateshwara University, Tirupathi, 2005.
- **ವಾಮದೇವಪ್ಪ ಹೆಚ್. ವಿ. :** ಶಿಕ್ಷಣದಲ್ಲಿ ಮೌಲ್ಯ ಮಾಪನ ಮತ್ತು ಸಂಖ್ಯಾಶಾಸ್ತ್ರ, ಶ್ರೇಯಸ್ ಪಬ್ಲಿಕೇಷನ್, ದಾವಣಗೆರೆ 2010
- **ಯಶೋಧರ ಕೆ. :** ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ, ಶೀಬಾ ಪ್ರಕಾಶನ, ಮೈಸೂರು, 2007
- **KGBV Shikshakara Kaipidi :** A training model for teachers working in Kasturba Gandhi Balika Vidhyalaya published by State Project Director, SSA, Karnataka, Bengaluru 2010
- ssa.nic.karnataka.gov.in>html>int-kgbv
- www.ssa.in.nic.in.doc.kgbv



**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

*ಚಂದಾ ವಿವರ :*

| | | |
|---|---|---|
| ವಾರ್ಷಿಕ ಚಂದಾ | 500/- | ☐ |
| ತ್ರೈವಾರ್ಷಿಕ ಚಂದಾ | ₹ 1500/- | ☐ |
| ಆಜೀವ ಸದಸ್ಯತ್ವ | ₹ 5000 /- | ☐ |

*ಚಂದಾದಾರರು :*

**ವಿದ್ಯಾನಿಧಿ ಪ್ರಕಾಶನ, ಗದಗ.**

ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

ಡಿ.ಡಿ. ಕಳುಹಿಸಬೇಕಾದ ವಿಳಾಸ :

**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

ವಿದ್ಯಾನಿಧಿ ಪ್ರಕಾಶನ

ಸ್ಟೇಶನ್ ರೋಡ ಮತ್ತು 'ನನಸು' ಜೆ.ಟಿ.ಮಠ ರೋಡ,

ಗದಗ – 582101. ಕರ್ನಾಟಕ ರಾಜ್ಯ

ಫೋನ್ : 08372–237527, 277527

Email : shikshansoudha@gmail.com

**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

ನೂತನ ಚಂದಾದಾರರ ನೋಂದಣಿ ಪ್ರತಿ

Date :

Name :

Designation :

Institution :

Address :

Phone Cell Nos.:

e-mail :

D.D. No. : Dated :

Amount : Bank :

*Institution's Signature*